ಶೂದ್ರ

"Every superior human being will instinctively aspire after a secrct citadel where he is 'Set free' from the crowd, the many, the majority, where, as its exception, he may forget the rule 'man'-except in the one case in which, as a man of knowledge in the great and exceptional sense, he will be impelled by an even stronger instinct to make straight for this rule"

- NIETZSCHE

ಈ ಸಂಚಿಕೆಯಲ್ಲಿ :

ಡಿ.ಎಲ್. ನಾಗಭೂಷಣಸ್ವಾಮಿ —ಜಿ. ರಾಜಶೇಖರ್ —ಎಚ್.ಎಸ್ ವೆಂಕಟೇಶಮೂರ್ತಿ —ಪ್ರಸನ್ನ —ರಾಜೇಂದ್ರ ಚೆನ್ನಿ —ಎಚ್. ಎಸ್. ಶಿವಪ್ರಕಾಶ್ —ಸುಲೋಚನ ಜಿ. ರಾವ್ —ಕೆ. ಎಸ್. ಪೂರ್ಣಿಮ ಕೆ.ಪಿ. ಮೃತ್ಯುಂಜಯ —ರವೀಂದ್ರಭಟ್ಟ ಕುಳಿಬೀಡು—ಕೆ.ಎಸ್.ರಾಧಾಕೃಷ್ಣ ಜಿ.ವಿ. ಆನಂದಮೂರ್ತಿ -ಸ್ವಾಮಿನಾಥ್—ಉತ್ತನೂರು ರಾಜಮ್ಮ ವಿ. ಶೆಟ್ಟಿ ಬಂದಗದ್ದೆ ರಾಧಾಕೃಷ್ಣ —ಎಸ್. ಎಸ್. ಪ್ರಸಾದ್ —ಅಳಗುಂಡಿ ಅಂದಾನಯ್ಯ — ಸವಿತಾ ನಾಗಭೂಷಣ — ಆರ್. ವಿಜಯ ರಾಘವನ್ ಕನಸಿಗೊಂದು ಕಣ್ಣು — ಸುದ್ದಿಯ ಗುಡ್ಡಾಟ—ದೊಡ್ಡರಂಗೇಗೌಡ.

ಹದಿನಾಲ್ಕನೆಯ ವರ್ಷದ ನೆನಪಿನ ಸಂಚಿಕೆ

'ಮುಕ್ತ' ಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 3-4 ಜನವರಿ-ಫೆಬ್ರವರಿ 1987 ಸಂಪುಟ : 13

ಸಹಾಯಕ ಸಂಪಾದಕರು : ನಿರ್ಮಲಾರೆಡ್ಡಿ-ಆನಂದಮೂರ್ತಿ-ಮಹೇಶ್
—ಉತ್ತನೂರು ರಾಜಮ್ಮ ವಿ. ಶೆಟ್ಟಿ

ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾ ಕಳಿಸಿ. ಲೇಖನ ಕಳಿಸುವಾಗ
15 ಪೈಸೆಯ ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳಿಸುವವರು
2 ರೂ ಹೆಚ್ಚುವರಿ ತುಂಬಿ.

ವಾರ್ಷಿಕ ಚಂದಾ : 25 ರೂ. (ಸಂಸ್ಥೆಗಳಿಗೆ ಹಾಗೂ ಪುಸ್ತಕ ಭಂಡಾರಗಳಿಗೆ
30 ರೂ) ಆಜೀವ ಚಂದಾ : 250 ರೂ (ಐದು ಕಂತುಗಳಲ್ಲಿ)

ಶೂದ್ರ ಶ್ರೀನಿವಾಸ್, ಸುದ್ದುಗುಂಟೇಪಾಳ್ಯ, ಡಿ.ಆರ್. ಕಾಲೇಜ್ (ಅಂಚೆ)
ಬೆಂಗಳೂರು–560 029

ಮುಖಪುಟ ಹಾಗೂ ಹಿಂಬದಿ ಪುಟದ ಕಲಾವಿದರು ಹೆಬ್ಬಾರ್,
ಕೃಪೆ : ಎನ್ ಮರಿಶಾಮಾಚಾರ್.

ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ 'ಶೂದ್ರ'ಗೆ
ಶುಭಾಶಯಗಳು

ಬಿ. ಎಲ್. ಶಂಕರ್
ವೈ. ಎಸ್. ವಿ. ದತ್ತ
ವಿ. ಎಸ್. ಉಗ್ರಪ್ಪ
ಟಿ. ಗೋವರ್ಧನ

ಎರಿಕ್ ಫ್ರಾಂ ವಿಚಾರಗಳು

ಸಾವಿನ ವ್ಯಾಮೋಹ ಮತ್ತು ಬದುಕಿನ ಪ್ರೀತಿ

—ಓ. ಎಲ್. ನಾಗಭೂಷಣಸ್ವಾಮಿ

ಸಾವಿನ ಬಗ್ಗೆ ಇರುವ ವ್ಯಾಮೋಹ (ನೆಕ್ರೊಫೀಲಿಯ), ಆತ್ಮರತಿ (ನಾರ್ಸಿಸಿಸಂ) ಮತ್ತು ತಾಯಿಯ ಬಗ್ಗೆ ಇರುವ ವ್ಯಾಮೋಹ (ಸಿಂಬಿಯಾಟಿಕ್ ಫಿಕ್ಸೇಷನ್ ಟು ಮದರ್) ಇವು ಮೂರು ಪ್ರವೃತ್ತಿಗಳು ಜೀವ ವಿರೋಧಿಗಳು, ಎಲ್ಲ ಕೆಡುಕಿನ ಮೂಲವಾಗಿರುವಂಥವು, ವ್ಯಕ್ತಿಯ ಮತ್ತು ಸಮಾಜದ ರೋಗಕ್ಕೆ ಕಾರಣವಾಗಿರುವಂಥವು. ಬದುಕಿನ ಬಗ್ಗೆ ಈ ಮೂರೂ ಪ್ರವೃತ್ತಿಗಳು ಸೇರಿರುವಂಥ ನಿಲುವು ಹುಟ್ಟಿಕೊಂಡರೆ ಆಗ ವ್ಯಕ್ತಿಯೂ ಸಮಾಜವೂ ಕೊಳೆಯತೊಡಗುತ್ತದೆ.

ನೈತಿಕವಾಗಿ ಮತ್ತು ಮಾನಸಿಕವಾಗಿ ಮನುಷ್ಯರನ್ನು ಸಾವಿನ ಬಯಕೆಯುಳ್ಳವರು ಮತ್ತು ಬದುಕನ್ನು ಪ್ರೀತಿಸುವವರು ಎಂದು ಎರಡುಗುಂಪು ಮಾಡಬಹುದು. ಸಂಪೂರ್ಣವಾಗಿ ಸಾವಿನ ವ್ಯಾಮೋಹವುಳ್ಳವರು ಹುಚ್ಚರಾಗಿರುತ್ತಾರೆ, ಸಂಪೂರ್ಣವಾಗಿ ಬದುಕನ್ನು ಪ್ರೀತಿಸುವವರು ಸಂತರಾಗಿರುತ್ತಾರೆ. ಹೀಗೆ ಶುದ್ಧ ರೂಪದಲ್ಲಿ ಈ ನಿಲುವುಗಳನ್ನು ಹೊಂದಿರುವ ಜನ ಕಡಮೆ. ಜನರಲ್ಲಿ ಸಾಮಾನ್ಯವಾಗಿ ಸಾವಿನ ಬಯಕೆಯೂ ಬದುಕಿನ ಪ್ರೀತಿಯೂ ಬೆರೆತಿರುತ್ತವೆ. ಆದರೆ ಈ ಬೆರಕೆಯಲ್ಲಿ ಯಾವುದರ ಪ್ರಮಾಣ ಹೆಚ್ಚಾಗಿದೆ, ಯಾವುದು ಅವರ ಎಲ್ಲ ವರ್ತನೆಯನ್ನೂ ಪ್ರಭಾವಿಸುತ್ತದೆ ಎಂಬುದು ಮುಖ್ಯ.

'ಹೆಣದ ಬಗ್ಗೆ ಸತ್ತವರ ಬಗ್ಗೆ ಇರುವ ಮೋಹ' ಎಂಬುದು ನೆಕ್ರೊಫೀಲಿಯ ಎಂಬ ಪದದ ಅಕ್ಷರಶಃ ಅರ್ಥ. ಸಾಮಾನ್ಯವಾಗಿ ಈ ಪದವನ್ನು ಲೈಂಗಿಕ ವಿಕೃತಿಯನ್ನು ಸೂಚಿಸಲು ಬಳಸುವುದುಂಟು. ಹೆಣದ ಜೊತೆ ಸಂಭೋಗಿಸುವ ಆಸೆ ನೆಕ್ರೊಫೀಲಿಯ ಎನಿಸಿಕೊಳ್ಳುತ್ತದೆ. ಆದರೆ ಯಾವುದೇ ಬಗೆಯ ಲೈಂಗಿಕ ವಿಕೃತಿಯು ಆಳಮನಸ್ಸು ಬದುಕಿನ ಬಗ್ಗೆ ತಾಳುವ ನಿಲುವಿನಿಂದ ಮೂಡಿ ಹೊರಗೆ ಕಾಣಿಸಿಕೊಳ್ಳುವ ಒಂದು

ಓ. ಎಲ್. ನಾಗಭೂಷಣಸ್ವಾಮಿ, ಇಂಗ್ಲಿಷ್ ಉಪನ್ಯಾಸಕ, ಸಹ್ಯಾದ್ರಿ ಕಲಾ ಕಾಲೇಜು ಶಿವಮೊಗ್ಗ.

ರೂಪವಷ್ಟೆ ಆಗಿರುತ್ತದೆ. ಯಾವ ಬಗೆಯ ಲೈಂಗಿಕ ವಿಕೃತಿಯಿಲ್ಲದೆಯೂ ಸಾವಿನ ಬಯಕೆ ಬೇರೆ ಬೇರೆ ಪ್ರಮಾಣದಲ್ಲಿ ವ್ಯಕ್ತಿಗಳಲ್ಲಿ ಕಾಣಬಹುದು. ಆದ್ದರಿಂದ ಸಾವಿನ ಬಯಕೆಯನ್ನು ಒಂದು ಧೋರಣೆ, ಒಂದು ನಿಲುವು ಎಂದೇ ಪರಿಗಣಿಸಬೇಕು.

ಸಾವಿನ ವ್ಯಾಮೋಹವೇ ಬದುಕಿನ ನಿಲುವಾಗಿರುವ ಜನ ಸತ್ತಿರುವ, ಜೀವವಿಲ್ಲದ ಎಲ್ಲದರಿಂದ ಆಕರ್ಷಿತರಾಗುತ್ತಾರೆ. ಕಸ, ಕೊಳೆ, ಹೆಣ ಇತ್ಯಾದಿ ಜೀವರಹಿತವಾದ ಎಲ್ಲವೂ ಅವರಿಗೆ ಉತ್ಸಾಹವನ್ನೂ ಉದ್ರೇಕವನ್ನೂ ತರುತ್ತವೆ. ಕಾಯಿಲೆಯ ಬಗ್ಗೆ ಸಾವಿನ ಬಗ್ಗೆ ಮಾತಾಡುವುದಕ್ಕೆ ಆಸಕ್ತಿ ತೋರುತ್ತಾರೆ. ಇಂಥ ಜನಕ್ಕೆ ನಾಳೆಯ ಬಗ್ಗೆ ಆಸಕ್ತಿ ಇರುವುದಿಲ್ಲ. ಭೂತಕಾಲದಲ್ಲಿಯೇ ಬದುಕುತ್ತಾರೆ. ನಿನ್ನೆಯೇ ಅವರಿಗೆ ಮುಖ್ಯ. ತಮ್ಮಲ್ಲಿದ್ದ ಅಥವ ಇತ್ತು ಎಂದುಕೊಂಡಿದ್ದ ಭಾವನೆಗಳು ಮಾತ್ರವೇ ಮುಖ್ಯ ಎಂದುಕೊಳ್ಳುವ ಅತಿಭಾವುಕರಾಗಿರುತ್ತಾರೆ. ಇಂಥ ಜನ 'ಕಾನೂನು ಮತ್ತು ವ್ಯವಸ್ಥೆಯ' ಭಕ್ತರು. 'ಬಲ'ವಂತರು. ಬಲವೇ ಬದುಕಿನ ರೀತಿಯಾಗುವವರು. ಬದುಕಿರುವವರನ್ನು ಕೊಲ್ಲುವ ಸಾಮರ್ಥ್ಯವೇ ಬಲ. ನಿಜ. ಇನ್ನೊಬ್ಬನನ್ನು ಕೊಲ್ಲದೆಯೂ ಅವನ ಸ್ವಾತಂತ್ರ್ಯ ಕಿತ್ತುಕೊಂಡು, ಆಸ್ತಿ ಕಸಿದುಕೊಂಡು ಅವಮಾನಿಸಬಹುದು. ಆದರೆ ಈ ಕೆಲಸಗಳ ಹಿಂದೆಯೂ ನನಗೆ ನಿನ್ನನ್ನು ಕೊಲ್ಲುವ ಆಸೆ ಇದೆ, ಸಾಮರ್ಥ್ಯ ಇದೆ. ಆದರೂ ಕೊಲ್ಲುತ್ತಿಲ್ಲ ನೋಡು' ಎಂಬುದನ್ನು ತೋರಿಸುವ ಭಾವವೇ ಇರುತ್ತದೆ. ಬದುಕನ್ನು ಪ್ರೀತಿಸುವವರಿಗೆ ಗಂಡು-ಹೆಣ್ಣು ಎರಡು ಧ್ರುವಗಳಾಗಿ ಕಂಡರೆ, ಸಾವಿನ ವ್ಯಾಮೋಹವುಳ್ಳವರಿಗೆ ಕೊಲ್ಲುವವರು-ಕೊಲ್ಲಿಸಿಕೊಳ್ಳುವವರು ಎಂಬುದು ಎರಡು ಧ್ರುವಗಳಾಗಿ ಕಾಣುತ್ತದೆ. ಕೊಲ್ಲುವ ಶಕ್ತಿ ಇರುವವರ ಬಗ್ಗೆ ಆಕರ್ಷಿತರಾಗುತ್ತಾರೆ. ಹಿಟ್ಲರ್ ಮತ್ತು ಸ್ಟಾಲಿನ್‌ರನ್ನು ನೋಡಿ. ಇಬ್ಬರೂ ಸಾವಿನ ವ್ಯಾಮೋಹಿಗಳು. ಅವರಿಗೆ ಇದ್ದ ಕೊಲ್ಲುವ ಸಾಮರ್ಥ್ಯ ಮತ್ತು ಆಸೆಗೆ ಮಿತಿ ಇರಲಿಲ್ಲ. (ಆದರೆ ಅವರಿಬ್ಬರೂ ತಾವು ದೇಶದ ರಕ್ಷಕರೆಂದು, ರಾಷ್ಟ್ರ ನಿರ್ಮಾಪಕರೆಂದು ನಟಿಸಿದರು) ಸಾವಿನ ವ್ಯಾಮೋಹದ ನಿಲುವುಳ್ಳ ಜನ ಅವರನ್ನು ಮೆಚ್ಚಿದರು, ಭಯ ಪಟ್ಟವರು ತಮ್ಮ ಭಯವನ್ನು ಬಚ್ಚಿಟ್ಟು ಆರಾಧಿಸಿದರು. ಇನ್ನಷ್ಟು ಜನ ನಟನೆಯಿಂದ ಮಾರು ಹೋಗಿ ಹಿಂಬಾಲಕರಾದರು. ಜನರನ್ನು ನಂಬಿಸದೆ ಇದ್ದರೆ ಹಿಟ್ಲರ್, ಸ್ಟಾಲಿನ್ ಅಂಥ ಸರ್ವಾಧಿಕಾರಿಗಳಾಗುತ್ತಿರಲೇ ಇಲ್ಲ.

ಬದುಕು ಸದಾ ಬೆಳೆಯುವಂಥದ್ದು, ಕ್ರಿಯಾಶೀಲವಾದದ್ದು. ಆದರೆ ಸಾವಿನ ವ್ಯಾಮೋಹಿಗಳಿಗೆ ಯಾವುದು ಜಡವೋ, ಯಾಂತ್ರಿಕವೋ ಅಂಥವು ಮಾತ್ರ ಪ್ರಿಯವಾಗುತ್ತವೆ. ಅವರಿಗೆ ಅನುಭವಕ್ಕಿಂತ ನೆನಪು, ಬದುಕಿಗಿಂತ ಅಧಿಕಾರ ಪ್ರಿಯವಾಗುತ್ತದೆ. ಹೂವಾಗಲಿ ಹೆಣ್ಣಾಗಲಿ "ನನ್ನದು" ಅಂತಾದಾಗ ಮಾತ್ರ ಸಾವಿನ ವ್ಯಾಮೋಹಿ

ಗಳಿಗೆ ಸಂಬಂಧ ಕಲ್ಪಿಸಿಕೊಳ್ಳುವುದು ಸಾಧ್ಯವಾಗುತ್ತದೆ. ತನ್ನ ಆಸ್ತಿಗೆ ಒದಗುವ ಅಪಾಯ ತನಗೇ ಒದಗುವ ಅಪಾಯ ಅನ್ನಿಸುತ್ತದೆ. ತನ್ನದಾದದ್ದು ಕಳೆದು ಹೋದರೆ ಪ್ರಪಂಚದೊಡನೆ ಇರುವ ಸಂಬಂಧವೂ ಕಡಿದು ಹೋಗುತ್ತದೆ. ಆದ್ದರಿಂದ ನಿಯಂತ್ರಣದ ಹತೋಟಿಯ ಆಸೆ ಸಾವಿನ ವ್ಯಾಮೋಹವುಳ್ಳವರಲ್ಲಿ ಎದ್ದು ಕಾಣುತ್ತದೆ. ಈ ಮಗು ತನ್ನದು ಎಂದು ಜಗಳವಾಡಿದ ಇಬ್ಬರು ಹೆಂಗಸರ ಕತೆ ನಿಮಗೆ ಗೊತ್ತಿಲ್ಲವೆ. ಅವರಲ್ಲಿ ಒಬ್ಬಳು ಮಗು ಸತ್ತರೂ ಚಿಂತೆಯಿಲ್ಲ ಎಂದು ತನ್ನತ್ತ ಎಳೆಯುತ್ತಾಳೆ. ಬದುಕಿರುವ ಮಗುವಿಗಿಂತ ಸತ್ತ ಮಗುವಾದರೂ ಅದು ತನ್ನದೇ ಆಗಬೇಕೆಂಬ ಹತೋಟಿಯ ಆಸೆ ಆ ಕತೆಯ ಹೆಂಗಸಿನಲ್ಲಿ ಕಾಣುತ್ತದೆ. ಆದರೆ ಯಾವುದೇ ಬಗೆಯ ನಿಯಂತ್ರಣ ಬದುಕನ್ನ ಕೊಲ್ಲುತ್ತದೆ. ಸಾವಿನ ವ್ಯಾಮೋಹಿಗಳಿಗೆ ಬದುಕಿನ ಬಗ್ಗೆ ಭಯ ಯಾಕೆಂದರೆ ಬದುಕು ಹಿಡಿತಕ್ಕೆ ದಕ್ಕುವಂಥದಲ್ಲ. ಮತ್ತು ವ್ಯವಸ್ಥೆಗೆ ಒಳಪಡುವಂಥದ್ದೂ ಅಲ್ಲ. ಕತ್ತಲು ಮತ್ತು ರಾತ್ರಿ ಸಾವಿನ ವ್ಯಾಮೋಹಿಗಳಿಗೆ ಪ್ರಿಯವಾದಂಥವು. ಮಹಾಕಾವ್ಯಗಳನ್ನ ನೋಡಿ. ಸಾವಿನ ವ್ಯಾಮೋಹವುಳ್ಳ ಪಾತ್ರಗಳು ಕುರುಡಾಗಿರುತ್ತವೆ. ಅಥವ ಗುಹೆಗಳಲ್ಲಿ ಸಾಗರದ ಆಳದಲ್ಲಿ ವಾಸ ಮಾಡುವಂಥ ಪಾತ್ರಗಳಾಗಿರುತ್ತವೆ. ಸಾವಿನ ವ್ಯಾಮೋಹಿಗಳ ಮನಸ್ಸಿನ ಆಳದಲ್ಲಿ ತಾಯ ಬಸಿರಿನ ಕತ್ತಲೆಗೆ, ಪ್ರಾಣಿ ಸ್ಥಿತಿಗೆ ಅಥವ ಇನ್ನೂ ಹಿಂದಿನ ಜಡ ಸ್ಥಿತಿಗೆ ಮರಳುವ ಆಸೆ ತೀವ್ರವಾಗಿರುತ್ತದೆ. ಅವರಿಗೆ ಖಚಿತತೆಯ ಬಯಕೆ ತುಂಬ ಬಲವಾಗಿರುತ್ತದೆ. ಆದರೆ ಬದುಕು ಖಚಿತವಲ್ಲ, ವ್ಯಕ್ತಿಯ ನಿರ್ಧಾರಕ್ಕೆ ನಿಯಂತ್ರಣಕ್ಕೆ ಸಿಕ್ಕುವುದಲ್ಲ. ಆದ್ದರಿಂದ ಬದುಕನ್ನ ಸಾಯಿಸಬೇಕು. ಸಾವು ಮಾತ್ರ ನಿಜ. ಖಚಿತ ಎಂಬ ಅಭಿಪ್ರಾಯ ಅವರಲ್ಲಿ ಕೆಲಸ ಮಾಡುತ್ತಿರುತ್ತದೆ.

ಸಾವಿನ ವ್ಯಾಮೋಹದ ನಿಲುವು ಕನಸುಗಳಲ್ಲಿ, ಮೈಯ ಲಕ್ಷಣದಲ್ಲಿ ಮತ್ತು ವ್ಯಕ್ತಿಯ ಚಲನ ವಲನಗಳಲ್ಲೂ ಕಾಣಿಸಿಕೊಳ್ಳುತ್ತದೆ. ಕೊಲೆ, ರಕ್ತ, ಹೆಣ, ತಲೆ ಬುರುಡೆ, ಅಮೇಧ್ಯ, ಯಂತ್ರಗಳಂತೆ ನಡೆವ ಮನುಷ್ಯರು— ಇಂಥ ಸಂಗತಿಗಳು ಮತ್ತೆ ಮತ್ತೆ ಕನಸಿನಲ್ಲಿ ಕಾಣಿಸಿಕೊಳ್ಳುತ್ತವೆ. ಆತ್ಮೀಯತೆ, ಪ್ರೀತಿ ಇವ್ಯಾವುದೂ ಇಲ್ಲದ ಶೀತಲ ವರ್ತನೆ, ನಿರ್ಜೀವ ಚರ್ಮ, "ಥೂ ಇದೆಂಥ ಕೆಟ್ಟ ವಾಸನೆ" ಎಂಬಂಥ ಭಾವವನ್ನು ತೋರುವ ಮುಖ, ಅತಿಯಾದ ಶಿಸ್ತು ಮತ್ತು ಅಚ್ಚುಕಟ್ಟು ಇವುಗಳನ್ನು ಸಾವಿನ ವ್ಯಾಮೋಹಿಗಳಲ್ಲಿ ಕಾಣಬಹುದು.

ಕೊಲ್ಲುವ ಅವಕಾಶ ಮತ್ತು ಅಧಿಕಾರ ಎಲ್ಲರಿಗೂ ಇರುವುದಿಲ್ಲ. ಎಲ್ಲರೂ ಹಿಟ್ಲರ್, ಸ್ಟಾಲಿನ್‌ಗಳಲ್ಲ. ಆದರೂ ಅನೇಕ ಜನರ ಬದುಕಿನಲ್ಲಿ ಸಾವಿನ ವ್ಯಾಮೋಹ ತುಂಬ ಅಪಾಯಕಾರಿಯಲ್ಲದ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ತಾಯಿಯೊಬ್ಬಳು ತನ್ನ ಮಗುವಿನ ಕಾಯಿಲೆಯ ಬಗ್ಗೆ, ಮಗುವಿನ ಸೋಲಿನ ಬಗ್ಗೆ

ಮಗುವಿಗೆ ಮುಂದೆ ಕಾದಿರುವ ಭವಿಷ್ಯದ ಕರಾಳತೆಯು ಬಗ್ಗೆ – ಕೇವಲ ಇಂಥ ವಿಷಯುಗಳ ಬಗ್ಗೆಯೇ ಆಸಕ್ತಿ ತೋರಬಹುದು. ಮಗುವಿನ ಸಂತೋಷದಲ್ಲಿ ಪಾಲ್ಗೊಳ್ಳದೆ, ಅವನ ಬೆಳವಣಿಗೆಯಲ್ಲಿನ ಹೊಸತನವನ್ನು ಗುರುತಿಸದೆಯೇ ಹೋಗಬಹುದು. ಮಗುವಿನ ಉತ್ತಮ ಗುಣಗಳನ್ನು ಗುರುತಿಸಿ ಮೆಚ್ಚದೆ ಇರಬಹುದು. ಅಂಥ ತಾಯಿ ಕ್ರಮೇಣ ಮಗುವಿನಲ್ಲೂ, ತನಗೂ ತಿಳಿಯದಂತೆ. ಸಾವಿನ ವ್ಯಾಮೋಹದ ನಿಲುವನ್ನು ಬೆಳೆಸುತ್ತಾಳೆ, ಇದರಿಂದ ಮಗು ಬದುಕಿನಿಂದ ಸಂತೋಷಪಡೆಯದಂತೆ, ಬೆಳವಣಿಗೆಯಲ್ಲಿ ಬದಲಾವಣೆಯಲ್ಲಿ ಬದುಕಿನಲ್ಲಿ ನಂಬಿಕೆ ಇಡದಂತಾಗಬಹುದು.

ಕೊಲ್ಲುವ ಆಸೆ. ಬಲದ ಆರಾಧನೆ, ಸಾವು ಮತ್ತು ಕೊಲೆಯ ಆಕರ್ಷಣೆ, ಹಿಂಸಾರತಿ, ಅತಿಶಿಸ್ತಿನ ಮೂಲಕ ಜೀವಂತವಾದದ್ದನ್ನು ನಿರ್ಜೀವವಾಗಿಸಿ ವಶಪಡಿಸಿಕೊಳ್ಳುವ ಬಯಕೆ— ಇವುಗಳು ಎಲ್ಲವೂ ಅಲ್ಲದಿದ್ದರೂ ಇವುಗಳಲ್ಲಿ ಯಾವುದಾದರೊಂದು ಹೆಚ್ಚಿನ ಪ್ರಮಾಣದಲ್ಲಿರಬಹುದು. ಇವುಗಳೊಂದಿಗೆ ಜೀವನ ಪ್ರೀತಿ ಹೆಚ್ಚೋ ಕಡಮೆಯೋ ಪ್ರಮಾಣದಲ್ಲಿ ಬೆರೆತಿರಬಹುದು, ತನ್ನಲ್ಲಿ ಸಾವಿನ ವ್ಯಾಮೋಹ ಇದೆ ಎಂಬುದು ಅರಿವಿಗೆ ಬಾರದೆಯೂ ಇರಬಹುದು. ಅಥವಾ ಗೊತ್ತಿದ್ದೂ ಸಮರ್ಥಿಸಿಕೊಳ್ಳಬಹುದು,

ಸಾವಿನ ವ್ಯಾಮೋಹ ಎಂಬುದು ಅಮೂರ್ತ ಕಲ್ಪನೆಯಲ್ಲ. ಬದುಕಿನ ಒಂದು ಮೂಲಭೂತ ನಿಲುವು.ಬದುಕಿಗೆ ಮನುಷ್ಯ ನೀಡುವ ಜೀವ ವಿರೋಧಿ ಉತ್ತರ.ನಿಜವಾದ ವಿಕೃತಿ. ಬದುಕಿರುವಾಗಲೇ ಬದುಕನ್ನು ಬಿಟ್ಟು ಸಾವನ್ನು, ಬೆಳವಣಿಗೆಯನ್ನು ಬಿಟ್ಟು ಜಡತ್ವವನ್ನು ಬಯಸುವ, ಸೃಷ್ಟಿಗೆ ಬದಲು ವಿನಾಶವನ್ನು ಆಯ್ದುಕೊಳ್ಳುವ, ಪ್ರೀತಿಗೆ ಬದಲು ಹಿಂಸೆಯಲ್ಲಿ ತೊಡಗುವ ನಿಜವಾದ ಕೆಡುಕು ಮತ್ತು ಅದರ ಮೂಲ ಸಾವಿನ ವ್ಯಾಮೋಹದ ನಿಲುವಿನಲ್ಲಿದೆ.

ಬದುಕಿನ ಪ್ರೀತಿ (ಬಯೋಫೀಲಿಯಾ) ಸಾವಿನ ವ್ಯಾಮೋಹಕ್ಕೆ ವಿರುದ್ಧವಾದದ್ದು. ಇದು ಕೂಡ ಒಟ್ಟು ವ್ಯಕ್ತಿತ್ವದ ಒಂದು ನಿಲುವು, ಬದುಕಿನ ಬಗ್ಗೆ ವ್ಯಕ್ತಿಯು ತಾಳುವ ಧೋರಣೆ. ಬದುಕಿನ ಪ್ರೀತಿ ಹಲವಾರು ರೂಪಗಳನ್ನು ತಳೆಯುತ್ತದೆ. ಮೊಟ್ಟ ಮೊದಲನೆಯದು ಬದುಕಿ ಉಳಿಯುವ ಆಸೆ. ಕಲ್ಲು ಬಂಡೆಯ ಸಂದಿಯಲ್ಲೂ ಚಿಗುರಿ ಬೆಳಕಿಗೆ ಗಾಳಿಗೆ ಹಾತೊರೆಯುವ ಹುಲ್ಲುಗರಿಕೆ, ಪ್ರಾಣ ಉಳಿಸಿಕೊಳ್ಳಲು ಕಾದಾಡುವ ಪ್ರಾಣಿ, ಬದುಕಿ ಉಳಿಯಲು ಏನು ಬೇಕಾದರೂ ಮಾಡಲು ತಯಾರಿರುವ ಮನುಷ್ಯ — ಸೃಷ್ಟಿಯ ಎಲ್ಲ ಜೀವಿಗಳಲ್ಲೂ ಬದುಕಬೇಕು ಎಂಬ ಆಸೆಯಾಗಿ ಜೀವನ ಪ್ರೀತಿ ಕಾಣಿಸಿಕೊಳ್ಳುತ್ತದೆ. ಬದುಕುವುದಕ್ಕಾಗಿ ಜೀವಗಳು ಸಾವಿನ ವಿರುದ್ಧ ನಡೆಸುವ ಈ ಹೋರಾಟವು ಒಂದು ಜೀವಿಯು ಮತ್ತೊಂದು ಜೀವಿಯೊಡನೆ ಕೂಡುವ ಬೆರೆಯುವ ಹಾಗೆ

ಕೂಡಿ ಬೆರೆತು ಬೆಳೆಯುವ ಆಸೆಯ ರೂಪವನ್ನು ತಾಳುತ್ತದೆ. ಕೂಡುವ ಬೆಳೆಯುವ ಆಸೆಯು ಕೇವಲ ಜೀವಕೋಶಗಳ ಮಟ್ಟಿಗೆ ದೇಹದ ಮಟ್ಟಿಗೆ ಮಾತ್ರವಲ್ಲ ಆಲೋಚನೆ, ಭಾವನೆಗಳ ಮಟ್ಟಿಗೂ ನಿಜ. ಜೀವ ಕೋಶಗಳು ಲೈಂಗಿಕ ಕ್ರಿಯೆ ಇಲ್ಲದೆ ಕೂಡಿ ಬೆರೆತರೆ ಪ್ರಾಣಿಗಳು, ಮನುಷ್ಯರು ಲೈಂಗಿಕತೆಯ ಮೂಲಕ ಕೂಡಿ ಬೆರೆಯುತ್ತಾರೆ. ಗಂಡು-ಹೆಣ್ಣಿನ ಆಕರ್ಷಣೆಯು ಲೈಂಗಿಕತೆಯ ಮೂಲ. ಈ ಲೈಂಗಿಕ ಕೂಡುವಿಕೆಯ ಆಧಾರದ ಮೇಲೆಯೇ ಮನುಷ್ಯಕುಲ ಉಳಿದು ಬೆಳೆದಿರುವುದು. ಕುಲದ ಉಳಿವಿಗೆ ಕಾರಣವಾಗುತ್ತದೆ ಎಂಬ ಕಾರಣದಿಂದಾಗಿಯೇ, ಬಹುಶಃ, ಪ್ರಕೃತಿಯು ಗಂಡು ಹೆಣ್ಣಿನ ಕೂಟವನ್ನು ಅತ್ಯಂತ ಸುಖಕರ ಸಂಗತಿಯನ್ನಾಗಿಸಿದೆ. ಲೈಂಗಿಕ ಕೂಟ ಹೊಸ ಸೃಷ್ಟಿಗೆ ಕಾರಣವಾಗುತ್ತದೆ. ಕೂಟ-ಹುಟ್ಟು-ಬೆಳವಣಿಗೆ ಇದು ಜೀವಂತಿಕೆಯ ಚಕ್ರಗತಿ. ಬೆಳವಣಿಗೆಯ ನಿಲುಗಡೆ. ಪ್ರತ್ಯೇಕಗೊಂಡು ಕಳಚಿಕೊಳ್ಳುವುದು, ಕೊಳೆಯುವುದು ಇದು ಸಾವಿನ ಚಕ್ರಗತಿ. ದೈಹಿಕವಾಗಿ ಲೈಂಗಿಕತೆಯು ಹೊಸಹುಟ್ಟಿಗೆ ಕಾರಣವಾದರೂ ಮಾನಸಿಕವಾಗಿಯೂ ಅದು ಜೀವನ ಪ್ರೀತಿಯ ಲಕ್ಷಣವಾಗಿರಬೇಕಿಲ್ಲ. ಕಾಮದ ಆಸೆಯು ಇತರ ಯಾವುದೇ ತೀವ್ರವಾದ ಆಸೆಯೊಡನೆ ಬೆರೆತಿರುವುದು ಸಾಧ್ಯ. ಅಹಂಕಾರದ ತೃಪ್ತಿ, ಹಣ, ಅಧಿಕಾರ, ಸಾಹಸಗಳ ಆಸೆ, ಕೊನೆಗೆ-ಸಾವಿನ ಆಸೆಕೂಡ ಲೈಂಗಿಕ ಆಸೆಗೆ ಪೂರಕವಾಗಬಹುದು. ಬದುಕಿಗೆ ವಿರುದ್ಧವಾದ ನಿಲುವುಗಳಿಂದ ಮೂಡುವ ಭಾವಗಳು ಅಪೇಕ್ಷೆಗಳು ಕೂಡ ಜೀವ ಸೃಷ್ಟಿಗೆ ಕಾರಣವಾಗುವ ಲೈಂಗಿಕತೆಯೊಡನೆ ಬೆರೆಯಬಲ್ಲವು. ಹಿಂಸಾರತಿ. ಹಟ ಸಂಭೋಗ ಇಂಥವುಗಳನ್ನು 'ವಿಕೃತಿ' ಎಂದು ಕರೆಯುವುದು ಏಕೆ ಗೊತ್ತೆ ? ಇವು ಸಮಾಜ ಅಂಗೀಕರಿಸಿದ ಲೈಂಗಿಕ ವರ್ತನೆಗಳು ಅಲ್ಲ ಎಂಬುದಷ್ಟೆ ಕಾರಣವಲ್ಲ. ಮೂಲಭೂತವಾಗಿ ಬದುಕಿಗೆ ವಿರುದ್ಧವಾದ ನಿಲುವನ್ನು ಬದುಕಿಗೆ ಕಾರಣವಾಗುವ ನಿಲುವಿನೊಡನೆ, ಪರಸ್ಪರ ವಿರುದ್ಧವಾದ ನಿಲುವುಗಳನ್ನು, ಎಂದೂ ಒಟ್ಟಿಗೆ ಸೇರಲಾರದ ನಿಲುವುಗಳನ್ನು ಒಟ್ಟಿಗೆ ಬೆರೆಸುವ ಪ್ರಯತ್ನ ಎಂಬುದರಿಂದಾಗಿ ಇವು ವಿಕೃತಿಗಳು.

ಬದುಕಿನ ಪ್ರೀತಿ ಪೂರ್ತಿಯಾಗಿ ಅರಳುವುದಕ್ಕೆ ಸೃಷ್ಟಿಶೀಲ ನಿಲುವು ಅಗತ್ಯ. ('ಮನುಷ್ಯ ಸ್ವಭಾವ ಮತ್ತು ವ್ಯಕ್ತಿತ್ವ' ಲೇಖನವನ್ನು ನೋಡಿ) ಬದುಕನ್ನು ಪ್ರೀತಿಸುವ ವ್ಯಕ್ತಿ ಬದುಕಿನ ಎಲ್ಲ ರಂಗದಲ್ಲೂ ಜೀವಂತಿಕೆ ಮತ್ತು ಬೆಳವಣಿಗೆಯಿಂದ ಆಕರ್ಷಿತನಾಗುತ್ತಾನೆ. 'ಉಳಿಸಿ'ಕೊಳ್ಳುವುದಕ್ಕಿಂತ 'ಬೆಳೆ'ಯುವುದರಲ್ಲಿ 'ಬೆಳೆಸು'ವುದರಲ್ಲಿ ಅವನ ಆಸಕ್ತಿ. ಅವನಲ್ಲಿ ಅಚ್ಚರಿಪಡುವ ಸಾಮರ್ಥ್ಯವಿರುತ್ತದೆ. ನೆಮ್ಮದಿ ತರಬಲ್ಲ ಹಳತು, ಪರಿಚಿತವಾದದ್ದು ಬಿಟ್ಟು ದಿಗ್ಭ್ರಮೆ ಹುಟ್ಟಿಸಬಲ್ಲ ಹೊಸತನ್ನು ಆಸೆಪಡುತ್ತಾನೆ. ನಿಶ್ಚಲ ಖಚಿತತೆಗಿಂತ ಖಚಿತವಲ್ಲದ ಜೀವಂತ ಸಾಹಸವನ್ನು ಬಯಸುತ್ತಾನೆ, ಅವನಲ್ಲಿ ಯಾಂತ್ರಿಕವಲ್ಲದ ಕ್ರಿಯಾಶೀಲ ಸಾಹಸವಿರುತ್ತದೆ. ಬಿಡಿಬಿಡಿಯಾಗಿ ಅಲ್ಲದೆ

ಇಡಿಯಾಗಿ ನೋಡುವ ಶಕ್ತಿ ಪಡೆವ ಹಂಬಲವಿರುತ್ತದೆ. ಅವನಲ್ಲಿರುವುದು ಉನ್ಮಾದ ವಲ್ಲ. ಬದುಕಿನ ಎಲ್ಲ ಮುಖಗಳನ್ನೂ ಆನಂದಿಸುವ ಶಕ್ತಿ ಹೊಂದಿರುತ್ತಾನೆ. ಬದುಕಿನ ಪ್ರೀತಿಯುಳ್ಳ ವ್ಯಕ್ತಿಯು ಬಲದ ಮೂಲಕ ಅಲ್ಲ. ಅಧಿಕಾರದ ಮೂಲಕ ಅಲ್ಲ. ಮನುಷ್ಯರನ್ನು ವಸ್ತುಗಳಾಗಿಸುವ ಮೂಲಕವೂ ಅಲ್ಲ, ಆದರೆ, ಪ್ರೀತಿ ಮತ್ತು ವಿಚಾರದ ಮೂಲಕ, ತಾನೇ ದೃಷ್ಟಾಂತವಾಗುವ ಮೂಲಕ ಪರಿಣಾಮ ಬೀರಲು ಬದಲಾವಣೆ ತರಲು ಬಯಸುತ್ತಾನೆ.

ಬದುಕಿನ ಪ್ರೀತಿಗೂ ತನ್ನದೇ ನೀತಿಶಾಸ್ತ್ರವಿದೆ. ಜೀವನವನ್ನು ಪೋಷಿಸುವಂಥ ದೆಲ್ಲ ಒಳಿತು, ಸಾವನ್ನು ಪೋಷಿಸುವಂಥದು ಕೆಡಕು. ಬದುಕನ್ನು ಬೆಳೆಸುವ, ಅರಳಿ ಸುವ, ಗೌರವಿಸುವ ಎಲ್ಲವೂ ಒಳಿತು, ಬದುಕನ್ನು ಕಟ್ಟಿಹಾಕುವ, ಹಿಸುಕುವ, ತಡೆ ಯುವ, ಗೌರವಿಸದ ಎಲ್ಲವೂ ಕೆಡುಕು. ಆನಂದ ಒಳಿತು, ದುಃಖ ಕೆಡುಕು. ಬದು ಕಿನ ಪ್ರೀತಿಯ ಮನಸ್ಸಾಕ್ಷಿಯಲ್ಲಿ ಒತ್ತಾಯದ ಬಲವಂತದ ಪ್ರಶ್ನೆ ಇಲ್ಲ. ಕೆಡಕು ಮಾಡದಿರುವುದು ಒಳಿತು ಎಂಬುದಲ್ಲ, ಬದುಕನ್ನೆ ಆನಂದವನ್ನೆ ಸಹಜವಾಗಿ ಪ್ರೀತಿ ಸುವ, ಹಾಗೆ ಪ್ರೀತಿಸುತ್ತ ಬದುಕಿನ ಪ್ರೀತಿಯನ್ನ ಮತ್ತಷ್ಟು ಬಲಪಡಿಸುವ ಯತ್ನ ಒಳಿತಾಗಿರುತ್ತದೆ. ಹಾಗಾಗಿ ಜೀವನ ಪ್ರೀತಿಯುಳ್ಳ ವ್ಯಕ್ತಿಯು ಅಪರಾಧೀಭಾವ ಮತ್ತು ಪಶ್ಚಾತ್ತಾಪಕ್ಕೆ ಎಡೆಕೊಡುವುದಿಲ್ಲ. ಮತ್ತೆ ಬದುಕಿನತ್ತ ತಿರುಗಿ ಒಳಿತನ್ನ ತರಲು ತೊಡಗುತ್ತಾನೆ.

ಬದುಕಿನ ಪ್ರೀತಿ ಮನುಷ್ಯನ ಮೊದಲ ಸಹಜ ಸಾಮರ್ಥ್ಯ. ಸಾವಿನ ವ್ಯಾಮೋಹ ಬದುಕಿಗೆ ವಿರುದ್ಧವಾದ ಎರಡನೆಯ ಸಾಧ್ಯತೆ. ಸೂಕ್ತ ವಾತಾವರಣ ಸಿಕ್ಕರೆ ಮೊದಲ ಸಹಜ ಸಾಮರ್ಥ್ಯ ಬೆಳೆಯುತ್ತದೆ— ತೇವ, ಬಿಸಿಲು, ಮಣ್ಣು ಎಲ್ಲ ಸಿಕ್ಕಾಗ ಮರವಾಗಿ ಬೆಳೆಯುವ ಬೀಜದಂತೆ. ಸೂಕ್ತ ವಾತಾವರಣ ಇಲ್ಲದಿದ್ದರೆ ಸಾವಿನ ವ್ಯಾಮೋಹದ ಲಕ್ಷಣಗಳು ಕಂಡು ವ್ಯಕ್ತಿಯನ್ನು ಆಳತೊಡಗುತ್ತವೆ.

ಬದುಕಿನ ಪ್ರೀತಿ ಮತ್ತು ಸಾವಿನ ವ್ಯಾಮೋಹದ ನಿಲುವುಗಳನ್ನು ಬೆಳೆಸುವ ಕಾರಣಗಳು ಯಾವುವು ? ಒಬ್ಬ ವ್ಯಕ್ತಿಯಲ್ಲಿ ಅಥವ ಒಂದು ಸಾಮಾಜಿಕ ಗುಂಪಿನಲ್ಲಿ ಸಾವಿನ ವ್ಯಾಮೋಹ ಹೆಚ್ಚು ಅಥವ ಕಡಮೆ ಇರಲು ಕಾರಣಗಳೇನು ? ಈ ಬಗ್ಗೆ ಇನ್ನೂ ಹೆಚ್ಚು ಅಧ್ಯಯನ ನಡೆಯಬೇಕಾಗಿದೆ. ನನ್ನ ಅನುಭವದಿಂದ ಕಂಡುಕೊಂಡ ತಾತ್ಕಾಲಿಕ ಉತ್ತರಗಳನ್ನು ಇಲ್ಲಿ ಸ್ವಲ್ಪ ಹೇಳಬಲ್ಲೆ.

ಸಾವಿನ ವ್ಯಾಮೋಹದಂತೆ ಬದುಕಿನ ಪ್ರೀತಿಯುದ'ಸಾಂಕ್ರಾಮಿಕ'ವಾಗಬಲ್ಲುದು. ಮಗುವಿಗೆ ಬದುಕನ್ನು ಪ್ರೀತಿಸುವವರ ಒಡನಾಟ ಮುಖ್ಯ, ಈ ಪ್ರೀತಿಯು ಮಾತು,

ವಿವರಣೆ, ಉಪದೇಶಗಳ ಮೂಲಕ ದೊರೆಯುವುದಿಲ್ಲ. ಉಪದೇಶಕ್ಕಿಂತ ಕ್ರಿಯೆಯಲ್ಲಿ, ಮಾತಿಗಿಂತ ಮಾತಿನ ಧ್ವನಿಯಲ್ಲಿ ಮಗುವು ಬದುಕಿನ ಪ್ರೀತಿಯನ್ನು ಗುರುತಿಸುತ್ತದೆ. ಆತ್ಮೀಯತೆ, ಸ್ವಾತಂತ್ರ್ಯ, ಅಭಯ, 'ಬದುಕಿನ ಕಲೆ'ಯ ಬಗ್ಗೆ ಸೂಚನೆ. ಜೊತೆಯ ಮನುಷ್ಯರಲ್ಲಿ ಆಸಕ್ತಿಯನ್ನು ಕುತೂಹಲವನ್ನು ಹುಟ್ಟಿಸಿ ಬೆಳೆಸುವ ಇವೆಲ್ಲ ಬದುಕಿನ ಪ್ರೀತಿಯನ್ನು ಹುಟ್ಟಿಸುತ್ತವೆ. ಇದೆಲ್ಲ ಮಗುವಿನ ಕುಟುಂಬದ ಮಾತಾಯಿತು. ಬದುಕಿನ ಪ್ರೀತಿ ಬೆಳೆಯಲು ಸಾಮಾಜಿಕ ವಾತಾವರಣ ಎಂಥದಿರಬೇಕು ?

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕೊರತೆಯಿರದ ಸಮೃದ್ಧ ಸಮಾಜವು ಮಾತ್ರ ಬದುಕಿನ ಪ್ರೀತಿಯನ್ನು ಬೆಳೆಸುತ್ತದೆ. ಜನರ ಶ್ರಮವೆಲ್ಲ ಹಸಿವನ್ನು ನೀಗಿಸಿಕೊಳ್ಳುವಲ್ಲಿ, ಜೀವ ರಕ್ಷಿಸಿಕೊಳ್ಳುವಲ್ಲಿ ವ್ಯಯವಾದರೆ ಪ್ರೀತಿ ಖಂಡಿತ ಮುಕ್ಕಾಗುತ್ತದೆ. ಬದುಕಿನ ಬಗ್ಗೆ ದ್ವೇಷ, ಅಸಹನೆ ಬೆಳೆಯುತ್ತದೆ. ಅನ್ಯಾಯದ ನಿವಾರಣೆ ಮತ್ತೊಂದು ಅಗತ್ಯವಾದ ಅಂಶ. ಸಮಾಜದ ಕೆಲವೊಂದು ವರ್ಗ ಬದುಕಿನ ಪೂರ್ಣ ಅನುಭವದಿಂದ ವಂಚಿತರಾಗುವುದು. ಗೌರವದಿಂದ ಬಾಳು ಸಾಗಿಸಲು ಆಗದಿರುವುದು, ವ್ಯಕ್ತಿ ಅಥವ ಸಮಾಜದ ಒಂದು ವರ್ಗ ತನಗಾಗಿ ತನ್ನ ಬಾಳನ್ನು ಬದುಕಲಾರದೆ ಮತ್ತೊಬ್ಬ ವ್ಯಕ್ತಿಯ ಅಥವ ಮತ್ತೊಂದು ವರ್ಗದ ಸುಖಕ್ಕೆ ಉಪಕರಣವಾಗುವುದು—ಇವೆಲ್ಲ ಅನ್ಯಾಯ. ಇವು ನಿವಾರಣೆಯಾಗದೆ ಬದುಕಿನ ಪ್ರೀತಿ ಬೆಳೆಯುವುದಿಲ್ಲ. ಇವೆಲ್ಲಕ್ಕಿಂತ ಮುಖ್ಯವಾದದ್ದು ಸ್ವಾತಂತ್ರ್ಯ. ಇದು ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲ, ಯಾವುದರಿಂದ ಸ್ವಾತಂತ್ರ್ಯ ದೊರಿತಿದೆ ಎಂಬುದಕ್ಕಿಂತ ಯಾವುದಕ್ಕೆಲ್ಲ ಸ್ವಾತಂತ್ರ್ಯವಿದೆ ಎಂಬುದು ಮುಖ್ಯ. ಸೃಷ್ಟಿಸುವ, ಕಟ್ಟುವ, ಅಚ್ಚರಿ ಪಡುವ, ಸಾಹಸದಲ್ಲಿ ತೊಡಗುವ ಸ್ವಾತಂತ್ರ್ಯ, ವ್ಯಕ್ತಿಯು ಕ್ರಿಯಾಶೀಲನಾಗುವ ಜವಾಬ್ದಾರಿಯನ್ನು ಹೊರಬಲ್ಲ ಸ್ವಾತಂತ್ರ್ಯ ಬೇಕು. ಸಮೃದ್ಧಿಯಿದ್ದು, ನ್ಯಾಯ ದೊರೆತು ಆದರೂ ಮನುಷ್ಯ ಯಾಂತ್ರಿಕನಾಗಿಯೇ ಇರುವಂಥದ್ದಾದರೆ, ಅಧಿಕಾರದ ಮಾರುಕಟ್ಟೆಯ ಬೃಹತ್ ಯಂತ್ರದ ಒಂದು ಕೀಲು ಮಾತ್ರ ಆಗಿರುವುದಾದರೆ, ಅದು ಸ್ವಾತಂತ್ರ್ಯವಲ್ಲ, ಬದುಕಿನ ಪ್ರೀತಿ ಬೆಳೆಯುವುದಿಲ್ಲ. ನಾನು ನಾನೇ ಆಗುವ ಸ್ವಾತಂತ್ರ್ಯ ತುಂಬ ಮುಖ್ಯ.

ಸಾವಿನ ಪ್ರೀತಿಗೂ ಆಧುನಿಕ ಕೈಗಾರಿಕೆಯ ಸಮಾಜದ ಬದುಕಿಗೂ ಇರುವ ಸಂಬಂಧ ಯಾವುದು ? ಬದುಕಿನ ಬಗ್ಗೆ ಉದಾಸೀನ ಮತ್ತು ಸಾವಿನ ಪ್ರೀತಿ ಅಣುಯುದ್ಧಕ್ಕೆ ಪ್ರೇರಣೆ ಒದಗಿಸಿದೆಯೆ ? ಇಲ್ಲಿ ಈ ಪ್ರಶ್ನೆ ಕುರಿತ ಒಂದು ಮುಖ್ಯ ಮಾನಸಿಕ ಅಂಶವನ್ನು ಮಾತ್ರ ಗಮನಿಸಿದೆ.

ಯುದ್ಧಕ್ಕೆ ಅನೇಕ ಕಾರಣಗಳಿರಬಹುದು— ಆಕ್ರಮಣದ ವಿರುದ್ಧ ರಕ್ಷಣೆ ಆರ್ಥಿಕ ಲಾಭ, ರಾಜಕೀಯ ಸ್ವಾತಂತ್ರ್ಯ, ದೇಶದ ಗೌರವ, ತಮ್ಮ ದೇಶವ ಬದುಕಿನ ರೀತಿಯನ್ನು ಕಾಪಾಡಿಕೊಳ್ಳುವ ಆಸೆ ಇತ್ಯಾದಿ. ಆದರೆ ಇಂಥ ಯಾವ ತರ್ಕದಿಂದಲೂ ಅಣುಯುದ್ಧವನ್ನು ಸಮರ್ಥಿಸುವುದು ಸಾಧ್ಯವಿಲ್ಲ. ಅಣುಯುದ್ಧ ನಡೆಸಿ ಯಾರೂ ಸ್ವತಂತ್ರರಾಗುವುದು ಸಾಧ್ಯವಿಲ್ಲ. ಯಾರೂ ಕೀರ್ತಿ ಪಡೆಯಲು ಸಾಧ್ಯವಿಲ್ಲ. ಯಾರೂ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಕಡಮೆ ಎಂದರೆ ದೇಶದ ಅರ್ಧದಷ್ಟು ಜನ ಸುಟ್ಟು ಹೋಗುವಾಗ, ಎಲ್ಲ ಸಾಂಸ್ಕೃತಿಕ ಕೇಂದ್ರಗಳು ನಾಶವಾಗುವಾಗ, ಬದುಕಿ ಉಳಿದ ಜನಕ್ಕೆ ಸತ್ತವರೆ ಪುಣ್ಯವಂತರೆನಿಸುವಾಗ ಅಣು ಯುದ್ಧಕ್ಕೆ ಯಾವ ತರ್ಕದ, ವೈಚಾರಿಕತೆಯ ಬೆಂಬಲವಿದೆ? ಆದರೂ ಅಣು ಯುದ್ಧದ ತಯಾರಿ ನಡೆಯುತ್ತಲೇ ಇರುವುದೇಕೆ? ಅಣುಯುದ್ಧಕ್ಕೆ ಈಗಿರುವುದಕ್ಕಿಂತ ಹೆಚ್ಚು ಜನ ವಿರೋಧ ಇರಬೇಕಿತ್ತು. ಆದರೆ ಹಾಗಿಲ್ಲ ಯಾಕೆ? ಮಕ್ಕಳು ಮೊಮ್ಮಕ್ಕಳು ಇರುವ ಜನ. ಎಲ್ಲ ಸುಖ ಸವಲತ್ತು ಇದ್ದು ಸುಂದರ ಬದುಕು ಸಾಗಿಸುತ್ತಿರುವ ಜನ ಕೂಡ ಮನುಷ್ಯ ಕುಲವನ್ನೇ ನಾಶ ಮಾಡುವ ಅಣುಯುದ್ಧದ ಬಗ್ಗೆ ಯಾಕೆ ಸುಮ್ಮನಿದ್ದಾರೆ ಅಥವ ಯಾಕೆ ಅಣುಯುದ್ಧದ ಪರವಾಗಿದ್ದಾರೆ? ಜನ ಬದುಕನ್ನು ಪ್ರೀತಿಸುವುದಿಲ್ಲವಾದ್ದರಿಂದ ಸರ್ವನಾಶದ ಬಗ್ಗೆ ಅವರಿಗೆ ಭಯವಿಲ್ಲ ಎನ್ನೋಣವೇ ಅಥವ ಬದುಕಿನ ಬಗ್ಗೆ ಉದಾಸೀನರಾಗಿದ್ದು ಸಾವಿನ ಬಯಕೆ ಬೆಳೆಸಿಕೊಂಡಿದ್ದಾರೆ ಎನ್ನೋಣವೇ? ಆದರೆ ಈ ಮಾತು ನಿಜ ಅಲ್ಲ. ಯಾಕೆಂದರೆ ಎಲ್ಲ ಜೀವಿಗಳ ಮೊದಲ ತೀವ್ರ ಆಸೆ —ಬದುಕಿ ಉಳಿಯುವುದು. ಆದ್ದರಿಂದ ಈ ಪ್ರಶ್ನೆಗಳಿಗೆ ಉತ್ತರ ಬೇರೆಯದೇ ಇರಬೇಕು.

ಬದುಕನ್ನು ಅಮೂರ್ತವಾಗಿ ಅರಿಯುವುದು ಸಾಧ್ಯವಿಲ್ಲ. ಬಿಡಿ ಬಿಡಿಯಾದ ಖಚಿತ ಸಂಗತಿಗಳಲ್ಲಷ್ಟೆ ಬದುಕು ನಮ್ಮ ಅನುಭವವಾಗುವುದು. ಒಂದು ಹೂವು, ಒಬ್ಬ ವ್ಯಕ್ತಿ, ಒಂದು ಹಕ್ಕಿ, ಒಂದು ಗಿಡ— ಬಿಡಿ ಬಿಡಿಯಾದ ವೈಯಕ್ತಿಕ ಅನುಭವದ ಮೂಲಕವಲ್ಲದೆ ಬದುಕು ಬೇರೆ ಜಾತಿ ರೀತಿಯಲ್ಲಿ ನಮಗೆ ದಕ್ಕುವುದಿಲ್ಲ. ಆದರೆ ಇವತ್ತಿನ ಸಮಾಜ ವಸ್ತುಗಳ ಒಟ್ಟು ಉತ್ಪಾದನೆಗೆ (ಮಾಸ್ ಪ್ರೊಡಕ್ಷನ್)ಗೆ ಗಮನ ಕೊಟ್ಟಿದೆ. ವಸ್ತುಗಳ ಉತ್ಪಾದನೆ ವಸ್ತುಗಳ ಆರಾಧನೆಯಾಗಿದೆ. ಮನುಷ್ಯನು ವ್ಯಕ್ತಿಯಾಗಿ ಬೆಳೆಯುವ ಬದಲು ವಸ್ತುವಾಗಿ ಬದಲಾಗುತ್ತಿದ್ದಾನೆ. ಜನರು ಮನುಷ್ಯರಾಗಿ ಕಾಣದೆ ಜನಸಂಖ್ಯೆಯಾಗಿ ಕಾಣತೊಡಗಿದ್ದಾರೆ. ಜೀವಿಗಳಿಗಿಂತ ಯಂತ್ರಗಳು ಉಪಕರಣಗಳು ಹೆಚ್ಚು ಪ್ರಿಯವಾಗುತ್ತಿವೆ. ಇತರ ಮನುಷ್ಯನ ಬಗ್ಗೆ ನಮ್ಮ ಆಸಕ್ತಿ ಅಮೂರ್ತ ಬೌದ್ಧಿಕ ಆಸಕ್ತಿಯಾಗುತ್ತಿದೆ. ಆಡಳಿತ ಯಂತ್ರವೂ ಉತ್ಪಾದನಾ ಯಂತ್ರವೂ ಸುಗಮವಾಗಿ ನಡೆಯಲು ಮನುಷ್ಯನು ಹೇಳಿದಂತೆ ಕೇಳುವ ಯಂತ್ರ

ಭಾಗವಹಿಸಬೇಕಾಗಿದೆ, ವಸ್ತುವಾಗಬೇಕಾಗಿದೆ. ಸುಮ್ಮನಿರಬೇಕಾಗಿದೆ. ಆಡಳಿತ ಯಂತ್ರದಿಂದ ಸು-ವ್ಯವಸ್ಥೆಗೆ ಒಳಗಾದ ಯಾಂತ್ರಿಕ ಕೈಗಾರಿಕೆ ಮುಖ್ಯವಾದ ಸಮಾಜದಲ್ಲಿ ಜನ ಸಮುದಾಯ ಕೇವಲ ಬಳಕೆದಾರರು ಮಾತ್ರವಾಗುತ್ತಾರೆ. ಉತ್ಪಾದಕರಿಗೆ ಹೆಚ್ಚು ಲಾಭ ತರಬಲ್ಲಂತೆ ಜನರ ಅಭಿರುಚಿಯನ್ನು 'ಅಧಿಕೃತ'ಗೊಳಿಸಲಾಗುತ್ತಿದೆ. ಬುದ್ಧಿ, ಸ್ವಭಾವಗಳೂ ಅಧಿಕೃತ, ಅಂಗೀಕೃತ ಸಾಮಾನ್ಯತೆಯತ್ತ ಒಲಿಯುತ್ತಿವೆ. ಸ್ವಂತಿಕೆಯ 'ಅಪಾಯ'ದ 'ಸಾಹಸ'ದ ಬದುಕಿಗಿಂತ ಸಾಮಾನ್ಯವಾದ ಅಪಾಯರಹಿತ ಮಾದರಿ ಬದುಕು ಉತ್ತಮವಾದದ್ದೆಂಬ ಅಭಿರುಚಿಯನ್ನು ಬೆಳೆಸಲಾಗುತ್ತಿದೆ. ಮನುಷ್ಯ ಈಗ ಸ್ವಂತ ವ್ಯಕ್ತಿತ್ವವುಳ್ಳ ವ್ಯಕ್ತಿಯಾಗುವುದಕ್ಕಿಂತ ಹೆಚ್ಚಾಗಿ ಯಾಂತ್ರಿಕ ಮನುಷ್ಯ, ವ್ಯವಸ್ಥೆಯ ಮನುಷ್ಯ, ಬಳಕೆದಾರ ಆಗುತ್ತಿದ್ದಾನೆ. ಯಾಂತ್ರಿಕ ಮನುಷ್ಯ ಅಂದರೆ ಯಂತ್ರದಂತೆ ಬದುಕುವ ಮನುಷ್ಯ ಎಂದಷ್ಟೆ ಅಲ್ಲ, ಯಂತ್ರಗಳನ್ನು ಪ್ರೀತಿಸುವವನು ಎಂದೂ ಅರ್ಥ. ಟಿ. ವಿ, ರೇಡಿಯೋ, ಸ್ಪೋರ್ಟ್ಸ್ ಕಾರು, ಸ್ಕೂಟರು, ಅಂತರಿಕ್ಷಯಾನ– ಒಟ್ಟಿನಲ್ಲಿ ಯಂತ್ರಗಳು ಮನುಷ್ಯರಿಗಿಂತ ಹೆಚ್ಚು ಆಸಕ್ತಿ ಕೆರಳಿಸುವ ವಿಷಯಗಳಾಗುತ್ತಿವೆ. ಜೀವಿಗಳನ್ನು ಪ್ರೀತಿಸಿ, ಒಲಿಸಿ ಪ್ರಭಾವಗೊಳಿಸುವುದಕ್ಕಿಂತ ನಿರ್ಜೀವ ಯಂತ್ರಗಳನ್ನು ತನ್ನ ಇಚ್ಛೆಯಂತೆ ನಡೆಸಿ ಅವುಗಳ ಮೇಲೆ ಅಧಿಕಾರ ಚಲಾಯಿಸುವುದು ಪ್ರಿಯವಾಗುತ್ತಿದೆ. ಸಾವಿರಾರು ಮೈಲು ದೂರದಲ್ಲಿರುವ ಲಕ್ಷಾಂತರ ಜನರನ್ನು, ಒಂದು ಗುಂಡಿಯೊತ್ತಿ ಯಾಂತ್ರಿಕ ಕ್ಷಿಪಣಿ ಹಾರಿಸಿ, ಕೊಲ್ಲುವ ಸಾಮರ್ಥ್ಯ ರೋಮಾಂಚಕಾರಿ ಅನ್ನಿಸುತ್ತದೆ. ಯಾಂತ್ರಿಕ ಮನುಷ್ಯನಿಗೂ ಕಾಮ, ಹಸಿವೆ ಇತ್ಯಾದಿಗಳಿದ್ದರೂ ಅವೆಲ್ಲವನ್ನೂ ಆತ ನಿರ್ಜೀವ ಯಂತ್ರಗಳ ಚೌಕಟ್ಟಿನಲ್ಲಿ ಅನುಭವಿಸುತ್ತಾನೆ. ಸಂತೋಷ, ಪ್ರೀತಿ, ಸುಖ ಇವೆಲ್ಲವೂ ಕೂಡ ಯಾಂತ್ರಿಕವಾಗಿ ಸುಮ್ಮನೆ ಶ್ರಮ ರಹಿತವಾಗಿ ದೊರಕಲೆಂದು ಬಯಸುತ್ತಾನೆ, ಸ್ಕೂಟರನ್ನು ಕಾರನ್ನು ನನ್ನ ಇಚ್ಛೆಯಂತೆ ನಡೆಸಬಲ್ಲೆ ಎಂಬಂತೆಯೇ ಹೆಣ್ಣನ್ನು ನನ್ನಿಚ್ಛೆಯಂತೆ ಕೆರಳಿಸಿ ತಣಿಸಬಲ್ಲೆ ಎಂದು ತಿಳಿಯುತ್ತಾನೆ. ಮತ್ತೊಬ್ಬ ವ್ಯಕ್ತಿಯ ಬದುಕಿನಲ್ಲಿ ಭಾಗವಹಿಸುವುದು, ಒಂದಾಗುವುದು ಪ್ರೀತಿಯ ಲಕ್ಷಣವಾದರೆ ಸುಮ್ಮನೆ ನೋಡುತ್ತ ಕೂರುವುದು, ಪ್ರೇಕ್ಷಕನಾಗಿಯೇ ಉಳಿಯುವುದು ಯಾಂತ್ರಿಕವಾಗುತ್ತದೆ. ಭಾಗವಹಿಸುವ ಕ್ರಿಯಾಶೀಲನಿಗಿಂತ ಸುಮ್ಮನೆ ಬಳಸುವ, ಸುಮ್ಮನೆ ಪ್ರೇಕ್ಷಕನಾಗುವ ಮನುಷ್ಯನನ್ನು ಯಾಂತ್ರಿಕ ಸಮಾಜವು ಬೇಡುತ್ತದೆ. ಕ್ರಮೇಣ ಮನುಷ್ಯನಲ್ಲಿ ಬದುಕಿನ ಬಗ್ಗೆ ಉದಾಸೀನ ಬೆಳೆಯುತ್ತದೆ. ಸುಮ್ಮನಿರಲಾರದೆ, ಸೃಷ್ಟಿಸಲೂ ಆಗದೆ ಸಾವಿನಿಂದ ಆಕರ್ಷಿತನಾಗುತ್ತಾನೆ. ವಿನಾಶಕಾರೀ ಮನುಷ್ಯನಾಗುತ್ತಾನೆ.

ಸಾವಿನ ವ್ಯಾಮೋಹವು ದಿನನಿತ್ಯದ ಬದುಕಿನಲ್ಲಿ ವ್ಯಕ್ತವಾಗುವ ರೀತಿಯನ್ನು ಗಮನಿಸೋಣ. ಕೊಲೆ ಎಂಬುದು ನಮ್ಮ ಮನರಂಜನೆಯ ವಸ್ತುವಾಗಿದೆ.

ಸಿನಿಮಾ, ಕಾಮಿಕ್ಸ್, ದಿನಪತ್ರಿಕೆ ಎಲ್ಲವೂ ಕೊಲೆ, ಹಿಂಸೆ, ಪಾಶವೀ ವೃತ್ತಾಂತಗಳನ್ನು ರೋಚಕವಾಗಿ ಚಿತ್ರಿಸಿ, ವರ್ಣಿಸಿ ನಮ್ಮ "ಮನ ತಣಿಸುತ್ತವೆ". ತೀರ ಸಾಮಾನ್ಯವಾದ ಬದುಕು ಸಾಗಿಸುವ ಲಕ್ಷಾಂತರ ಜನಕ್ಕೆ ಕೊಲೆಯ ಬಗ್ಗೆ ಓದುವುದೇ ನೋಡುವುದೇ ಮನಸ್ಸನ್ನು ಕೆರಳಿಸಿ ತಣಿಸುವ ಸಾಧನವಾಗುತ್ತದೆ. "ಪ್ರಾಣ ಹೋದರೂ ಕೊಡಲ್ಲ", "(ದುಡ್ಡು ಅಂದರೆ) ಸಾಯ್ತಾನೆ". "ಸತ್ತರೂ ಸರಿ—" ಇಂಥ ಎಷ್ಟು ನುಡಿಗಟ್ಟುಗಳು ನಮ್ಮ ದಿನದ ಮಾತಿನಲ್ಲಿ ಎಷ್ಟು ಬಾರಿ ಬರುತ್ತವೆ? ರಸ್ತೆಯಲ್ಲಿ ಅಪಘಾತವಾದಾಗ ನಾವು ತೋರುವ ಕುತೂಹಲ, ಉದಾಸೀನ, ನಿರ್ಲಕ್ಷ್ಯ ಎಂಥದ್ದು ? ಯೋಚನೆ ಮಾಡಿ ನೋಡಿ.

ಬೌದ್ಧಿಕತೆ ಪ್ರಧಾನವಾಗುವಂಥದು (ಇಂಟಲೆಕ್ಚುಯಲೈಸೇಷನ್), ಅಂಕಿಸಂಖ್ಯೆಗಳು ಮುಖ್ಯವಾಗುವುದು (ಕ್ವಾಂಟಿಫಿಕೇಷನ್) ಅಮೂರ್ತಗೊಳಿಸುವುದು (ಅಬ್‌ಸ್ಟ್ರಾಕ್ಟಿಫಿಕೇಷನ್), ಅಧಿಕಾರ ಯಂತ್ರಕ್ಕೆ ಮನ್ನಣೆ ಸಲ್ಲಿಸುವುದು (ಬ್ಯೂರಾಕ್ರಟೈಸೇಷನ್) ಮತ್ತು (ರೀಯಿಫಿಕೇಷನ್) ಇವು ಯಾಂತ್ರಿಕ ಸಮಾಜದ ತತ್ವಗಳಾಗಿವೆ. ಇವು ಯಂತ್ರಗಳ ತತ್ವವೇ ಹೊರತು ಮನುಷ್ಯರ ತತ್ವವಲ್ಲ. ಮನುಷ್ಯರ ಬದುಕಿನಲ್ಲೂ ಈ ತತ್ವಗಳೇ ಮುಖ್ಯವಾದಾಗ ಕ್ರಮೇಣ ಸಾವಿನ ವ್ಯಾಮೋಹ ಬಲಿಯುತ್ತದೆ. ಉದ್ರೇಕವೇ ಆನಂದವಾಗುತ್ತದೆ. ಒಡೆತನವೇ ಸಂತೋಷವಾಗುತ್ತದೆ. ಅಣುಯುದ್ಧಕ್ಕೆ ನಡೆಯುತ್ತಿರುವ ಸಿದ್ಧತೆಗಳು, ಅಣುಯುದ್ಧಕ್ಕೆ ಪ್ರಬಲ ವಿರೋಧವಿಲ್ಲದಿರುವುದು ಇವೆಲ್ಲ ನಾವು ಸಾವಿನ ಕಣಿವೆಯಲ್ಲಿ ಎಷ್ಟು ದೂರ ಸಾಗಿ ಬಂದಿದ್ದೇವೆ ಎಂಬುದರ ಸೂಚಕಗಳು. ಕಮ್ಯೂನಿಸ್ಟ್ ಮತ್ತು ಬಂಡವಾಳಶಾಹಿ ಎಂಬ ವ್ಯತ್ಯಾಸ ಇಲ್ಲಿಲ್ಲವೇ ಇಲ್ಲ. ರಷಿಯ ಆಗಲಿ, ಅಮೇರಿಕ ಆಗಲಿ, ಅಭಿವೃದ್ಧಿಶೀಲ ದೇಶಗಳಾಗಲಿ, ಯಾಂತ್ರಿಕ ಉತ್ಪಾದನೆಯ ಮಾದರಿಯ ಸಮಾಜದಲ್ಲೆಲ್ಲ ಜನರಲ್ಲಿ ಸಾವಿನ ವ್ಯಾಮೋಹ ಆಳವಾಗಿ ಬೇರು ಬಿಡುತ್ತದೆ. ಇಂದು ನಮ್ಮನ್ನು ಆಳುತ್ತಿರುವ ಯಾಂತ್ರಿಕತೆ ಮತ್ತು ಆಡಳಿತ ಶಾಹಿಯಿಂದ ಪಾರಾಗಿ ಮಾನವೀಯ ತಂತ್ರಜ್ಞಾನ ರೂಪಿಸುವುದು ಸಾಧ್ಯವೇ ಎಂಬುದು ಹಿಂದಿನ ಪ್ರಶ್ನೆಯಾಗಿದೆ.

ನಾಲ್ಕು ಕವನಗಳು

ಪರಿವರ್ತನೆ

ಮಾವಿನ ಚಿಗುರನ್ನು
ಹಕ್ಕಿ
ಹಾಡು ಮಾಡಿ ಬಿಟ್ಟಿತು.

ಹುಲ್ಲು ಗರಿಕೆಯನ್ನು
ಹಸು
ಹಾಲು ಮಾಡಿಕೊಟ್ಟಿತು.

ಸುಡುವ ಬೆಂಕಿಯನ್ನು
ಬತ್ತಿ
ಬೆಳಕು ಮಾಡಿಬಿಟ್ಟಿತು.

ಹೊಕ್ಕ ಬೇಡನನ್ನು
ಕಾಡು
ಕವಿಯ ಮಾಡಿಕೊಟ್ಟಿತು.

ಹೊಕ್ಕ ಮಣ್ಣ ಈ ಮ
ನುಷ್ಯ
ಗೋರಿ ಮಾಡಿಬಿಟ್ಟನು.

ಜವಾಬ್ದಾರಿ

ದಾರಿಗೆ
ಊರಿಗೆ, ಸೇರಿಸುವ ಜವಾಬ್ದಾರಿ

ಹೆಚ್. ಎಸ್. ವೆಂಕಟೇಶಮೂರ್ತಿ, ಕನ್ನಡ ವಿಭಾಗ, ಸೆಂಟ್ ಜೋಸೆಫ್ ಕಾಮರ್ಸ್ ಕಾಲೇಜ್, ಬೆಂಗಳೂರು 560 025

ಸೂರಿಗೆ
ಬಿಸಿಲ, ಜಾರಿಸುವ ಜವಾಬ್ದಾರಿ

ಪ್ರಶ್ನೆಗೆ
ಉತ್ತರ, ತೋರಿಸುವ ಜವಾಬ್ದಾರಿ.

ಹಕ್ಕು

ಹಕ್ಕಿಯ ಹಕ್ಕು ಬಾನು
ಹಾಗೇ
ಹುಬ್ಬಿನ ಹಕ್ಕು ಕಮಾನು

ಹಾಳೆಯ ಹಕ್ಕು ಪದ್ಯ
ಹಾಗೇ
ನಾಲಯ ಹಕ್ಕು ಸದ್ಯ

ಕೂಸಿನ ಹಕ್ಕು ಆಟ
ಹಾಗೇ
ಕಣ್ಣಿನ ಹಕ್ಕು ನೋಟ

ಹೊಟ್ಟೆಯ ಹಕ್ಕು ಹಿಟ್ಟು
ಹಾಗೇ
ಹಸಿವಿನ ಹಕ್ಕು ಸಿಟ್ಟು

ನೋಡಂ ಮತ್ತು ಮರಿ ಹಕ್ಕಿ

'ಬೇಕಾದ್ದೇನು ಹಾರೋದಕ್ಕೆ ?'
'ಟೊಂಕದ ಪಕ್ಕ ರೆಕ್ಕೆ'
'ಅಷ್ಟೇ ಸಾಕೆ ? ಯೋಚಿಸಿ ನೋಡು. ಬೇಡವೇನು ಮಾಡು ?'

'ಬೇಕಾದ್ದೇನು ಕುಕ್ಕೋದಕ್ಕೆ ?'
'ಮಾತೀಲು ಡಿ ಕೊಕ್ಕು'
'ಇಷ್ಟೇ ಸಾಕೆ ? ಯೋಚಿಸಿ ಹೇಳು. ಬೇಡವೇನು ಕಾಳು ?'

'ಬೇಕಾದ್ದೇನು ಬದುಕೋದಕ್ಕೆ ?'
'ಅಮ್ಮನ ಪ್ರೀತಿಯ ತೆಕ್ಕೆ'
'ಇಷ್ಟೇ ಸಾಕೆ ? ಬೇಡವೆ ಹೇಳು. ನಿನ್ನದೆ ಸ್ವಂತ ಬಾಳು'.

—ಎಚ್. ಎಸ್. ವೆಂಕಟೇಶಮೂರ್ತಿ

ಪ್ರೊ. ಜಿ. ಎಸ್. ಶಿವರುದ್ರಪ್ಪ ಅವರಿಗೆ 'ಗೌರವ'

ಗ್ರಂಥವನ್ನು 1987ರ ರಾಜ್ಯೋತ್ಸವದ ಸಂದರ್ಭದಲ್ಲಿ ಬಿಡುಗಡೆ ಮಾಡಲು ಅಭಿನಂದನಾ ಸಮಿತಿ ನಿರ್ಧರಿಸಿದೆ. ಮುಂಗಡ ಹಣ ಸಲ್ಲಿಸಿರುವವರಿಗೆ ಪುಸ್ತಕ ಬಿಡುಗಡೆ ಯಾದ ಕೂಡಲೆ ಕಳುಹಿಸಿಕೊಡಲಾಗುವುದು.

ಶೂದ್ರಕ್ಕೆ ಶುಭಾಶಯಗಳು :

ಲಲಿತಾ ಶ್ರೀನಿವಾಸ್ (ಕಪ್ಪಣ್ಣ)

ಬೆಂಗಳೂರು

ಕನ್ನಡ ಫಂಟಮಾರಾ

—ಜಿ. ರಾಜಶೇಖರ

ಒಂದು ಭಾಷೆಯ ಸಾಹಿತ್ಯ ಕೃತಿ ಇನ್ನೊಂದು ಭಾಷೆಗೆ ಯಾಕೆ ಅನುವಾದವಾಗುತ್ತದೆ? ಅನುವಾದದ ಮುಖಾಂತರ ಆ ಸಂಸ್ಕೃತಿಯ ಪರಿಚಯವಾಗುತ್ತದೆ; ಅಂತಹ ಪರಿಚಯ, ನಮ್ಮನ್ನು ನಾವೇ ಅರಿತುಕೊಳ್ಳುವ ಸೂಕ್ಷ್ಮಜ್ಞತೆಯನ್ನು ಬೆಳೆಸಬಲ್ಲದು ಎನ್ನುವುದು ಸಾಮಾನ್ಯವಾದ ಉತ್ತರ. ಒಂದು ಸರ್ವಸಾಮಾನ್ಯ ಹೇಳಿಕೆಯಾಗಿ ಅದು ನಿಜವಾದರೂ ಅದಷ್ಟೇ ನಿಜವಲ್ಲ. ಕನ್ನಡದ್ದೇ ಉದಾಹರಣೆ ತೆಗೆದುಕೊಂಡರೆ, 19ನೆಯ ಶತಮಾನದವರೆಗಿನ ಕನ್ನಡದ ಹೆಚ್ಚಿನ ಕೃತಿಗಳು ಸಂಸ್ಕೃತಕ್ಕೆ ಋಣಿಯಾಗಿವೆ. ಇವೆಲ್ಲವೂ ಸಂಸ್ಕೃತದ ಮೂಲ ಕೃತಿಗಳ ನೇರ ಅನುವಾದಗಳಲ್ಲದಿದ್ದರೂ, ಪ್ರೇರಣೆ, ಸ್ಫೂರ್ತಿ, ಭಾವಾನುವಾದ, ಮೂಲದ ಚೌಕಟ್ಟಿಗೆ ಸ್ವಂತದ್ದನ್ನೂ ಸೇರಿಸುವುದು— ಹೀಗೆ ಅನುವಾದದ ಅಂಶಗಳನ್ನು ಹೊಂದಿರುವ ಕೃತಿಗಳು. ಈ ಪ್ರಕ್ರಿಯೆಗೆ—ಅದಕ್ಕೆ ಬೇಕಾದ ಹೆಸರು ಕೊಡಿ - ಸಾಹಿತ್ಯಾಭಿರುಚಿಯ ಜೊತೆಗೆ ಧರ್ಮದ ಮತ್ತು ಸತ್ತೆಯ ಉದ್ದೇಶಗಳೂ ಇದ್ದವು. ಇಪ್ಪತ್ತನೆಯ ಶತಮಾನದ ಕನ್ನಡದ ಸಾಹಿತ್ಯದ ಪ್ರಕಾರಗಳಂತೂ ಇಂಗ್ಲೀಷಿನಿಂದಲೇ ಬಂದವು. ಆಧುನಿಕ ಕನ್ನಡದ ಅನುವಾದಿತ ಕೃತಿಗಳಲ್ಲಿ ಹೆಚ್ಚಿನವು ಇಂಗ್ಲೀಷ್ ಕೃತಿಗಳ ಅನುವಾದಗಳು : ಇತರ ಭಾಷೆಗಳ ಕೃತಿಗಳ ಅನುವಾದಗಳಾದರೂ ಇಂಗ್ಲೀಷಿನ ಮೂಲಕವೇ ಕನ್ನಡಕ್ಕೆ ಬಂದಂತಹವು. ಇನ್ನೊಂದು ಸಂಸ್ಕೃತಿಯ ಪರಿಚಯದ ತವಕವೊಂದೇ ಅನುವಾದಕ್ಕೆ ಪ್ರೇರಣೆ ಆಗಿದ್ದಿದ್ದರೆ, ಜಗತ್ತಿನ ಎಲ್ಲ ಭಾಷೆಗಳಿಂದಲೂ ಉತ್ತಮ ಸಾಹಿತ್ಯ ಕೃತಿಗಳು ಕನ್ನಡಕ್ಕೆ ಅನುವಾದವಾಗಬೇಕಿತ್ತು. ಕಡೆಯ ಪಕ್ಷ ನಮ್ಮ ಸೋದರ ಭಾಷೆಗಳು ಮತ್ತು ನಮ್ಮ ನೆರೆಹೊರೆಯ ದೇಶಗಳ ಉತ್ತಮ ಕೃತಿಗಳಾದರೂ ನಮಗೆ ಅನುವಾದಗಳಲ್ಲಿ ಲಭ್ಯವಾಗಬೇಕಾಗಿತ್ತು. ಹಾಗೆಯೇ ಕನ್ನಡದ ಕೃತಿಗಳೂ ಇತರ ಭಾಷೆಗಳಿಗೆ ಅನುವಾದಗೊಳ್ಳಬೇಕಿತ್ತು. ಆದರೆ ಕನ್ನಡದ ಅನುವಾದಿತ ಸಾಹಿತ್ಯವೆಂದರೆ ಬಹುಮಟ್ಟಿಗೆ ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಗೊಂಡ

(ಫಂಟಮಾರಾ - ಇಗ್ನೇಸಿಯೋ ಸಿಲೋನೆ-ಕನ್ನಡ ಅನುವಾದ-ಕು. ಶಿ. ಹರಿದಾಸ ಭಟ್ಟ — ಅಂತರಂಗ ಕಾರ್ಯಾಲಯ - ಉಡುಪಿ-1950.)

ಜಿ. ರಾಜಶೇಖರ, ಡಿವಿಜನಲ್ ಆಫೀಸ್, ಭಾರತ ಜೀವ ವಿಮೆ ಕಚೇರಿ ಉಡುಪಿ

ಸಾಹಿತ್ಯವಷ್ಟೇ ಆಗಿದೆ. ಜೊತೆಗೆ ಈ ಪ್ರಕ್ರಿಯೆ ಎಂದೂ ಕೊಡಾ ಕೊಡುಕೊಳ್ಳುವಿಕೆಯ ಸಂಬಂಧವಾಗದೆ, ಮೊದಲು ಸಂಸ್ಕೃತದಿಂದ, ಈಗ ಇಂಗ್ಲೀಷಿನಿಂದ ಮೂಲ ಮಾದರಿಗಳನ್ನು ಪಡೆಯುವ ಏಕಮುಖಗತಿಯುಳ್ಳದ್ದೂ ಆಗಿದೆ.

ನವೋದಯ ಕನ್ನಡ ಕಾವ್ಯದ ಆದ್ಯ ಪ್ರವರ್ತಕರಲ್ಲಿ ಬಿ.ಎಂ. ಶ್ರೀಯವರು ಪ್ರಮುಖರು. ಅವರ "ಇಂಗ್ಲೀಷ್ ಗೀತೆಗಳು" ಆಧುನಿಕ ಕನ್ನಡದ ಮಹತ್ವದ ಕೃತಿಗಳಲ್ಲಿ ಒಂದು. ಹೆಸರೇ ಹೇಳುವಂತೆ, ಅದು ಇಂಗ್ಲೀಷ್ ಕವಿತೆಗಳ ಅನುವಾದ. ಆದರೆ 19ನೆಯ ಶತಮಾನದ ಯುರೋಪ್‌ನ ಚರಿತ್ರೆಯ ಆಕಸ್ಮಿಕ ತಿರುವುಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ, ಭಾರತ ಇಂಗ್ಲೆಂಡ್‌ನ ಬದಲು ಫ್ರಾನ್ಸ್‌ನ ವಸಾಹತು ಆಗಿದ್ದರೆ, ಶ್ರೀಯವರ ಅನುವಾದ 'ಇಂಗ್ಲೀಷ್ ಗೀತೆಗಳು' ಬದಲು 'ಫ್ರೆಂಚ್ ಗೀತೆಗಳು' ಆಗುತ್ತಿತ್ತು ಅಲ್ಲವೆ? ಕನ್ನಡಕ್ಕಾಗಿ ತುಂಬ ದುಡಿದ ಆ ಹಿರಿಯರ ಬಗ್ಗೆ ನಾನು ಕುಚೋದ್ಯದಲ್ಲಿ ಇದನ್ನು ಹೇಳುತ್ತಿಲ್ಲ. ಅನುವಾದ ಮತ್ತು ಪ್ರೇರಣೆಗಳ ಮಟ್ಟಿಗೆ ಚರಿತ್ರೆ ಕನ್ನಡವಂತಹ ಭಾಷೆಗಳಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ. ಇಂಗ್ಲೀಷ್ ಇಂದು ಜಗತ್ತಿನ ಎಲ್ಲೆಡೆ ವ್ಯಾಪಿಸಿರುವ ಭಾಷೆ; ಅದರ ಜ್ಞಾನ ಭಂಡಾರವೂ ಹಿರಿದಾದದ್ದು; ಕನ್ನಡಕ್ಕೆ ಅನುವಾದವಾಗಿರುವ ಮತ್ತು ನಮ್ಮ ಗೌರವ ಪಡೆದುಕೊಂಡಿರುವ ಇಂಗ್ಲಿಷಿನ ಕೃತಿಗಳು ವಿಶ್ವ ಸಾಹಿತ್ಯದ ಶ್ರೇಷ್ಠ ಕೃತಿಗಳು ಎಂಬ ಸತ್ಯಗಳನ್ನು ಅಲ್ಲಗಳೆಯದೆಯೂ, ನಾವು ಈ ಅಂಶವನ್ನು ಗಮನದಲ್ಲಿಡಬೇಕು.

ಇಟಾಲಿಯನ್ ಲೇಖಕ ಇಗ್ನೇಸಿಯೋ ಸಿಲೋನೆಯ 'ಫಂಟಮಾರಾ' ಕಾದಂಬರಿಯ ಕನ್ನಡ ಅನುವಾದ ಈ ಹಿನ್ನೆಲೆಯಲ್ಲಿ ಮಹತ್ವದ್ದಾಗಿದೆ. ಕು. ಶಿ. ಹರಿದಾಸ ಭಟ್ಟರು ಮಾಡಿದ ಈ ಅನುವಾದ 1950ರಲ್ಲಿ ಪ್ರಕಟವಾಯಿತು. ಹರಿದಾಸ ಭಟ್ಟರು ಆ ವೇಳೆಗಾಗಲೇ ಒಬ್ಬ ಸಮರ್ಥ ಗದ್ಯ ಲೇಖಕ ಮತ್ತು ಅನುವಾದಕ ಎಂದು ಹೆಸರು ಮಾಡಿದ್ದರು. 'ಫಂಟಮಾರಾ'ದ ಅನುವಾದವನ್ನು ಅವರು ಅದರ ಇಟಾಲಿಯನ್ ಮೂಲ ಮತ್ತು ಇಂಗ್ಲೀಷ್ ಅನುವಾದ, ಎರಡನ್ನೂ ಎದುರಿಗಿಟ್ಟುಕೊಂಡು ಮಾಡಿದ್ದರು. ಅವರ ಅನುವಾದದ ಗದ್ಯ ಶೈಲಿ, ವಾಕ್ಯ ರಚನೆ, ಸಂಭಾಷಣೆ ಮತ್ತು ನುಡಿಕಟ್ಟುಗಳು ಅಪ್ಪಟ ಕನ್ನಡದವು. ಕಾದಂಬರಿಯನ್ನು ಓದುತ್ತಿದ್ದರೆ ಅದು ಅನುವಾದ ಎಂದು ಅನ್ನಿಸುವುದೇ ಇಲ್ಲ. ಹಾಗೆಂದು ಅನುವಾದದ ವಾಕ್ಯಗಳನ್ನು ಇಂಗ್ಲೀಷ್ ಆವೃತ್ತಿಯ ಜೊತೆ ಹೋಲಿಸಿದರೆ, ಹರಿದಾಸ ಭಟ್ಟರು ಪ್ರತಿಯೊಂದು ವಾಕ್ಯ ಮತ್ತು ವಿವರಗಳಲ್ಲೂ ಮೂಲಕ್ಕೆ ಅತ್ಯಂತ ನಿಷ್ಠರಾಗಿರುವುದು ಕಂಡುಬರುತ್ತದೆ. ಕಥಾನಕವನ್ನು ಕನ್ನಡದ ಜಾಯಮಾನಕ್ಕೆ ಹೊಂದಿಸಿಕೊಳ್ಳಲೆಂದು ಅವರು ಸುಲಭದ ಸ್ವಾತಂತ್ರ್ಯವನ್ನು ವಹಿಸಿಲ್ಲ. ಮೂಲಕ್ಕೆ ನಿಷ್ಠನಾಗಿದ್ದೂ,

ತನ್ನದೇ ಭಾಷೆಯ ಕೃತಿ ಎಂಬಂತೆ ಅನುವಾದಿಸುವ ಕಷ್ಟ ಸಾಧ್ಯವಾದ ಕೆಲಸವನ್ನು ಹರಿದಾಸ ಭಟ್ಟರು ಮಾಡಿದ್ದಾರೆ. ಇವತ್ತಿಗೂ ಇದು ಕನ್ನಡದ ಶ್ರೇಷ್ಠ ಅನುವಾದಗಳಲ್ಲಿ ಒಂದಾಗಿದೆ.

'ಫಂಟಮಾರಾ' ದಕ್ಷಿಣ ಇಟಲಿಯ ಕುಗ್ರಾಮವೊಂದರ ಕಥೆ. ದಕ್ಷಿಣ ಇಟಲಿ ಕೃಷಿ ಪ್ರಧಾನವಾಗಿದ್ದು ಹಿಂದುಳಿದ ಪ್ರದೇಶ ಎಂದು ಪರಿಗಣಿಸಲ್ಪಟ್ಟಿದೆ. ಅಲ್ಲಿನ ಬಹುತೇಕ ಜನ ಬಡ ರೈತರು ; ಹೆಚ್ಚಿನವರು ಅನಕ್ಷರಸ್ಥರು. ಬಹುಷಃ ಈ ಕಾರಣಕ್ಕೇನೇ ಅಲ್ಲಿ ಕ್ಯಾಥೊಲಿಕ್ ಚರ್ಚ್‌ನ ಪ್ರಭಾವವೂ ಜಾಸ್ತಿ. ಸಿಲೋನೆ ಆ ಪ್ರದೇಶದ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದವನು. ಅವನ ಎಲ್ಲ ಕಾದಂಬರಿಗಳೂ, ಅವನೇ ಒಂದೆಡೆ ಹೇಳಿಕೊಂಡಿರುವಂತೆ, ಅವನು ಹುಟ್ಟಿದ ಹಳ್ಳಿ ಮತ್ತು ಆ ಪ್ರದೇಶದ ಬದುಕಿನ ಚಿತ್ರಣಗಳಷ್ಟೇ ಆಗಿವೆ. ಸಿಲೋನೆ ಬಹಳ ಎಳೆಯ ಪ್ರಾಯದಿಂದಲೂ ಸಮಾಜವಾದೀ ತತ್ವಗಳ ಕಡೆಗೆ ಆಕರ್ಷಿತನಾದವನು. ಚರ್ಚ್‌ನ ಶಾಲೆಯೊಂದರಲ್ಲಿ ಆತ ಶಿಕ್ಷಣ ಪಡೆದಿದ್ದ. ತನ್ನ ಹಳ್ಳಿಯ ಚರ್ಚ್, ಯಾವಾಗಲೂ ಭೂಮಾಲಕರು ಮತ್ತು ಸಿರಿವಂತರ ಜೊತೆಗೇ ಶಾಮೀಲಾಗುತ್ತಿದ್ದುದನ್ನು ಆತ ಚಿಕ್ಕ ವಯಸ್ಸಿನಲ್ಲಿಯೇ ಗುರುತಿಸಿದ್ದ. 'ಫಂಟಮಾರಾ' ಕಾದಂಬರಿಯಲ್ಲಿಯೂ ಸಿಲೋನೆ, ಹಳ್ಳಿಯ ಬಡ ರೈತರ ಪರದಾಟ, ಅವರ ಸಾಲದ ಹೊರೆ, ಬೆಳೆದ ಫಸಲಿಗೆ ಕಡಿಮೆ ದರ, ಅವರ ದುಡಿಮೆಗೆ ಕಡಿಮೆ ಸಂಬಳ, ಪಟ್ಟಣಗಳ ವಕೀಲರು ಮತ್ತು ಅಧಿಕಾರಿಗಳು ರೈತರನ್ನು ಸದಾ ವಂಚಿಸುವುದು, ಪಾದ್ರಿಗಳು ಮತ್ತು ಪ್ರಧಾರಿಗಳು ಈ ರೈತರಿಗೆ ಮಾಡುವ ವಿಶ್ವಾಸದ್ರೋಹ ಮುಂತಾದ ಸಂಗತಿಗಳನ್ನು ಸಮಾಜವಾದಿ ಲೇಖಕನಿಗೆ ಮಾತ್ರ ಕಾಣಿಸುವ ಸಂಗತಿಗಳನ್ನು ಚಿತ್ರಿಸುತ್ತಾನೆ. ಆದರ ಜೊತೆಗೆ, ಸಿಲೋನೆಯ ಕಾದಂಬರಿಯಲ್ಲಿ ಈ ಬಡ ರೈತರ ಕುಟುಂಬ ಜೀವನದ ಪಡಿಪಾಟಲುಗಳು, ಜಗಳಗಳು, ಚಾಡಿ, ಪ್ರೇಮ ಹಾದರ ಅವರ ಸಣ್ಣತನಗಳು ಜಾನಪದದ ರೂಪ ಪಡೆದ ಅವರ ಕ್ರಿಶ್ಚಿಯನ್ ಶ್ರದ್ಧೆ ಮುಂತಾದ 'ಸೂಕ್ಷ್ಮಜ್ಞನೊಬ್ಬ' ಮಾತ್ರ ಗುರುತಿಸಬಲ್ಲ ವಿವರಗಳು ಕೂಡಾ ಮುಖ್ಯ ಸ್ಥಾನ ಪಡೆದುಕೊಳ್ಳುತ್ತವೆ. ಇದರಿಂದಾಗಿ ಅವನ ಕಾದಂಬರಿ ಒರಿಯ ಹೇಳಿಕೆಗಳ ಅಥವಾ ಮಾಹಿತಿಗಳ ಸಂಗ್ರಹವಾಗದೆ, ಆಳವಾದ ಮಾನವೀಯ ಸಂವೇದನೆಯ ಕಥಾನಕವಾಗುತ್ತದೆ.

'ಫಂಟಮಾರಾ'ದ ಮುನ್ನುಡಿಯಲ್ಲಿ ಸಿಲೋನೆ ಹೀಗೆ ಬರೆಯುತ್ತಾನೆ. "ಬದುಕಿನಲ್ಲಿ ಮುಖ್ಯವಾದ ಸಂಗತಿಗಳು—ಹುಟ್ಟು, ಸಾವು, ಸಂಕಟ ಮತ್ತು ಪ್ರೀತಿ ಎಲ್ಲರಿಗೂ ಒಂದೇ. ಹಾಗೆಂದು ಜನ ಅವುಗಳ ಬಗ್ಗೆ ಮಾತಾಡಿಕೊಳ್ಳುವುದನ್ನೇನೂ ನಿಲ್ಲಿಸುವುದಿಲ್ಲ". ಸಿಲೋನೆ ಕಾದಂಬರಿಯಲ್ಲಿ ತನಗೆ ಚೆನ್ನಾಗಿ ಗೊತ್ತಿದ್ದ ತನ್ನ ಬಾಲ್ಯದ

ಹಳ್ಳಿಯನ್ನು ವರ್ಣಿಸಿದ್ದ. ಆ ಹಳ್ಳಿಯ ಜನ ನಿತ್ಯ ತಿನ್ನುವ ಕರಿ ಬ್ರೆಡ್ಡಿನ ಧಾನ್ಯದಿಂದ ಹಿಡಿದು, ಜಗಳಗಳಲ್ಲಿ ಅವರು ಉಪಯೋಗಿಸುವ ಬೈಗುಳ ಮತ್ತು ಆಣೆ ಭಾಷೆಯ ಶಬ್ದಗಳವರೆಗೆ, ಆ ಕಾದಂಬರಿಯ ಎಲ್ಲ ವಿವರಗಳೂ ದಕ್ಷಿಣ ಇಟಲಿಯ ಆ ಪ್ರದೇಶಕ್ಕೇ ವಿಶಿಷ್ಟವಾದವುಗಳು. ಕಾರಂತರ ಕಾದಂಬರಿಗಳ ಕಡಲತೀರದ ಹಳ್ಳಿಗಳು ಮತ್ತು ಕುವೆಂಪು ಕಾದಂಬರಿಗಳ ಮಲೆನಾಡಿನ ಹಳ್ಳಿಗಳ ಹಾಗೆ ಈ ಕಾದಂಬರಿಯ ಹಳ್ಳಿಯ ಚಿತ್ರಣವೂ ತನ್ನ ವಿವರಗಳಲ್ಲಿ ದಟ್ಟವಾದದ್ದು ಮತ್ತು ಅನನ್ಯವಾದದ್ದು. ವಿವರಗಳ ಈ ಅನನ್ಯತೆಯನ್ನೂ, ಪ್ರದೇಶ ನಿಷ್ಠತೆಯನ್ನೂ ಸಿಲೋನೆ, ತನ್ನ ಮುನ್ನುಡಿಯಲ್ಲಿ ಹೀಗೆ ವಿವರಿಸುತ್ತಾನೆ. "ಬಡ ರೈತರು—ನೆಲವನ್ನು ಉತ್ತಿ ಬಿತ್ತಿ ಬೆಳೆ ತೆಗೆದೂ ಸದಾ ಹಸಿದಿರುವ ರೈತರು ಜಗತ್ತಿನ ಎಲ್ಲೆಡೆ ಇದ್ದಾರೆ. ಆದರೆ ಒಂದೇ ತರದ ಇಬ್ಬರನ್ನು ನೀವು ಎಲ್ಲಿಯೂ ಕಾಣಲಾರಿರಿ".

'ಮರಳಿ ಮಣ್ಣಿಗೆ' ಮತ್ತು 'ಕಾನೂರು ಹೆಗ್ಗಡಿತಿ' ಕಾದಂಬರಿಗಳ ಹಾಗೆ 'ಫಂಟ ಮಾರಾ' ಕೂಡಾ ಅನನ್ಯವಾದ ಪ್ರಾದೇಶಿಕ ವಿವರಗಳಿಂದಲೇ ವ್ಯಕ್ತಿಗಳ ಬಾಳನ್ನೂ, ಸಮಾಜದ ಸ್ಥಿತಿಯನ್ನೂ ಚಿತ್ರಿಸುವ ಕಾದಂಬರಿ. ಆದರೆ ಕನ್ನಡದ ಈ ಕಾದಂಬರಿಗಳಿಗೆ ಇಲ್ಲದ ಒಂದು ವಿಲಕ್ಷಣತೆ 'ಫಂಟಮಾರಾ'ಕ್ಕಿದೆ. ಕಾರಂತರ ಕಾದಂಬರಿಯ ಕೋಟದಲ್ಲಾಗಲೀ, ಪುಟ್ಟಪ್ಪನವರ ಕಾನೂರಿನಲ್ಲಾಗಲೀ ರಾಜಕೀಯ ಪ್ರಭುತ್ವ ಮನೆಯ ಒಳಗೇ ಬಂದು ಸ್ಥಾಪಿತವಾಗಿ, ಪ್ರತಿಕ್ಷಣವೂ ಎದುರಾಗುವ ಅನಿಷ್ಟವಾಗಿಲ್ಲ. ಈ ಹಳ್ಳಿಗಳ ಬದುಕಿಗೂ ರಾಜಕೀಯ ವ್ಯವಸ್ಥೆಗೂ ಸಂಬಂಧವಿದ್ದರೂ, ವ್ಯವಸ್ಥೆ ಇಲ್ಲಿನ ಜನರ ಅಂತರಂಗವನ್ನೇ ಆಕ್ರಮಿಸುವಂತಹದ್ದಲ್ಲ. ಪ್ರಭುತ್ವ ಆಚೆ ನೂಕಲಾರದ ಆಸಕ್ತಿಗಳು ಮತ್ತು ವ್ಯಸನಗಳು ಈ ಪಾತ್ರಗಳಿಗೆ ಇವೆ. ಆದರೆ 'ಫಂಟಮಾರಾ'ದ ಸ್ಥಿತಿ ಇದಕ್ಕೆ ತದ್ವಿರುದ್ಧವಾದದ್ದು. ಕಾದಂಬರಿಯ ಕಾಲ, ಇಟಲಿಯಲ್ಲಿ ಫ್ಯಾಸಿಸ್ಟರು ಅಧಿಕಾರದಲ್ಲಿದ್ದ ಅವಧಿ. ಕಮ್ಯೂನಿಸ್ಟ್ ಟ್ರೇಡ್ ಯೂನಿಯನ್ನುಗಳನ್ನು ಮತ್ತು ಸಮಾಜವಾದೀ ಸಂಘಟನೆಗಳನ್ನು, ದುಂಡಾವರ್ತಿಯಿಂದ ನಾಶಪಡಿಸುವ ಕೆಲಸಗಳಿಂದ ಇಟಲಿಯಲ್ಲಿ ತಮ್ಮ ಚಟುವಟಿಕೆ ಪ್ರಾರಂಭಿಸಿದ ಫ್ಯಾಸಿಸ್ಟರು ಕ್ರಮೇಣ, ಜನಜೀವನದ ಎಲ್ಲ ರಂಗಗಳಲ್ಲೂ ತಮ್ಮ ಯಜಮಾನಿಕೆ ಸ್ಥಾಪಿಸಿದರು. ಮುಸ್ಸೊಲಿನಿ ಅಧಿಕಾರಕ್ಕೆ ಬಂದ ಮೇಲಂತೂ ಫ್ಯಾಸಿಸ್ಟ್ ಸರಕಾರದ ಹದ್ದುಗಣ್ಣಿನಿಂದ ಯಾವ ಪ್ರಜೆಯೂ ತಪ್ಪಿಸಿಕೊಳ್ಳಲಾರದ ಸ್ಥಿತಿ ಬಂದಿತು. ಫ್ಯಾಸಿಸ್ಟ್ ಪಕ್ಷದ ಕರಿ ಅಂಗಿಯ ಸಮವಸ್ತ್ರದ ಗೂಂಡಾಗಳು ಹಳ್ಳಿಗಳಲ್ಲೂ ದಾಂಧಲೆ ನಡೆಸಲು ಆರಂಭಿಸಿದರು. ಬಂಡವಾಳಶಾಹಿಗಳು, ಭೂಮಾಲಕರು ಮತ್ತು ಕ್ರಿಶ್ಚಿಯನ್ ಧರ್ಮಗುರುಗಳ ಬೆಂಬಲ ಪಡೆದಿದ್ದ ಫ್ಯಾಸಿಸಂ ದೇಶ ಪ್ರೇಮ, ದೇಶ ರಕ್ಷಣೆಗಳ ಹೆಸರಿನಲ್ಲಿ ಎಲ್ಲ ಪ್ರಜೆಗಳನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳ ಬಯಸಿದ ಸರ್ವಾಧಿಕಾರೀ ಸರಕಾರವೊಂದನ್ನು ಸ್ಥಾಪಿ

ಸಿತು. ಕಮ್ಯೂನಿಸ್ಟರು, ಸಮಾಜವಾದಿಗಳು, ಟ್ರೇಡ್ ಯೂನಿಯನ್ ಕಾರ್ಯಕರ್ತರು ದೇಶದ್ರೋಹಿಗಳು ಎಂದು ಪರಿಗಣಿಸಲ್ಪಟ್ಟರು. ಕೊಲೆ, ಬಂಧನ, ಸಜೀವ ಹಿಂಸೆ, ಗಡೀಪಾರು— ಇವು ಯಾವ ಕ್ಷಣದಲ್ಲಿ ಯಾರ ಮೇಲೆ ಎರಗೀತು ಎಂದು ಹೇಳಲಾರದ ಭಯ ಆತಂಕಗಳ ಸ್ಥಿತಿ ಇಡೀ ದೇಶವನ್ನೇ ಆವರಿಸಿತ್ತು. ಇಟಲಿ ಮಾತ್ರವಲ್ಲ, ಇಡೀ ಯುರೋಪ್ ಖಂಡವಲ್ಲೇ ಒಲಪಂಥೀಯ ಸರ್ವಾಧಿಕಾರದ ಕರಿ ನೆರಳು ವ್ಯಾಪಿಸಿತ್ತು. ಜರ್ಮನಿಯಲ್ಲಿ ಹಿಟ್ಲರ್, ಸ್ಪೇನ್‌ನಲ್ಲಿ ಫ್ರಾಂಕೋ, ಇಟಲಿಯ ಫ್ಯಾಸಿಸ್ಟರ ದಬ್ಬಾಳಿಕೆಯ ಕ್ರಮಗಳನ್ನು ತಾವೂ ತಮ್ಮ ದೇಶಗಳಲ್ಲಿ ಅನುಸರಿಸಿದ್ದರು. ಈ ನಾಯಕರು ಯುರೋಪ್ ಖಂಡವನ್ನು ಎರಡನೆಯ ಮಹಾಯುದ್ಧಕ್ಕೆ ಅಣಿಗೊಳಿಸಿದ್ದರು.

ಸಿಲೋನೆಯ ಕಾದಂಬರಿ, ಇಟಲಿಯ ಫಂಟಮಾರಾ ಎಂಬ ಹೆಸರಿನ ಬಡ ಹಳ್ಳಿಯ ಜನ, ಈ ರಾಜಕೀಯ ವಿದ್ಯಮಾನಗಳನ್ನು ಹೇಗೆ ಎದುರಿಸಿದರು ಎಂಬುದರ ಕಥಾನಕವಾಗಿದೆ. ಈ ಹಳ್ಳಿಯ ರೈತರು ಮೊದಮೊದಲು ಫ್ಯಾಸಿಸ್ಟರ ದೌರ್ಜನ್ಯಗಳನ್ನು ಮೂಕವಾಗಿ ಅನುಭವಿಸುತ್ತಾರೆ, ಆದರೆ ಈ ಅನುಭವದಿಂದ ಅವರು ಅನೇಕ ಸಂಗತಿಗಳನ್ನು ಅರಿತುಕೊಳ್ಳುತ್ತಾರೆ. ತಾವು ಗಾಢವಾಗಿ ನಂಬಿದ್ದ ಚರ್ಚ್ ತಮ್ಮ ಕಡೆ ಇಲ್ಲ; ತಮ್ಮ ಮತಗಳನ್ನು ಪಡೆದು ಚುನಾಯಿತರಾಗಿದ್ದ ಪುಢಾರಿಗಳು ಹಗಲು ದರೋಡೆಯವರು; ಪಟ್ಟಣದ ನಾಗರೀಕರಿಗೆ ತಾವು ತಮಾಷೆಯ ವಸ್ತುಗಳು; ತಮ್ಮ ದುಡಿಮೆಗೆ ಯೋಗ್ಯ ಸಂಬಳ ಕೇಳುವುದು ದೇಶದ್ರೋಹ, ತಮ್ಮ ಹೊಲದ ನೀರು ಶ್ರೀಮಂತರ ತೋಟಗಳತ್ತ ಹರಿದರೆ, ಲೇವಾದೇವಿಯವರು ತಮ್ಮ ಸಾಲಕ್ಕೆ ವಿಪರೀತ ಬಡ್ಡಿ ದರ ಹಾಕಿದರೆ, ಕರಿ ಅಂಗಿಯವರ ತಮ್ಮ ಹೆಂಗಸರ ಮಾನ ಕೆಡಿಸಿದರೆ, ಅವುಗಳನ್ನು ಪ್ರಶ್ನಿಸುವುದು ಕ್ರಿಮಿನಲ್ ಅಪರಾಧ—ಇವೇ ಮುಂತಾದ ಕಠೋರ ವಾಸ್ತವಗಳನ್ನು ರೈತರು ಈಗ ಮನಗಾಣುತ್ತಾರೆ. ತಮ್ಮ ಜೀವನದಲ್ಲಿಯೇ ಮೊದಲ ಬಾರಿಗೆ ಈ ರೈತರು ಎಲ್ಲ ಆಸರೆಗಳನ್ನು ಕಳೆದುಕೊಂಡ ಅನಾಥಭಾವವನ್ನು ಅನುಭವಿಸುತ್ತಾರೆ. ಆದರೆ ಈ 'ಅಸಹಾಯಕತೆಯೇ ಅವರ ಶಕ್ತಿಯೂ ಆಗುತ್ತದೆ. ರೈತರು ಕಂಗಾಲಾಗಿ ಕೂರದೆ ಫ್ಯಾಸಿಸ್ಟರ ವಿರುದ್ಧ ಹೋರಾಡುವ ನಿಶ್ಚಯ ಮಾಡುತ್ತಾರೆ. ಈಗ ಅವರಿಗೆ ಕಳೆದುಕೊಳ್ಳಲು ಏನೂ ಉಳಿದಿಲ್ಲ. ಮೊದಲು ತಮ್ಮ ಹಳ್ಳಿಯ ಚರ್ಚಿಗೆ ಒಬ್ಬ ಪೂರ್ಣಾವಧಿಯ ಪಾದ್ರಿ ಬೇಕು ಎಂದು ಅರ್ಜಿ ಹಾಕುತ್ತಿದ್ದ ರೈತರು ಈಗ ಫ್ಯಾಸಿಸ್ಟ್ ಆಡಳಿತದ ವಿರುದ್ಧ ಒಂದು ಭೂಗತ ಪತ್ರಿಕೆ ಹೊರಡಿಸುವ ನಿರ್ಧಾರ ಮಾಡುತ್ತಾರೆ.

ಸಿಲೋನೆಯ ಕಾದಂಬರಿ ಮೊದಲ ಬಾರಿಗೆ 1933 ರಲ್ಲಿ ಅದರ ಜರ್ಮನ್ ಅನುವಾದದಲ್ಲಿ ಪ್ರಕಟವಾಯಿತು. ಕಾದಂಬರಿಯ ಮೂಲ ಇಟಾಲಿಯನ್ ಆವೃತ್ತಿ

ಫ್ಯಾಸಿಸ್ಟರು ಅಧಿಕಾರದಲ್ಲಿ ಇರುವವರೆಗೆ ಪ್ರಕಟವಾಗುವುದು ಸಾಧ್ಯವೇ ಇರಲಿಲ್ಲ. ಮುಸ್ಸೊಲಿನಿಯ ಪದಚ್ಯುತಿಯ ನಂತರ 1947ರಲ್ಲಿ ಅದು ಇಟಲಿಯಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು. ಸಿಲೋನೆಯ ಕಾದಂಬರಿಯ ಬಗ್ಗೆ ಫ್ಯಾಸಿಸ್ಟರಿಗಿದ್ದ ಭಯ ಸಕಾರಣವಾದದ್ದೇ ಆಗಿತ್ತು. ಅದು, ಅವರ ದುಷ್ಟತನದ ಯಥಾವತ್ತಾದ ಚಿತ್ರಣ ಮಾತ್ರ ಆಗಿರಲಿಲ್ಲ; ಅವರ ದುರಾಡಳಿತದ ವಿರುದ್ಧ ಜನ ದಂಗೆ ಏಳುವಂತೆ ಪ್ರಚೋದಿಸುವಂತಹದ್ದೂ ಆಗಿತ್ತು. ಪಿಕಾಸೋನ ವರ್ಣಚಿತ್ರ 'ಗೆರ್ನಿಕಾ'ದಂತೆ ಸಿಲೋನೆಯ 'ಫಂಟಮಾರಾ' ಕೂಡಾ ಫ್ಯಾಸಿಸ್ಟರ ಕ್ರೌರ್ಯದ ಪ್ರತಿಮೆ ಮತ್ತು ಅದಕ್ಕೆ ತುತ್ತಾದ ಮುಗ್ಧರ ಸ್ಮಾರಕ— ಎರಡೂ ಆಗಿತ್ತು. 1938 ರಲ್ಲಿ ತನ್ನ ಕಾದಂಬರಿಯ ಇಂಗ್ಲೀಷ್ ಅನುವಾದದ ಪರಿಷ್ಕೃತ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ ಸಿಲೋನೆ, ತಾನು ಕಾದಂಬರಿಯನ್ನು ಬರೆದ ಸನ್ನಿವೇಶವನ್ನು ಹೀಗೆ ವಿವರಿಸುತ್ತಾನೆ. "ಫ್ಯಾಸಿಸ್ಟ್ ಪೋಲೀಸರಿಂದ ತಲೆಮರೆಸಿಕೊಂಡು ದೇಶಭ್ರಷ್ಟನಾಗಿ, ಸುಳ್ಳು ಹೆಸರೊಂದನ್ನು ಇಟ್ಟುಕೊಂಡು ಸ್ವಿಟ್ಜರ್ಲೆಂಡ್‌ನಲ್ಲಿ ವಾಸಿಸುತ್ತಿದ್ದಾಗ ನಾನು ಈ ಕಾದಂಬರಿಯನ್ನು ಬರೆದೆ. ಅಲ್ಲಿ ನಾನು ಒಂಟಿಯಾಗಿದ್ದುದರಿಂದ ಬರವಣಿಗೆ ನನಗೆ ಒಂಟಿತನದ ವಿರುದ್ಧ ಏಕೈಕ ರಕ್ಷಣೆಯಾಗಿತ್ತು. ಡಾಕ್ಟರರು ಬೇರೆ ನಾನು ಹೆಚ್ಚು ಕಾಲ ಬದುಕುವುದಿಲ್ಲ ಎಂದಿದ್ದರು. ಬಣ್ಣ ಸರ್ಕಾರದ ಆತಂಕ ಉದ್ವೇಗಗಳಲ್ಲಿ ನನ್ನ ಶಕ್ತಿಯನ್ನೆಲ್ಲ ಬಳಸಿಕೊಂಡು ನಾನು ಹುಟ್ಟಿ ಬೆಳೆದ ನನ್ನ ಜಿಲ್ಲೆಯ ಈ ಕಥೆ ಬರೆದೆ. ಸಾಯುವುದೇ ಆದರೆ, ಈ ರೀತಿ ನನ್ನ ಜನರ ನಡುವೆ ಸಾಯುವ ನಿಶ್ಚಯ ನನ್ನದಾಗಿತ್ತು".

ಆದರೆ ಮಹಾಯುದ್ಧಕ್ಕೆ ಮೊದಲು, ಫ್ಯಾಸಿಸ್ಟ್ ಇಟಲಿ ಮಾತ್ರವಲ್ಲ, 'ಲಿಬರಲ್ ಮಾನವತಾವಾದಿ ಪ್ರಜಾಪ್ರಭುತ್ವ'ದ ಸರಕಾರವಿದ್ದ ಇಂಗ್ಲೆಂಡ್ ಕೂಡಾ ಸಿಲೋನೆಯನ್ನು ದೂರವಿಟ್ಟಿತ್ತು ಎಂಬುದು ಅನೇಕರನ್ನು ಈಗ ಚಕಿತಗೊಳಿಸಬಹುದು. ಫಂಟಮಾರಾದ ತೀರ ಇತ್ತೀಚಿನ (1985) ಇಂಗ್ಲಿಷ್ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ ಇಂಗ್ಲೆಂಡ್‌ನ ಲೇಬರ್ ಪಕ್ಷದ ಹಿರಿಯ ನಾಯಕ ಮೈಕೆಲ್‌ಫುಟ್, ಇಟಲಿಯಿಂದ ತಲೆತಪ್ಪಿಸಿಕೊಂಡು ಬಂದಿದ್ದ ಸಿಲೋನೆಗೆ ಇಂಗ್ಲೆಂಡ್ ಸರಕಾರ ತನ್ನ ದೇಶದೊಳಗೆ ಪ್ರವೇಶ ನಿಷೇಧಿಸಿದ್ದನ್ನು ಬಹಿರಂಗ ಪಡಿಸಿದ್ದಾರೆ. ಚರ್ಚಿಲ್, ಫ್ಯಾಸಿಸ್ಟರ ಕಮ್ಯೂನಿಸ್ಟ್ ದಮನದ ಕಾರ್ಯಕ್ರಮವನ್ನು ಮೆಚ್ಚಿ, ಅದು 'ಯುರೋಪಿಯನ್ ಸಂಸ್ಕೃತಿಯ ರಕ್ಷಾ ಕವಚ' ಎಂದು ಹೊಗಳಿದ್ದನ್ನೂ, ಇಂಗ್ಲೆಂಡ್‌ನ ಮುಖ್ಯ ಪತ್ರಿಕೆಗಳಾದ ಡೇಲಿಮೈಲ್ ಮತ್ತು ಟೈಮ್ಸ್, ಫ್ಯಾಸಿಸಂನ್ನು ಸದಾ ಸಮರ್ಥಿಸಿ ಬರೆಯುತ್ತಿದ್ದುದನ್ನು ಮೈಕೆಲ್ ಫುಟ್ ತನ್ನ ಮುನ್ನುಡಿಯಲ್ಲಿ ಎತ್ತಿ ಹೇಳಿದ್ದಾರೆ. ಸಿಲೋನೆ ಬರಿಯ ಲೇಖಕನಷ್ಟೇ ಆಗಿರಲಿಲ್ಲ; ಒಬ್ಬ ರಾಜಕೀಯ ಕಾರ್ಯಕರ್ತನೂ ಆಗಿದ್ದ. ಮೂವತ್ತರ ದಶಕದ ಇಟಾಲಿಯನ್ ಕಮ್ಯೂನಿಸ್ಟ್ ಚಳುವಳಿಯ ನಾಯಕರಲ್ಲಿ ಒಬ್ಬನಾಗಿದ್ದ ಸಿಲೋನೆ

ಇಟಲಿಯ ಫ್ಯಾಸಿಸ್ಟರಿಗೆ ಮಾತ್ರವಲ್ಲ, ಚರ್ಚಿಲ್ ಮತ್ತು ಲಂಡನ್ ಟೈಮ್ಸ್ ಪ್ರತಿನಿಧಿಸುವ ವ್ಯವಸ್ಥೆಗೂ ಅಪಾಯಕಾರಿಯಾಗಿದ್ದ.

ಬರವಣಿಗೆ ಎಂದರೆ "ತನ್ನ ಕಾಲದ ಬಗ್ಗೆ ಸಾಕ್ಷಿ ಹೇಳುವುದು" ಎಂದು ಭಾವಿಸಿದ್ದ. ಸಿಲೋನೆಯ, ಹೋರಾಟದ ಬದುಕು ಇಷ್ಟಕ್ಕೇ ಮುಗಿಯುವುದಿಲ್ಲ. ಫಂಟಮಾರಾ ಬರೆವ ವೇಳೆಯೂ ಅನೇಕ ವರ್ಷ, ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತನಾಗಿದ್ದ ಸಿಲೋನೆ ಆ ಪಕ್ಷಕ್ಕೆ ವಿದಾಯ ಹೇಳಿದ ಬಗೆಯಂತೂ ನಮ್ಮ ಕಾಲದ ರಾಜನೈತಿಕ ಧರ್ಮ ಸಂಕಟಗಳಿಗೆ ಬರೆದ ವ್ಯಾಖ್ಯೆಯಂತಿದೆ. ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಮೇಲೆ ಸ್ಟಾಲಿನ್‌ನ ಯಜಮಾನಿಕೆ ಧೋರಣೆಗಳನ್ನೂ, ರಷ್ಯದ ಒಳಗೆ ಅವನು ಆಡಳಿತ ನಡೆಸುತ್ತಿದ್ದ ರೀತಿಯನ್ನೂ ಪ್ರಶ್ನಿಸಿ ಸಿಲೋನೆ ಪಕ್ಷಕ್ಕೆ ರಾಜೀನಾಮೆ ನೀಡಿದ್ದ. ಸ್ಟಾಲಿನ್‌ನಂತಹವರ ನಾಯಕತ್ವದಲ್ಲಿ ಕಮ್ಯೂನಿಸಂ ಒಂದು ಚಳುವಳಿ ಆಗಿ ಉಳಿದಿಲ್ಲ ; ಅದು ಸ್ವತಹ ತಾನೇ ಒಂದು "ವ್ಯವಸ್ಥೆ"ಯಾಗಿ ಬಿಟ್ಟಿದೆ ಎಂದು ಸಿಲೋನೆ ಭಾವಿಸಿದ್ದ. ಕಮ್ಯೂನಿಸ್ಟ್ ಪಕ್ಷಕ್ಕೆ ರಾಜೀನಾಮೆ ಕೊಡುವುದು, ಅವನ ಬದುಕಿನ ಅತ್ಯಂತ ನೋವಿನ ನಿರ್ಣಯವಾಗಿತ್ತು. ಈ ಬಗ್ಗೆ ಆತ ಹೇಳುತ್ತಾನೆ, "ನಾನು ಕಮ್ಯೂನಿಸ್ಟ್ ಪಕ್ಷ ಬಿಟ್ಟ ದಿನ ನನ್ನ ಬದುಕಿನ ಅತ್ಯಂತ ಸಂಕಟದ ದಿನವಾಗಿತ್ತು. ಇದ್ದಕ್ಕಿದ್ದಂತೆ ನನ್ನ ಯೌವನವನ್ನು ಕಳೆದುಕೊಂಡೆ ಎಂದು ನನಗೆ ಅನ್ನಿಸತೊಡಗಿತು. ಆ ದಿನ ಸಾವಿನ ಸೂತಕದ ದಿನದಂತೆ ಇತ್ತು...... ಆದರೆ (ಕಮ್ಯೂನಿಸ್ಟ್ ಪಕ್ಷ ಬಿಟ್ಟ ಮೇಲೂ) ಸಮಾಜವಾದದಲ್ಲಿ ನನ್ನ ನಂಬಿಕೆ ಮೊದಲಿಗಿಂತಲೂ ಜೀವಂತವಾಗಿದೆ". ಸಿಲೋನೆ ತನ್ನ ಬದುಕಿನ ಈ ಮಹತ್ವದ ಘಟನೆಯ ಬಗ್ಗೆ ಬರೆದ ಲೇಖನ ಲೋಕ ಪ್ರಸಿದ್ಧವಾಗಿದೆ. ಖ್ಯಾತ ಇಂಗ್ಲೀಷ್ ಕವಿ ಸ್ಟೀಫನ್ ಸ್ಪೆಂಡರ್ ಸಂಪಾದಿಸಿದ "The God that failed" (ಮೊದಲ ಮುದ್ರಣ-1950) ಸಂಕಲನದ ಆರು ಪ್ರಬಂಧಗಳಲ್ಲಿ ಸಿಲೋನೆಯ ಈ ವೃತ್ತಾಂತವೂ ಸೇರಿದೆ. ಆ ಪುಸ್ತಕದ ಎಲ್ಲ ಪ್ರಬಂಧಗಳೂ, ಆಯಾ ಲೇಖಕರು ಕಮ್ಯೂನಿಸ್ಟ್ ಪಕ್ಷದ ಜೊತೆ ತಮಗಿದ್ದ ಒಡನಾಟವನ್ನು ಕಡಿದುಕೊಂಡದ್ದರ ವಿವರಣೆಗಳು. ಅವುಗಳಲ್ಲೆಲ್ಲ, ಸಿಲೋನೆಯದ್ದೆ ಅತ್ಯಂತ ಹೃದಯಸ್ಪರ್ಶಿಯಾದ ಲೇಖನ. ಕಮ್ಯೂನಿಸ್ಟರು ವಿರೋಧಿಸುವ ಫ್ಯಾಸಿಸಂ, ಬಂಡವಾಳಶಾಹಿ, ಜನಾಂಗ ದ್ವೇಷದ ರಾಜಕಾರಣ, ಚರ್ಚು, ಮುಂತಾದವುಗಳ 'ವ್ಯವಸ್ಥೆ'ಯ ಕ್ರೌರ್ಯದ ಪ್ರತ್ಯಕ್ಷಾನುಭವವಿದ್ದ ಸಿಲೋನೆಗೆ, ಆ ಪಕ್ಷ ಬಿಡಬೇಕಾಗಿ ಬಂದದ್ದರ ಬಗ್ಗೆ ಅಪಾರ ವ್ಯಥೆ ಇದ್ದಿತು.

ಒಂದು ಕಾಲಕ್ಕೆ ಕಮ್ಯೂನಿಸ್ಟರಾಗಿದ್ದು ನಂತರ ಅದನ್ನು ತೊರೆದವರದ್ದು ಒಂದು ಅಂತಾರಾಷ್ಟ್ರೀಯ ಜಾತಿ ಎನ್ನುವಷ್ಟರ ಮಟ್ಟಿಗೆ ಅವರಲ್ಲಿ ಎದ್ದು ಕಾಣುವ ಕೆಲವು ಲಕ್ಷಣಗಳಿವೆ. ಕಮ್ಯೂನಿಸ್ಟ್ ಪಕ್ಷದ ವ್ಯವಸ್ಥೆಯನ್ನು ಟೀಕಿಸುವುದರ ಜೊತೆಗೆ

ಕಮ್ಯೂನಿಸಂ ಎತ್ತಿ ಹಿಡಿಯುವ ಮೌಲ್ಯಗಳನ್ನು ವಿರೋಧಿಸುವುದು, ಸೋವಿಯತ್ ರಷ್ಯಾವನ್ನು ಹೀಗಳೆಯುವಾಗ, ಅಮೇರಿಕ ಮತ್ತು ಯುರೋಪ್‌ನ ಪಾಪಗಳನ್ನೆಲ್ಲ ಮರೆ ಮಾಚುವುದು, ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಬಂಡವಾಳಶಾಹಿಯ ಲಾಭ ಬಡುಕ ತನವನ್ನು ಸಮರ್ಥಿಸುವುದು, ಧರ್ಮ ಗುರುಗಳು ನಂಬಿಕೆಯ ಸ್ವಾತಂತ್ರ್ಯದ ರಕ್ಷಕರು ಎಂದು ವಾದಿಸುವುದು, ವಿಯಟ್ನಾಂ, ದಕ್ಷಿಣ ಆಫ್ರಿಕಾ, ಚಿಲಿ, ನಿಕರಗುವ, ಎಲ್ ಸಾಲ್ವೆಡೋರ್, ಇಸ್ರೇಲ್‌ಗಳ ಬಗ್ಗೆ 'ರಾಜತಾಂತ್ರಿಕ ಮೌನ' ವಹಿಸುವುದು, ಎಲ್ಲ ಬಲ ಪಂಥೀಯ ಸರ್ವಾಧಿಕಾರೀ ಸತ್ತೆಗಳನ್ನು ಕ್ಷಮೆ ಯಾಚನೆಯ ಧ್ವನಿಯಲ್ಲಿ ಸಮರ್ಥಿ ಸುವುದು – ಈ ಜಾತಿಯ ಮುಖ್ಯ ಚಹರೆಗಳು. ಈ ಮಾಜೀ ಕಮ್ಯೂನಿಸ್ಟ್ ಬುದ್ಧಿ ಜೀವಿಗಳ ಪೈಕಿ ಕೆಲವರು ಅಮಾಯಕವಾಗಿ, ಇನ್ನು ಕೆಲವರು ತಾವು ಪಡೆದ ಡಾಲರ್‌ಗಳ ಋಣ ತೀರಿಸಲು, ಅಮೇರಿಕದ ಪ್ರಚಾರ ವ್ಯವಸ್ಥೆಯ ಕೈಗೊಂಬೆಗಳಾದರು. "The God that failed" ಪುಸ್ತಕ ಸಂಪಾದಿಸಿದ ಸ್ಟೀಫೆನ ಸ್ಟೆಂಡರ್‌ನ ಅವಸ್ಥೆ ಯಂತೂ ಇನ್ನೂ ಕರುಣಾಜನಕವಾಗಿದೆ. ಆತ ಸಂಪಾದಕನಾಗಿದ್ದ ತ್ರೈಮಾಸಿಕ, 'Encounter' ಪತ್ರಿಕೆಗೆ ಗುಪ್ತವಾಗಿ C I.A. ಹಣ ಬರುತ್ತಿತ್ತು. ಸ್ವತಹ ಸ್ಟೆಂಡರ್‌ಗೇ ಬಹುಕಾಲ ಇದು ಗೊತ್ತಾಗಲಿಲ್ಲ. ಇದು ಬಹಿರಂಗವಾದ ಮೇಲೆ ಸ್ಟೆಂಡರ್ ನಾಚಿಕೆಯಲ್ಲಿ ಪತ್ರಿಕೆಯ ಸಂಪಾದಕತ್ವಕ್ಕೆ ರಾಜೀನಾಮೆ ಕೊಟ್ಟ.

ಆದರೆ ಸಿಲೋನೆಗೆ ಮಾತ್ರ ಈ ಮಾಜೀ ಕಮ್ಯೂನಿಸ್ಟರ ಯಾವ ಮಾನಸಿಕ ರೋಗವೂ ತಟ್ಟಲಿಲ್ಲ. ತನ್ನ ಬದುಕಿನ ಕೊನೆಯ ಕ್ಷಣದವರೆಗೂ ಆತ ಸಮಾಜವಾದ ದಲ್ಲಿ ನಂಬಿಕೆ ಕಳೆದುಕೊಂಡಿರಲಿಲ್ಲ. ಬಂಡವಾಳಶಾಹೀ ವ್ಯವಸ್ಥೆಯ ಅಸಮಾನತೆ, ಯುದ್ಧ ಖೋರತೆ, ಧಾರ್ಮಿಕ ಸೋಗಲಾಡಿತನ, ಸಾಂಸ್ಕೃತಿಕ ಅಶ್ಲೀಲತೆಗಳನ್ನು ಆತ ಮೊದಲಿನಷ್ಟೇ ಉಗ್ರವಾಗಿ ವಿರೋಧಿಸುತ್ತಿದ್ದ. ಕಮ್ಯೂನಿಸ್ಟ್ ಪಕ್ಷ ಬಿಟ್ಟು ಹೊರ ಬಂದ ಮೇಲೂ ಸಿಲೋನೆ, ಇಟಾಲಿಯನ್ ಸಮಾಜದ ಆರೋಗ್ಯವನ್ನು ಇಟಾಲಿಯನ್ ಕಮ್ಯೂನಿಸ್ಟ್ ಪಕ್ಷದ ಸ್ಥಿತಿಯ ಮುಖಾಂತರವೇ ಪರಿಭಾವಿಸುತ್ತಿದ್ದುದು ಅರ್ಥಪೂರ್ಣ ವಾಗಿದೆ. ತನ್ನ ಕೊನೆಯ ದಿನಗಳಲ್ಲಿ ಆತ ಬರೆದ ಒಂದು ಲೇಖನದಲ್ಲಿ (ಅದು ಪ್ರಕಟವಾದದ್ದೂ Encounter ನಲ್ಲಿಯೇ) "ಸಮಕಾಲೀನ ಇಟಾಲಿಯನ್ ಸಮಾಜ ದುಡ್ಡು, ಬಳಕೆಯ ವಸ್ತುಗಳು ಮತ್ತು ಐಂದ್ರಿಯಕ ಸುಖಗಳನ್ನೇ ತನ್ನ ಏಕೈಕ ಉದ್ದೇಶ ವನ್ನಾಗಿ ಮಾಡಿಕೊಂಡಿದೆ. ಇಟಾಲಿಯನ್ ಕಮ್ಯೂನಿಸ್ಟ್ ಪಕ್ಷ ಕೂಡಾ ಈಗ ಮೊದಲಿನಂತಿಲ್ಲ. ತನ್ನ ಯೌವನದ ಕಾಲದಲ್ಲಿ ಪಕ್ಷಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡ ಬಲ್ಲ ಯುವಕರಿದ್ದರು ; ಈಗ ಅಂತಹ ಯುವಕರೇ ಕಾಣಿಸುವುದಿಲ್ಲ. ಕಮ್ಯೂನಿಸ್ಟ್ ಪಕ್ಷ ಕೂಡಾ ವೇತನ ಕೊಟ್ಟು ಕಾರ್ಯಕರ್ತರನ್ನು ನೇಮಿಸಿಕೊಳ್ಳಬೇಕಾಗಿದೆ." ಎಂದು ಬರೆದಿದ್ದ.

1950ರಲ್ಲಿ 'ಫಂಟಮಾರಾ'ದ ಕನ್ನಡ ಅನುವಾದ ಪ್ರಕಟವಾದಾಗ, ದೇಶದಲ್ಲಿ ಬ್ರಿಟಿಷ್ ಆಳ್ವಿಕೆ ಕೊನೆಗೊಂಡು ಮೂರು ವರ್ಷಗಳಷ್ಟೆ ಆಗಿದ್ದಿತು. ರಾಜಕೀಯ ಸ್ವಾತಂತ್ರ್ಯ ಮತ್ತು ನೆಹರೂ ಸಮಾಜವಾದಗಳ ಬಗ್ಗೆ ಜನಕ್ಕೆ ಇನ್ನೂ ಭ್ರಮನಿರಸನವಾಗಿರಲಿಲ್ಲ. ಅಂತಹ ಸಂಭ್ರಮ ಕಾಲದಲ್ಲೇ. ಕು. ಶಿ. ಹರಿದಾಸಭಟ್ಟರು ಸಮಾಜವಾದಿ ಲೇಖಕನೊಬ್ಬನ ರೈತ ಹೋರಾಟದ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ್ದು ಗಮನಾರ್ಹವಾಗಿದೆ. ತಮ್ಮ ಅನುವಾದದ ಮುನ್ನುಡಿಯಲ್ಲಿ ಹರಿದಾಸಭಟ್ಟರು ಬರೆದರು, "ನನ್ನ ಅನುವಾದದ ಬಗೆಗೆ ನಾನು ಕ್ಷಮಾಯಾಚನೆ ಮಾಡಲಾರೆ. ದೇಶದೇಶಗಳ ವಿವಿಧ ಭಾಷೆಗಳನ್ನು ಕಲಿತ ಪಂಡಿತರು ಆಯಾ ಭಾಷೆಗಳ ಅಮರ ಕೃತಿಗಳನ್ನು ಅಲ್ಲಿಂದಲೇ ಕನ್ನಡಕ್ಕೆ ಆಮದು ಮಾಡುವ ಶುಭ ಮುಹೂರ್ತ ಉದಯವಾಗುವತನಕ ಯುರೋಪಿನ ಒಂದೆರಡೇ ಭಾಷೆಗಳನ್ನು ಬಲ್ಲ ನನ್ನಂತಹವರು ಮಾಡಬೇಕಾದ ಕೆಲಸ ಹೇರಳವಾಗಿದೆ. ಕಾರಂತ, ಅ.ನ.ಕೃ. ಅವರ ಕಾದಂಬರಿಗಳೇ ಕನ್ನಡದ ಪರಮಾವಧಿಯಾಗಲಾರವು. ಅದೇ ನಮ್ಮ ಮಾನವಾಗಿ ಬಹುಕಾಲ ಉಳಿಯಬಾರದು." 'ಫಂಟಮಾರಾ'ದ ಬಗ್ಗೆ ಬರೆಯುತ್ತ ಅನುವಾದಕರು ಕಾರಂತರು ಮತ್ತು ಅ.ನ.ಕೃ.ರನ್ನು ಪ್ರಸ್ತಾಪಿಸಿದ್ದು ತುಂಬ ಸಂದರ್ಭೋಚಿತವಾಗಿದೆ. ಸಿಲೋನೆಯ ಕಾದಂಬರಿಯ ಗ್ರಾಮೀಣ ಬದುಕಿನ ಚಿತ್ರಣವನ್ನು ಮತ್ತು ಅವನ ರಾಜಕೀಯ ಬದ್ಧತೆಯನ್ನು ಕಾರಂತ, ಅ.ನ.ಕೃ.ರ ಕಾದಂಬರಿಗಳ ಜೊತೆ ಹೋಲಿಸುವುದು ಈಗಲೂ ಉಪಯುಕ್ತವಾಗುತ್ತದೆ. 'ಫಂಟಮಾರಾ'ದ ಕನ್ನಡ ಅನುವಾದ ಪ್ರಕಟವಾದ ಮೊದಲಿಗೆ ಅದನ್ನು ಕನ್ನಡದ ಓದುಗರು ಹೇಗೆ ಸ್ವಾಗತಿಸಿದರೋ ತಿಳಿಯದು. ಮುದ್ರಿತವಾದ ಪುಸ್ತಕದ ಸಾವಿರ ಪ್ರತಿಗಳು ಮಾರಾಟವಾಗುವುದಕ್ಕೆ ಹತ್ತಾರು ವರ್ಷಗಳೇ ಬೇಕಾಗುವ ಕನ್ನಡದ ದರಿದ್ರ ಸ್ಥಿತಿಯಲ್ಲಿ ಓದುಗರ ಆಸಕ್ತಿ ನಿರಾಸಕ್ತಿಗಳನ್ನು ಗುರುತಿಸುವುದಾದರೂ ಹೇಗೆ? ಅದು ಹೇಗೂ ಇರಲಿ, ಈಗ ಏಳೆಂಟು ವರ್ಷದ ಕೆಳಗಿನವರೆಗೂ ಕನ್ನಡ ಫಂಟಮಾರಾದ ಸುಮಾರು 50 ಪ್ರತಿಗಳು ಉಡುಪಿಯಲ್ಲಿದ್ದ, ಅದರ ಪ್ರಕಾಶಕರ ಮಳಿಗೆಯಲ್ಲಿ ದೂಳು ಕವುಚಿಗೊಂಡು ಬಿದ್ದಿದ್ದವು. 'ಸಮುದಾಯ' ತಂಡದವರು ರಾಜ್ಯದಲ್ಲಿ ಜಾಥಾ ನಡೆಸಿದಾಗ, ಈ ಪುಸ್ತಕಗಳನ್ನು ತಮ್ಮೊಡನೆ ಒಯ್ದು ಅಲ್ಲಲ್ಲಿ ಮಾರಿದರು. (ಈ ತಂಡದವರು ಮಾರಾಟ ಮಾಡಿದ ಇನ್ನೊಂದು ಪುಸ್ತಕವೂ ಇಂಗ್ಲೀಷೇತರ ಕೃತಿಯೊಂದರ ಅನುವಾದ— ಗೋರ್ಕಿಯ ಕಾದಂಬರಿಯ ನಿರಂಜನರ ಅನುವಾದ, 'ತಾಯಿ'.) 'ಫಂಟಮಾರಾ' ಕನ್ನಡದಲ್ಲಿ ಪ್ರಕಟವಾದ ವರ್ಷ ಮತ್ತು 'ಸಮುದಾಯ'ದ ಜಾಥಾಗಳ ನಡುವೆ ಮೂರು ದಶಕಗಳೇ ಕಳೆದುಹೋಗಿದ್ದವು. ಈ ಅವಧಿಯಲ್ಲಿ ನಮ್ಮ ಬದುಕು ಮತ್ತು ಸಾಹಿತ್ಯ ಎರಡರಲ್ಲೂ ತೀವ್ರ ಬದಲಾವಣೆಗಳಾಗಿದ್ದವು. ಮೊದಲು ಇದ್ದ ಹೊಸ ನಾಡೊಂದನ್ನು ಕಟ್ಟುವ ಉತ್ಸಾಹದ ಬದಲಿಗೆ ಈಗ ಯಾವ ರಾಜಕೀಯ ತತ್ವವೂ ಮನುಷ್ಯನ ಮೂಲಭೂತ ಸ್ಥಿತಿಯನ್ನು ಬದಲಾಯಿಸಲಾರದು ಎಂಬ ಹತಾಶೆ

ಎಲ್ಲೆಡೆ ಕಾಣಿಸುತ್ತಿತ್ತು. ಈ ಹತಾಶೆಗೆ ತೀವ್ರ ಪ್ರತಿಕ್ರಿಯೆಯಾಗಿ ಕನ್ನಡದಲ್ಲಿ ಬಂಡಾಯ, ದಲಿತ ಸಂಘಟನೆಗಳು ಮತ್ತು ಸಮುದಾಯದಂತಹ ನಾಟಕ ತಂಡಗಳು ಹುಟ್ಟಿಕೊಂಡವು. ಈ ಸಾಂಸ್ಕೃತಿಕ ವಾತಾವರಣದಲ್ಲಿ, 'ಫಂಟಮಾರಾ' ಕನ್ನಡದ ಅನೇಕ ತರುಣರಿಗೆ ಪ್ರಿಯವಾದ ಪುಸ್ತಕವಾಯಿತು. ಸಮುದಾಯ ಜಾಥಾ ಸಮಯದಲ್ಲಿಯೇ ಮೊದಲ ಬಾರಿಗೆ, ಕನ್ನಡ ಅನುವಾದದಲ್ಲಿ ಈ ಕಾದಂಬರಿ ಓದಿದ ಗೆಳೆಯ ಬಿದಿರಹಳ್ಳಿ ನರಸಿಂಹಮೂರ್ತಿ ಅವನ್ನು 'ನಾಟಕ ಮಾಡುವೆ' ಎಂದು ಉತ್ಸಾಹದಲ್ಲಿ ನನಗೆ ಪತ್ರ ಬರೆದಿದ್ದರು. ಅವರು ನಾಟಕ ಬರೆದರೋ ಬಿಟ್ಟರೋ ಗೊತ್ತಿಲ್ಲ. ಆದರೆ ಪ್ರಕಟವಾದ 50 ವರ್ಷಗಳ ನಂತರ ಇಟಾಲಿಯನ್ ಗ್ರಾಮೀಣ ಬದುಕಿನ ಕಾದಂಬರಿ ಒಂದರ ಅನುವಾದ ಕನ್ನಡದ ಅನೇಕ ತರುಣರಲ್ಲಿ ಇಂತಹ ಉತ್ಸಾಹ ಅಭಿಮಾನಗಳನ್ನು ಹುಟ್ಟಿಸಿತು ಎನ್ನುವುದು ಕಾದಂಬರಿಯ ಸತ್ವ ಮತ್ತು ಅನುವಾದದ ಗುಣಮಟ್ಟ—ಎರಡಕ್ಕೂ ಉದಾಹರಣೆಯಾಗಿದೆ.

ಕಾಮ ದಹನ

-1-

ಕಡೆಯ ದಿನ ಕೆಲ ಘಳಿಗೆ
ಉಳಿದಿದೆ
ಸೂರ್ಯಾಸ್ತಮಕೆ ಮುಂಚೆ
ಗೋರಿ ಮಲಗಿದೆ ಹೂವು ಅರಳಿದೆ
ಬೇರು ಸತ್ತವನ ಸಂಗ ಮಾಡಿದೆ
ಮಾಗಿ ಚಳಿ
ಹಾಗಲು ಬಿಟ್ಟೀತೇ ನನ್ನ

ಕಣ್ಣು ಗುಳಿಗಳ ಕಾಂಡ
ಒಳಗೆ
ವಿದುಳಿನ ಪೊಟರೆ ರಕ್ತಮಾಂಸ
ಬೇರ ನರಗಳ ಹಿಂಡು
ಹಿಂಡಿದೆ ಜೀವ
ಬೇಡಿದೆ ಕೊಡು
ಹೂವ ದಮನಿಗೆ ಜೇನ ಸವಿಯನೆಂದು

ಪ್ರಸನ್ನ C/o ಭೀಷ್ಮಸಹಾನಿ, 8/30, ಈಸ್ಟ್ ಪಟೇಲ್ ನಗರ, ನವದೆಹಲಿ-110 008.

ನಡು ನೀರಲ್ಲಿ ಮಲಗಿರುವೆ
ಪಾತಾಳಕ್ಕೊಂದು ಬಿರಡೆ
ತೆರೆದರೆ ಮುಳುಗುವೆ
ತೇಲುತ್ತೇನೆ
ಮುಖ ಮೇಲು ಮಾಡಿ
ಅಂಗಾತ ಭಾರ ರಹಿತ ಭಾವ ರಹಿತ
ಬಿಳಿ ಆಕಾಶ

ಚುಕ್ಕಿಗಳಿಲ್ಲ ಹಕ್ಕಿಗಳಿಲ್ಲ
ಅಂಡಲೆವ ಮೋಡಗಳಿಲ್ಲ
ಪರಿಚಿತ ಪ್ರಪಂಚವೇ
ಅಲ್ಲ
ಒರೇ ಚುರುಗುಡುತ್ತದೆ
ಕಾಯಿಸುತ್ತದೆ
ಕರಕಲಾಗುತ್ತದೆ ಸಕಲ ಜೀವಿಗಳೆಲ್ಲ

ಕಾಡು ಕಾಡುವುದಿಲ್ಲ
ಹೂವು ಅರಳುವುದಿಲ್ಲ
ಬೆಂಕಿ ಸುಟ್ಟೀತೆಂಬ ಭಯವಿಲ್ಲ
ಮರ ಮರದ ಹಿಂದೆ
ಸಿದ್ಧವಿದೆ ಅಗ್ನಿ ಶಾಮಕ ದಳ
ಹೊಗೆ ಚಿಲುಮೆ
ಜೀವ ವಿಮೆ ಭ್ರಮೆ

-2-

ಪರಕಾಯ ಪ್ರವೇಶ
ಪುನಃ ಪ್ರವೇಶ
ತಲೆಕೆಳಗು ಆಕಾಶ
ನಗರಗಳ ನೋಡಿದೆ ಛಾವಣಿಯ ಲೋಲಾಡಿ
ಬೀದಿ ದೀಪವ ಹತ್ತಿದೆ
ತುತ್ತ ತುದಿ
ಪಾತಾಳ ತಲುಪಿದೆ,

ಬಿಸಿಲು ಮೂಡುತ್ತದೆ
ಬಿಡಿಸಿ ಹರಡುತ್ತಾರೆ
ಆಕಾಶದ ತುಂಬ ಟೇಬಲ್ಲು
ಕುರ್ಚಿ ಕರ್ಚೀಫು ಚಮಚೆ
ಅಣುವೀಕರಣ
ಕಾಯುತ್ತಾರೆ ಹೋಟೆಲಿನವರು
ಹೊಸ ಗಿರಾಕಿಗಾಗಿ

ಈ ಊರ ನಗರಗಳಲ್ಲಿ ಹರಿದಿದೆ
ನದಿ ನೀರು ಕಪ್ಪು ರಕ್ತ
ಕೊಕ್ಕರೆ ಕೂಗುತ್ತದೆ
ನೆತ್ತರು ಬಗ್ಗಡಾಗುತ್ತದೆ
ಮೀನು ಸೆಣಸುತ್ತದೆ
ಮಿಂಚುತ್ತದೆ ದೋಣಿ ದೀಪ-
ದ ಒಡಲು ಕೆಂಪು ಹಸಿರು

ಮೆರವಣಿಗೆ ಹೊರಡಿದೆ
ಹಸುಳೆ ಪ್ರಾಮಿನಲಿ
(ರಕ್ತ ಚಿಮ್ಮಿಸುವ ಕೆನ್ನೆ)
ಮಾರುಕಟ್ಟೆ ಗಲಿಬಿಲಿ
ಮೋಟಾರು ವಾಹನ ಸದ್ದು
ಗದ್ದಲ ನೂಕು ನುಗ್ಗಲು ಎಲ್ಲ
ತುಂಬಿಸಿ ತಳ್ಳಿದ್ದಾರೆ ಕಿರುಗಾಡಿಯಲಿ

ಈ ನೆರೆಹೊರೆಯ ಜನ
ಆದರೂ ನಗುತ್ತಾರೆ
ಹಡೆಯುತ್ತಾರೆ ಮತ್ತೆ ಮತ್ತೆ
ಹಾಲುಣಿಸುತ್ತಾರೆ ಕಾಯುತ್ತಾರೆ
ಪ್ರಣಾಳ ಶಿಶುವಿನ ಜನನ
ಜಗ್ಗುತ್ತಾರೆ ಕರುಳ ಬಳ್ಳಿಯ ದಾರ
ಬಾಲಂಗೋಚಿ ಗಾಳಿಪಟ

ಇಲ್ಲಿ ಬಡಿಸುತ್ತಾರೆ ಹೆಂಗಸರು
ಬಿಸಿಯುಸಿರು ನಗೆ ನಂಟು
ಹಬ್ಬುತ್ತಾರೆ
ಆತ್ಮೀಯತೆಯ ರೋಗ
ಕೊಡುತ್ತಾರೆ ಹಿಚುಕಲೆಂದು ಪೀಚು ಮೊಲೆ
ಮಾಗಲೆಂದು ಬಿಡುತ್ತಾರೆ
ಮೈಯ ಬಿಸಿ (ಉಸಿರು)

"ಸಿಗರೇಟಿನ ಹೊಗೆ ಬಿಯರಿನ ಕಹಿ
ಚುಂಬನದ ತುಟಿ ಜೊಲ್ಲು
ಎಲ್ಲಕ್ಕೂ ಸಲ್ಲಿಸಿ
ದುಬಾರಿ ದಂಡ ನಡೆ''
ಅನ್ನುತ್ತಾರೆ
ತಳ್ಳುತ್ತಾರೆ ಕದ ತೆರೆದು
ಹೊರಗೆ (ಮತ್ತೊಂದು ರಸ್ತೆಗೆ)

-3-

ಪತಿರಾಯ ಕುಡಿದಿದ್ದಾನೆ
ಕರೆಯುತ್ತಾನೆ ಸೀತಾಮಾತೆಯನ್ನು
ಆಕೆ ಮುನಿದಿದ್ದಾಳೆ
ಅಗಸನ ಮಾತು ಕೇಳಿ ಅಟ್ಟಿದ್ದಕ್ಕೆ
ಪಾತಾಳದತ್ತ ಮೆಟ್ಟಿದ್ದಕ್ಕೆ
ವ್ಯರ್ಥ ಸಂಶಯ
ಪಟ್ಟಿದ್ದಕ್ಕೆ

''ಸಾವರಿಸು ಸತಿ,
ನಾನಲ್ಲ ಕಂದಾಚಾರಿ
ಸಹಗಮಿಸು ಬಾ
ಸಂದರ್ಭ ಅಂತಹದಿತ್ತು
ಭಾರತೀಯ ಸಂಸ್ಕೃತಿ ನಶಿಸುತ್ತಿತ್ತು
ಕೊಳೆಯುತ್ತಿತ್ತು
ಹಿತ್ತಲ ಚರಿತ್ರೆ"

(ತೂರಾಡುತ್ತ) : "ನಂಬು
ನನ್ನ ಕೈ ಹಿಡಿ ಭದ್ರ
ಎತ್ತುತ್ತೇನೆ ನಿನ್ನ
ಜಾಗ್ರತೆ ! ಗುಡಿ ಗೋಪುರ ಗಂಟೆ
ತೂಗುತ್ತಿದ್ದೀಯ ಮೃದು ದೇಹ
ಬಡಿದರೂ ಬಾರಿಸದು ಬಿಡು
ನಾನಿದ್ದೇನೆ ಗೋಪುರದ ಒಳಗೆ"

"ಹಾಸಿಗೆಯ ಚಿಂತೆ ಬಿಡು
ಗೋಡೆ ಜಾರು
ಸೂರೇ ಸರಿ
ಹಲ್ಲಿ ಮೆಟ್ಟುವೆನೆಂದು ಹೆದರದಿರು
ಹೋಗುವವು ಅವು ಹಾಸಿಗೆಗೆ
ತಲೆ ಕೆಳಗು ಅಭ್ಯಾಸ
ಮರೆತಿವೆ ಪಾಪ"

"ಏನೇನ ಮಾಡಿದೆ ಹೇಳು
ಈವರೆಗೆ
ಕೇಳಿದ್ದೆಲ್ಲ ಬರೆ ಗುಲ್ಲು
ಹುಚ್ಚು ಹಿಡಿದಿತ್ತಂತೆ
ದಕ್ಕಿತ್ತಂತೆ ರಾಷ್ಟ್ರಪತಿ ಪದಕ
ಏಳು ಕೋಟಿಯ ನಡುವೆ
ಈಗಲೂ ಇದೆಯಂತೆ ಮತ್ತೊಬ್ಬನ ಜೀವ"

-4-

ಬಲವಂತ ಮಾಡುತ್ತೇನೆ
ಬಾ ಸಖಿ ಜೊತೆಗೂಡು
ಅಮುಕುತ್ತೇನೆ ಮತ್ತೆ ಮತ್ತೆ
ಪುಟಿಯುತ್ತಾಳೆ
ಹಟ ಹಿಡಿದು ಮತ್ತೆ ಮತ್ತೆ
ಹಾರುತ್ತದೆ
ಬರೆ ಗಾಳಿ (ಬಲೂನಿನಂತೆ)

ಕೊಸರಾಟ ಗೋಡೆ ಗುದ್ದಾಟ
ಹಣೆ ಹಣೆ ಬಡಿತ
ಸುಸ್ತು ಸಂಭೋಗ
ಹರಿಯುತ್ತಿದೆ
ರಾತ್ರೆ ಹೊದೆ
ಹರಡುತ್ತಿದೆ ಹಗಲ ಕತ್ತಲೆ
ನಿದ್ರಾ ಹೀನ ಸ್ಥಿತಿ, ವಿಸ್ಮೃತಿ

ದಿನವೂ ಮಲಗುವ ಮುನ್ನ
ಹೆಂಗಸಿನ ಗುಪ್ತಾಂಗಗಳ
ವ್ಯರ್ಥ ನೆನವರಿಕೆ
ಬೆಳಗು ಎದ್ದಾಗ ನಿನ್ನ ನೆನಪೇ ಪ್ರಿಯೆ
ತಲೆಸಿಡಿತ
ಹುಡುಕುವೆ ಶೋಕೇಸಿನಲಿ
ವಸ್ತ್ರ ರಹಿತ ಹಿಂಡು ಬೊಂಬೆ

ಪರಸ್ತ್ರೀ ಸಂಗ ಮಾಡಲಿಲ್ಲ
ರಾಮನ ಮನೆಯಾತ
ಶುದ್ಧ ಗಂಭೀರ ಸುಮ್ಮನಿದ್ದೆ
ಆದರೂ ಸತ್ಯ ಸಾಯಲಾರೆ
ಮಾಗದೆ ಉಳಿದರೂ ಸರಿ
ಕೊಳೆತರೂ ಕಳೆದರೂ ಸರಿ
ತೊಟ್ಟು ಕಳಚದಿರು ಭಗವಂತ

-5-

ಶಿವ ನೀನು ದೇವತೆಯಲ್ಲ
ಸತ್ಯ ಕೊಲ್ಲುವಾತ
ಕುಣಿ
ಬುರುಡೆ ಬೂದಿ ಪ್ರೇತ ಗಣ ಗಣ
ಗಂಟೆ ಲಿಂಗ ಜನನಾಂಗ
ಮರಣಾಂಗ
ದಹಿಸಿಬಿಡು ಮಾರನ

ಕಳೆ ಕೌಮಾರ್ಯ ಬಾಲ್ಯ
ಕಂದಾಚಾರ
ಸಾವು ಅಪ್ರಿಯವಲ್ಲ
ಕೊಂಚ ತಡೆ ಬರೆದಿಡುತ್ತೇನೆ
ವಿಶ ಇಳಿವ ಬಗೆಯನ್ನು
ನರ ನರಗಳಲ್ಲಿ ನಿನ್ನ
ರುದ್ರ ತಾಂಡವವನ್ನು

ತಡೆ ಹಿಡಿ
ಮುಗಿಸಿ ಬಿಡುವೆನು
ಕಡೆಯ ದಿನ ಬರೆದದ್ದು
ಕಳಿಸಿ ಬಿಡುವೆನು ಮಸಣಕ್ಕೆ
ಆಸ್ತಿಯ ಜೊತೆ
ಅಲಂಕಾರ
ಸಾಮಗ್ರಿ ಗೋರಿಯಲ್ಲಿ (ಬಿದ್ದಿರಲಿ ಅಲ್ಲಿ)

ಕಣ್ ಮುಚ್ಚುತ್ತೇನೆ
ಕಾಣುತ್ತದೆ ತಲೆ ಕೆಳಗು ಪ್ರಪಂಚ
ಕಾಣುತ್ತದೆ
ತರಗೆಲೆ ರಾಶಿ ರಾಶಿ
ಗುಡಿಸಿ ಗುಡ್ಡೆ ಹಾಕಿ
ಬೆಂಕಿ ಹಚ್ಚುವ ಮೊದಲು
ಬೇಡುತ್ತೇನೆ ಹಳದಿ ಬೆಳಕು.

—ಪ್ರಸನ್ನ

ಎತ್ತ ಹೋಯಿತು ಬೆಡಗಿ

ಎತ್ತ ಹೋದವು ಬೆಡದಿ
ನಿನ್ನ ಕಣ್ಣಿನ ಬೆಂಕಿ
ಯಾವ ತುಡುಗಿನ ಹಗಲು
ಯಾವ ಗುಡುಗಿನ ಇರುಳು

ಎಚ್. ಎಸ್ ಶಿವಪ್ರಕಾಶ್, ಗೃಹ ವಿಜ್ಞಾನ ಕಾಲೇಜು, ಅರಮನೆ ರಸ್ತೆ, ಬೆಂಗಳೂರು-560 001

ಎಲ್ಲಾ ಇದ್ದಹಾಗೆ ಇರಲು
ಕಲ್ಲು ಕಲ್ಲಾಗಿತ್ತು
ನೀರು ನೀರಾಗಿತ್ತು

ಬೇಸಿಗೆ ಸಂಜೆ ಕಣ್ಣಿಗೆ
ಮೋಡ ಕಟ್ಟುತ್ತಿತ್ತು
ಗಾಸಿಯಾಗಿದ್ದ ಕೆರೆ
ನೀರಿಳಿದು ತುಂಬಿತ್ತು

ನಿನ್ನ ಎದೆ ಗೂಡಲ್ಲಿ
ಬಣ್ಣ ಬಣ್ಣದ ಹಕ್ಕಿ
ಇಕ್ಕಿದ್ದ ತತ್ತಿ
ಒಡೆದೊಡೆದು ಮರಿಹಕ್ಕಿ

ಆ ಮೊರೆವ ಸಂಜೆ
ಭೋರ್ಗರೆವ ರಾತ್ರಿ
ಎತ್ತ ಹಾರಿದವೆಂದು
ಎಲ್ಲಿ ಸೇರಿದವೆಂದು

ಭುಗಿಲೆದ್ದು ಹಗಲ ಹಣೆ
ಸೂರ್ಯನನ್ನೇ ಹಿಡಿದು ಆ ಕೈಯಲ್ಲಿ
ನೀರಿನ ಗಿಂಡಿ ಹಿಡಿದು ಈ ಕೈಯಲ್ಲಿ

ನನ್ನ ಬಣ್ಣದ ಹಕ್ಕಿ
ನನ್ನ ಕಂಗಳ ಕುಕ್ಕಿ

ಎತ್ತ ಹೋಯಿತು ಗಾಳಿ
ಎಲ್ಲಿ ಸೇರಿತು ಧೂಳಿ
ಎನ್ನುತ ಹುಡುಕುತ್ತ
ಎತ್ತ ಹೋಯಿತು ಬೆಡಗಿ
ನಿನ್ನ ಕಣ್ಣಿನ ಬೆಂಕಿ

—ಎಚ್.ಎಸ್. ಶಿವಪ್ರಕಾಶ್

ಓದುಗ-ಬರಹಗಾರ : ಕೆಲವು ಟಿಪ್ಪಣಿಗಳು

— ರಾಜೇಂದ್ರ ಚೆನ್ನಿ

ಸಾಹಿತಿ ಯಾರಿಗಾಗಿ ಬರೆಯುತ್ತಾನೆ ಎನ್ನುವ ಪ್ರಶ್ನೆಯ ಬಗ್ಗೆ ಆಗಾಗ್ಗೆ ತಲೆಬಿಸಿ ಮಾಡಿಕೊಳ್ಳುವುದು ಸಾಮಾನ್ಯವಾಗಿದೆಯಾದರೂ ಈ ಪ್ರಶ್ನೆಯನ್ನು ವಿವರವಾಗಿ ಚರ್ಚಿಸುವುದು ಇಂದು ನಿಜವಾಗಿಯೂ ಅವಶ್ಯಕವಾಗಿದೆ. ಗಂಭೀರ ಸಾಹಿತ್ಯವನ್ನು ಎಷ್ಟು ಜನ ಓದುತ್ತಾರೆ. ಈ ಓದುವಿಕೆಯಿಂದ ಅವರ ಮೇಲೆ ಆಗುವ ಪರಿಣಾಮಗಳೇನು, ಸಾಹಿತ್ಯ ನಿಜವಾಗಿಯೂ ಅವರಲ್ಲಿ ಎಷ್ಟರಮಟ್ಟಿಗೆ ಬದಲಾವಣೆಗಳನ್ನು ತರಬಲ್ಲದು, ಈ ಬಗೆಯ ಪ್ರಶ್ನೆಗಳನ್ನು ಕೇಳುವುದರಿಂದ ಒಂದು ರೀತಿಯಲ್ಲಿ ಈ ಚರ್ಚೆ ಜಾಡುತಪ್ಪಿ ಬಿಡುತ್ತದೆ. ಏಕೆಂದರೆ ಈ ಬಗೆಯ ಪ್ರಶ್ನೆಗಳ ಹಿಂದೆ ಸಾಹಿತ್ಯ, ಕಲೆ ಮತ್ತು ಓದುಗನ ಮಧ್ಯದ ಸಂಬಂಧದ ತೀರ ಯಾಂತ್ರಿಕವಾದ ಕಲ್ಪನೆ ಕೆಲಸ ಮಾಡುತ್ತದೆ. ಓದುಗ ಕೃತಿಯ ಹೊರಗೆ ಇದ್ದಾನೆ ಮತ್ತು ಅವನ ಹಾಗೂ ಸಾಹಿತ್ಯದ ಸಂಬಂಧವನ್ನು ಅಂಕಿ ಸಂಖ್ಯೆಗಳ ಮೂಲಕ ಅಳೆಯಬಹುದು ಎಂದುಕೊಳ್ಳುವುದು ಈ ಯಾಂತ್ರಿಕ ಪರಿಕಲ್ಪನೆಯ ಫಲ. ಆದರೆ ಮುಖ್ಯವಾಗಿ ಗಮನಿಸಬೇಕಾದುದೆಂದರೆ ಓದುಗ ಕೃತಿಯ ಆಚೆಗಿರುವ, ಮತ್ತು ಅದನ್ನು ನಿಷ್ಕ್ರಿಯವಾಗಿ ಸ್ವೀಕರಿಸಲು ಸದಾ ಸಿದ್ಧವಾಗಿರುವ ವ್ಯಕ್ತಿಯಲ್ಲ. ಓದುಗ ಕೃತಿಯ ಒಂದು ಮುಖ್ಯ ಅಂಗವಾಗಿರುತ್ತಾನೆ. ಬರಹಗಾರ ಮಾಡುವ ಅನುಭವದ ಆಯ್ಕೆ, ಆ ಅನುಭವದ ಬಗ್ಗೆ ತಾಳುವ ಧೋರಣೆ, ಈ ಧೋರಣೆಯನ್ನು ಕೃತಿಯಲ್ಲಿ ಹೊಮ್ಮಿಸುವ ಧ್ವನಿ (tone), ಸಂವಹನೆಗಾಗಿ ಬಳಸುವ ಕೃತಿಯ ಒಟ್ಟು ರೂಪ ಮತ್ತು ಬಂಧ ಇವೆಲ್ಲವನ್ನು ನಿಯಂತ್ರಿಸುವುದರಿಂದ ಓದುಗ ಕೃತಿಯ ಒಂದು ಅಂಗ ಎಂದು ಪರಿಗಣಿಸುವುದು ಹೆಚ್ಚು ಸೂಕ್ತ. ಇದಕ್ಕಿಂತಲೂ ಮಿಗಿಲಾಗಿ ಬರಹಗಾರನ ಮೌಲ್ಯ ಕಲ್ಪನೆ ಕೂಡ ಅವನ ಮತ್ತು ಓದುಗನನ್ನು ಒಳಗೊಂಡಿರುವ ಸಮಾಜದ ಮಧ್ಯದ ಸಂಬಂಧಗಳನ್ನೆ ಅವಲಂಬಿಸಿರುವುದರಿಂದ ಓದುಗ ಕೃತಿಯ ಒಂದು ಅಂಗವೆನ್ನುವುದರಲ್ಲಿ ಅರ್ಥವಿದೆ. ಎಲ್ಲ ಬರಹಗಾರರಿಗೂ ಗೊತ್ತಿರುವಂತೆ ಬರಹಗಾರ ನಿಜಜೀವನದಲ್ಲಿ ಅವನ ಕೃತಿಯನ್ನು ಓದಿ ಪ್ರತಿಕ್ರಿಯಿಸುವ ಓದುಗ ಅಥವಾ ಓದುಗರ ಗುಂಪನ್ನು ಉದ್ದೇಶಿಸಿ ಬರೆಯುವುದರ ಬದಲು ಇಂಥ ಓದುಗರ ಲಕ್ಷಣಗಳನ್ನೇ ಹೊತ್ತಿರುವ ಒಬ್ಬ ಕಲ್ಪಿತ ಓದುಗನನ್ನು (ideal reader)

ಉದ್ದೇಶಿಸಿ ಬರೆಯುತ್ತಾನೆ. ಇಲ್ಲಿ ಉದ್ದೇಶಿಸಿ ಬರೆಯುವುದೆಂದರೆ ಆ ಓದುಗನನ್ನು ಪ್ರಭಾವಿಸಬೇಕು ಎಂದು. ಸಜ್ಜಾಗಿ ಕೃತಿಯನ್ನು ಒಂದು ಹುನ್ನಾರಾಗಿ ಬಳಸಿಕೊಳ್ಳುವುದೆಂದಲ್ಲ. ಕೃತಿಯಲ್ಲಿ ಅಡಕವಾಗಿರುವ ಅನುಭವ ಮತ್ತು ಅನುಭವ ಮೈತಾಳುವುದರಲ್ಲಿ ಪಡೆದುಕೊಳ್ಳುವ ರೂಪ ಇವೆರಡನ್ನೂ ಸೂಕ್ಷ್ಮವಾಗಿ ನಿರ್ದೇಶಿಸುವ ರೀತಿಯಲ್ಲಿ ಬರಹಗಾರ ಮತ್ತು ಅವನ ಕಲ್ಪಿತ ಓದುಗನ ಮಧ್ಯದ ಸಂಬಂಧಗಳು ಇರುತ್ತವೆ. ಈ ಸಂಬಂಧದ 'ವ್ಯಕ್ತ' ರೂಪರೇಖೆಗಳು ಸಮಾಜದ ಪರಿಸರದಲ್ಲಿಯೇ ಅಭ್ಯಾಸ ಮಾಡಬಹುದಾದ ಸಂಗತಿಗಳು. ಅಂದರೆ ಬರಹಗಾರ ಮತ್ತು ಓದುಗ ಸಮಾಜದ ಯಾವ ವರ್ಗಕ್ಕೆ ಸೇರಿದ್ದಾರೆ, ಸಮಾಜದ ಒಟ್ಟು ರಚನೆಯಲ್ಲಿ ಆ ವರ್ಗದ ಸ್ವರೂಪವೇನು; ಸಮಾಜದ ಉತ್ಪಾದನಾ ಶಕ್ತಿಗಳ ಮೂಲ ರಚನೆಯಲ್ಲಿ ಮತ್ತು ಅದರ ಮೇಲೆ ಕಟ್ಟಿರುವ ಸಂಸ್ಕೃತಿಯ ಮೇಲೆ ರಚನೆಯಲ್ಲಿ ಆ ವರ್ಗದ ಪಾತ್ರವೇನು, ಇಂಥ ಪ್ರಶ್ನೆಗಳ ಮೂಲಕ ಶೋಧಿಸಬಹುದಾದ ಸಂಗತಿಗಳು. ಬರಹಗಾರ ಮತ್ತು ಓದುಗನ 'ಅವ್ಯಕ್ತ' ಸಂಬಂಧಗಳು ಕೃತಿಯ ಒಟ್ಟು ಅಸ್ತಿತ್ವದಲ್ಲಿಯೆ ಮೇಳವಿಸಿದ ಮತ್ತು ನಾವು ಕೃತಿಯಲ್ಲಿಯೇ ಹುಡುಕಬೇಕಾದ ಸಂಗತಿಗಳು. ಈ ವ್ಯಕ್ತ ಮತ್ತು ಅವ್ಯಕ್ತ ಅಂಶಗಳನ್ನು ಸುಲಭವಾಗಿ ಸಮೀಕರಿಸಿದೆ, ಕೃತಿಗೆ ನಿಷ್ಠವಾಗಿದ್ದುಕೊಂಡೆ ಅವುಗಳನ್ನು ಅಭ್ಯಾಸ ಮಾಡುವುದು ಅವಶ್ಯಕವಾಗಿದೆ. ಬರೆಯುವುದೆಂದರೆ ತನ್ನ ಅನುಭವಕ್ಕೆ ನಿಷ್ಠನಾಗಿ ಏಕಕಾಲಕ್ಕೆ ಅದನ್ನು ಹುಡುಕುವ ಮತ್ತು ಸೃಷ್ಟಿಸುವ ಖಾಸಗೀ ಕೆಲಸ ಎಂದು ಬರಹಗಾರ ಅಂದುಕೊಳ್ಳುವುದು ಎಷ್ಟು ಸಹಜವಾಗಿದೆಯೋ ಅಂತೆಯೇ ಕೃತಿಯನ್ನು ಸಮಾಜದ ಹಿನ್ನಲೆಯಲ್ಲಿಟ್ಟು ಅಭ್ಯಸಿಸುವುದು ವಿಮರ್ಶೆಯಲ್ಲಿ ಸಹಜವಾಗಿರಬೇಕು.

ಈ ಹಿನ್ನಲಿಯಲ್ಲಿ ಯುರೋಪಿನ ನವ್ಯ ಸಾಹಿತ್ಯವನ್ನು ಅಭ್ಯಾಸ ಮಾಡುವಾಗ ಅಲ್ಲಿಯ ವಿಮರ್ಶಕರು ಬಳಸಿಕೊಳ್ಳುವ ಒಂದು ಪರಿಕಲ್ಪನೆಯನ್ನು ನೋಡಬಹುದು. ಇದು ಮುಂಚೂಣಿಯ, 'Avant-garde' ಬಗೆಗಿನ ಪರಿಕಲ್ಪನೆ. ಈ ವಿಮರ್ಶಕರ ಅಭಿಪ್ರಾಯದಲ್ಲಿ ಯುರೋಪಿನ ಸಾಹಿತ್ಯದಲ್ಲಿ ಹುಟ್ಟಿಕೊಂಡ ಎಲ್ಲ ಹೊಸ ಬಗೆಗಳು, ನಡೆದ ಎಲ್ಲ ಕ್ರಾಂತಿಗಳು ಮುಂಚೂಣಿ ಎಂದು ಕರೆಯಲಾಗುವ ವರ್ಗದಲ್ಲಿಯೇ ಹುಟ್ಟಿಕೊಂಡವು. ಆದ್ದರಿಂದಲೇ ಬಂಡೇಳುವುದು, ಪರಂಪರೆಯನ್ನು ಧಿಕ್ಕರಿಸುವುದು, ಮಾರೀಯವಾಗಿರುವ ಜಡಗಟ್ಟಿರುವ ಶಿಷ್ಟ ಪರಿಕರಗಳೊಂದಿಗೆ ರಾಜಿ ಮಾಡಿಕೊಳ್ಳದೇ ಇರುವುದು ಇವು ಮುಂಚೂಣಿಯ ಅನಿವಾರ್ಯ ಲಕ್ಷಣಗಳು ಎನ್ನುವ ಭಾವನೆ ಬರುತ್ತದೆ. ಮೂಲತಃ ಮುಂಚೂಣಿಯೆಂದರೆ ಆಯಾ ಕಾಲದಲ್ಲಿ ಮಾನ್ಯತೆ ಪಡೆದಿರುವ, ಜಡವ್ಯವಸ್ಥೆಯಾಗಿ ಬಿಟ್ಟಿರುವ ಸಾಹಿತ್ಯ ಹಾಗೂ ಸಂಸ್ಕೃತಿಯ ಸಂಪ್ರದಾಯವನ್ನು ಧಿಕ್ಕರಿಸಿ ಹೊಸ ಅನುಭವವನ್ನೂ ಅಥವಾ ಅನುಭವಕ್ಕೆ ಅಭಿವ್ಯಕ್ತಿಯ ಹೊಸ ಮಾರ್ಗಗಳನ್ನು ಅಥವಾ ಇವೆರಡನ್ನೂ ಹುಡುಕ ತೊಡಗುವ ಸೃಷ್ಟಿಶೀಲರ ಮತ್ತು ಚಿಂತಕರ ಗುಂಪು.

 ಶೂದ್ರ

ಇವರಲ್ಲಿ ಹೆಪ್ಪುಗಟ್ಟಿರುವ ಹಳೆಯ ಸಂಪ್ರದಾಯವನ್ನು ಒಡೆಯಬೇಕೆನ್ನುವ ಸಂಕಲ್ಪ ಎಷ್ಟು ತೀವ್ರವಾಗಿರುತ್ತದೆಯೋ ಅಷ್ಟೇ ಹೊಸದನ್ನು ಸೃಷ್ಟಿಸುವ ಮತ್ತು ಪ್ರಯೋಗ ಶೀಲವಾಗಿರುವ ಹಂಬಲವು ತೀವ್ರವಾಗಿರುತ್ತದೆ. ಗಮನಿಸಬೇಕಾದ ವಿಷಯವೆಂದರೆ ಮುಂಚೂಣಿ ತನ್ನನ್ನು ಅಂದಿನ ಮಾನ್ಯತೆ ಪಡೆದ ಮುಖ್ಯ ಸಂಪ್ರದಾಯದ ವಿರುದ್ಧ ಗುರುತಿಸಿಕೊಳ್ಳುತ್ತದೆ ಎನ್ನುವುದು. ಇದರ ಅರ್ಥವೇನೆಂದರೆ ಮುಂಚೂಣಿಯ ಹೇಳಿಕೆಗಳೇನೇ ಇರಲಿ ಅದು ಸಂಪ್ರದಾಯವೇ ಇಲ್ಲದ ನಿರ್ವಾತದಲ್ಲಿ ಹುಟ್ಟುವುದಿಲ್ಲ. ಅಷ್ಟೇ ಏಕೆ ಅದು ಸ್ವತಃ ಮುಖ್ಯ ಸಂಪ್ರದಾಯದ ಪ್ರಭಾವಕ್ಕೆ ಮೊದಲು ಒಳಪಟ್ಟಿರುತ್ತದೆ. ಆ ಸಂಪ್ರದಾಯದ ಕೆಲವು ಸತ್ವಗಳು ಆಗಲೇ ಮುಂಚೂಣಿಯ ಸಂವೇದನೆಯನ್ನೂ ಒಳಹೊಕ್ಕಿರುತ್ತದೆ. ಆದ್ದರಿಂದ ಮುಖ್ಯ ಸಂಪ್ರದಾಯದ ವಿರುದ್ಧ ಬಂಡೇಳುವು ದೆಂದರೆ ಮುಂಚೂಣಿಯ ಸಂವೇದನೆಯಲ್ಲಿ ಪ್ರಭಾವಶಾಲಿಯಾಗಿದ್ದುಕೊಂಡು ಸೃಷ್ಟಿ ಶೀಲತೆಗೆ ಅಡ್ಡವಾಗುತ್ತಿರುವ ಸಂಪ್ರದಾಯದ ಅಂಶಗಳ ವಿರುದ್ಧ ಬಂಡೇಳುವುದು. ಹೀಗೆ ಒಂದು ರೀತಿಯಲ್ಲಿ ಸಂವೇದನೆಯಲ್ಲಿ ಅಡಕವಾಗಿರುವ ಅಂಶಗಳ ವಿರುದ್ಧ ಬಂಡೇಳುವುದರಿಂದ ಹಳೆ ಮತ್ತು ಹೊಸತರ ತಿಕ್ಕಾಟ ಅರ್ಥಪೂರ್ಣವಾಗುತ್ತದೆ.

ಅಲ್ಲದೆ ಬಂಡೇಳುವಿಕೆ ಕೂಡ ಸಂಪ್ರದಾಯದ ಪೂರ್ತಿ ತಿರಸ್ಕರಣದ ಬದಲು ಸಂಪ್ರದಾಯದ ಹೆಚ್ಚು ಅರ್ಥಪೂರ್ಣವಾದ ಪರಿಭಾಷೆ ಮತ್ತು ಮುಂದುವರಿಕೆಯಾಗುತ್ತದೆ. ಸಂಪ್ರದಾಯವನ್ನು ಶೂನ್ಯಗೊಳಿಸಿ ಹೊಸದನ್ನು ಸೃಷ್ಟಿಸುವುದು ಸಾಹಿತ್ಯಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಸಂಭವ. ಹದಿವಯಸ್ಸಿನ 'ವರ್ಧಮಾನ' ಹುಡುಗನೊಬ್ಬ ತಂದೆತಾಯಿಗಳ ಮೂಲಕ ಹರಿದುಬಂದಿರುವ ಮೌಲ್ಯಗಳನ್ನು ತಿರಸ್ಕರಿಸುವುದರಲ್ಲಿ ತೋರುವ ಆವೇಶ ಅಥವ ರೊಚ್ಚಿಗೆ ಕಾರಣವೇನೆಂದರೆ ಆ ಮೌಲ್ಯಗಳು ಆಗಲೇ ಅವನ ಸಂವೇದನೆಯಲ್ಲಿ ಪ್ರಭಾವಶಾಲಿಯಾಗಿ ಬಿಟ್ಟಿವೆ ಎನ್ನುವುದರ ಅರಿವು. ಹಾಗೆಯೇ ಮುಂಚೂಣಿ ಕೂಡ ಮುಖ್ಯ ಸಂಪ್ರದಾಯ ತನ್ನ ಮೇಲೆ ಬೇರುಬಿಟ್ಟಿರುವ ಪ್ರಭಾವದ ಅರಿವಿನಿಂದಲೇ ಅದರ ವಿರುದ್ಧ ಬಂಡೇಳುವ ಮಾನಸಿಕ ಶಕ್ತಿಯನ್ನು, ಪ್ರಯೋಗ ಶೀಲತೆಯನ್ನು ಪಡೆದುಕೊಳ್ಳುತ್ತದೆ. ಕೆಲವೊಂದು ಸಾರಿ ಮುಂಚೂಣಿ ಬಂಡೇಳುವಿಕೆಯನ್ನು ವಿವರಿಸುವಾಗ ಸಂಪ್ರದಾಯದ ಪರಿಭಾಷೆಯನ್ನೇ ಬಳಸಿಕೊಳ್ಳುತ್ತದೆ- ಉದಾಹರಣೆಗೆ ಹದಿನೆಂಟನೇ ಶತಮಾನದ ನವ-ಅಭಿಜಾತ ಮಾರ್ಗವನ್ನು (Neo-Classicism) ಪೂರ್ತಿಯಾಗಿ ಧಿಕ್ಕರಿಸಹೊರಟ ವರ್ಡ್ಸ್‌ವರ್ಥ್ ತನ್ನ ಘೋಷಣೆಯನ್ನು 'nature' ಈ ಪಾರಿಭಾಷಕದ ಮೂಲಕ ಮಾಡುತ್ತಾನೆ. Nature ಈ ಪದ ನವ ಅಭಿಜಾತ ಮಾರ್ಗದ ಮುಖ್ಯ ಪಾರಿಭಾಷಿಕವೂ ಆಗಿತ್ತು. ವರ್ಡ್ಸ್‌ವರ್ಥ್ ಈ ಪದಕ್ಕೆ ಹೊಸ ಅರ್ಥ ಪರಂಪರೆಯನ್ನು ನಿರ್ಮಿಸಿಕೊಡುತ್ತಾನೆ. ಸಂಪ್ರದಾಯದ ಒಂದು ಮುಖ್ಯ ಪಾರಿಭಾಷಿಕವನ್ನೂ ಅವನು ಬಳಸುತ್ತಾನೆ ಎನ್ನುವುದು ದೊಡ್ಡ ವಿಷಯವಲ್ಲ. ಆದರೆ ಹೀಗೆ ಮಾಡುವುದರ ಮುಖಾಂತರ ಸಂಪ್ರದಾಯವನ್ನು

ತಿರಸ್ಕರಿಸುವ ಬದಲು ಸಂಪ್ರದಾಯದಲ್ಲಿದ್ದರೂ ಕಡೆಗಣಿಸಲಾಗಿದ್ದ ಅಂಶಗಳ ಮೇಲೆ ಒತ್ತು ಕೊಡುತ್ತಾನೆ ಎನ್ನುವುದು ಮುಖ್ಯ. ಕನ್ನಡದ ಎಲ್ಲ ಪ್ರಮುಖ ನವ್ಯ ಬರಹಗಾರರು ಮೊದಲು ನವೋದಯದ ಶೈಲಿಯಲ್ಲಿ ಬರೆಯುತ್ತಿದ್ದರು ಎನ್ನುವುದು ಕೂಡ ಇಂಥದೇ ಒಂದು ಉದಾಹರಣೆಯಾಗಿದೆ. ಮುಖ್ಯ ಸಂಪ್ರದಾಯದ ವಿರುದ್ಧ ಮುಂಚೂಣಿ ಬಂಡೇಳುವುದು ಕೇವಲ ತಿರಸ್ಕರಣದ ಕೆಲಸವಲ್ಲ. ಪ್ರಭಾವಗಳನ್ನು ಜೀರ್ಣಿಸಿಕೊಂಡು ಬೆಳೆಯುವ ಕೆಲಸ. ಆದರೆ ಮುಂಚೂಣಿ ತನ್ನ ಸೃಷ್ಟಿಶೀಲತೆಗಾಗಿ ಜಾಗ ಮಾಡಿಕೊಳ್ಳಲು ಆರಂಭದ ದೆಶೆಯಲ್ಲಿ ಸಂಪ್ರದಾಯವನ್ನು ಇಡಿಯಾಗಿ ತಿರಸ್ಕರಿಸಿದಂತೆ ವರ್ತಿಸುವುದು ಒಂದು ಮಾನಸಿಕ ಅವಶ್ಯಕತೆಯಾಗಿದೆ. ಮೊದಲ ಹಂತದಲ್ಲಿ ಮುಂಚೂಣಿಯ ಕೆಲಸ ಸಂಪ್ರದಾಯವನ್ನು ಒಡೆಯುವವಾದ್ದರಿಂದ ಆಘಾತಗೊಳಿಸುವಂತೆ, ರೊಚ್ಚಿಗೇಳಿಸುವಂತೆ, ಪ್ರಯೋಗಶೀಲತೆಯಿಂದ ದಿಗ್ಭ್ರಮೆಗೊಳಿಸುವಂತೆ ಬರೆಯುವುದು ಸಾಮಾನ್ಯವಾಗಿರುತ್ತದೆ. ಈ ಹಂತದಲ್ಲಿ ಬರುವ ಕೃತಿಗಳು ತಮ್ಮ ನಾವೀನ್ಯತೆಯಿಂದ, ಹೊಸ ಸಾಧ್ಯತೆಗಳತ್ತ ಹೆಜ್ಜೆ ಇಡುವುದರಿಂದ ಮುಖ್ಯವಾಗಿರುತ್ತವೆಯೇ ಹೊರತು ಸಾಮಾನ್ಯವಾಗಿ ಸ್ವಯಂ ಪರಿಪೂರ್ಣ ಕಲಾಕೃತಿಗಳಾಗಿರುವುದಿಲ್ಲ. ಮುಂಚೂಣಿ ಮತ್ತು ಓದುಗವರ್ಗದ ಹೊಸದಾದ ಸಂಬಂಧಗಳು ಇನ್ನೂ ಖಚಿತಗೊಳ್ಳದೇ ಇರುವ ಆತಂಕದಿಂದಾಗಿ ಓದುಗನನ್ನು ಛೇಡಿಸುವುದರಲ್ಲಿಯೇ ಸೃಜನಶಕ್ತಿ ಹರಣವಾಗುವ ಸಾಧ್ಯತೆ ಇದೆ. ಆದರೆ ಇಂಥ ಪ್ರಯೋಗಶೀಲತೆ ಕ್ರಮೇಣವಾಗಿ ಓದುಗವರ್ಗದ ಸಂವೇದನೆಯನ್ನು ತಿದ್ದಿದ ಮೇಲೆ ಬರುವ ಮುಖ್ಯ ಕೃತಿಗಳು ಹೆಚ್ಚಿನ ಆತ್ಮವಿಶ್ವಾಸವನ್ನು ಕೃತಿಯ ನಿರಾತಂಕವಾದ ಕಲೆಗಾರಿಕೆಯಲ್ಲಿ ತೋರಿಸುತ್ತವೆ. ಸಾಮಾನ್ಯವಾಗಿ ಸಾಹಿತ್ಯದಲ್ಲಿ ಕ್ರಾಂತಿಗಳು ಮಾಧ್ಯಮನಿಷ್ಠ ಅಥವಾ ರೂಪ ಸಂಬಂಧಿಯಾಗಿರುತ್ತವೆ. ಕಾವ್ಯದ ಭಾಷೆ ಆಡು ಮಾತಿಗೆ ಹೆಚ್ಚು ಹತ್ತಿರವಾಗಿರಬೇಕು, ಸಂವಹನೆ ಹೆಚ್ಚು ಸರಳವಾಗಿರಬೇಕು ಎನ್ನುವುದರ ಜೊತೆಗೆ ಅನುಭವವನ್ನು ಹಿಡಿಯಾಗಿ ಹಿಡಿದುಕೊಳ್ಳಲು ಹೊಸ ರೂಪದ ಆವಿಷ್ಕಾರ ಆಗಬೇಕು.—ಇವು ಎಲ್ಲ ಸಾಹಿತ್ಯಕ ಕ್ರಾಂತಿಗಳ ಘೋಷಣಾ ಪತ್ರಗಳಲ್ಲೂ ಕಂಡುಬರುವ ಸಂಗತಿಗಳು. ಸಾಹಿತ್ಯಕ ಕ್ರಾಂತಿಗಳು ಮಾಧ್ಯಮದ ಬಗೆಗಿನವು ಎಂದು ತೋರಿದರೂ ಅವು ಪರೋಕ್ಷವಾಗಿ ಸಮಾಜದಲ್ಲಾದ ಬದಲಾವಣೆಗಳನ್ನು ಸೂಚಿಸುತ್ತವೆ ಮತ್ತು ಈ ಸಾಮಾಜಿಕ ಬದಲಾವಣೆಗಳಿಂದ ಹುಟ್ಟುವ ಓದುಗ ಮತ್ತು ಬರಹಗಾರನ ಮಧ್ಯದ ಹೊಸ ಸಂಬಂಧಗಳನ್ನು ಸೂಚಿಸುತ್ತವೆ.

ಸಾಹಿತ್ಯಕ ಸಂಪ್ರದಾಯವೊಂದು ಜಡಗೊಂಡು ಸಿದ್ಧ ಶೈಲಿಯೊಂದು ನಿರ್ಮಾಣವಾಗುವ ಹೊತ್ತಿಗೆ ಓದುಗ–ಬರಹಗಾರನ ಸಂಬಂಧ ಖಚಿತಗೊಂಡುಬಿಡುತ್ತದೆ. ಇದಕ್ಕೂ ಮುಖ್ಯವಾದ ಸಂಗತಿಯೆಂದರೆ ಬರಹಗಾರನ ಮೌಲ್ಯಕಲ್ಪನೆಗಳಿಗೂ ಓದುಗವರ್ಗದ ಮೌಲ್ಯಕಲ್ಪನೆಗಳಿಗೂ ಒಂದು ಬಗೆಯ ಹೊಂದಾಣಿಕೆ ಏರ್ಪಟ್ಟಿರುತ್ತದೆ.

ಇಲ್ಲಿ ಮತ್ತೆ ಮುಂಚೂಣಿಯ ಪರಿಕಲ್ಪನೆಯ ಪ್ರಯೋಜನವನ್ನು ನೋಡಬಹುದು. ಸಾಹಿತ್ಯದ ಸಂಪ್ರದಾಯವೊಂದು ಶುರುವಾಗುವ ಸಂದರ್ಭದಲ್ಲಿ ಮುಂಚೂಣಿಯಲ್ಲಿರುವ ಬರಹಗಾರನ ಮೌಲ್ಯಕಲ್ಪನೆ ಮುಖ್ಯ ಸಂಪ್ರದಾಯದ ಪ್ರಭಾವದಲ್ಲಿರುವ ಓದುಗನ ಮೌಲ್ಯಕಲ್ಪನೆಗಿಂತ ಭಿನ್ನವಾಗಿರುತ್ತದೆ; ಹೆಚ್ಚಾಗಿ ಆ ಮೌಲ್ಯಕಲ್ಪನೆಗೆ ವಿರೋಧಿ ಆಗಿರುತ್ತದೆ. ಆದರೆ ಹೊಸ ಸಂಪ್ರದಾಯ ಸತ್ವಶಾಲಿಯಾಗಿದ್ದಲ್ಲಿ, ಸಮಾಜದಲ್ಲಿ ನಡೆಯುವ ಬದಲಾವಣೆಗಳ ಜತೆಗೆ ಸೇರಿಕೊಂಡು ಓದುಗ ವರ್ಗದ ಮೌಲ್ಯ ಕಲ್ಪನೆಗಳಲ್ಲಿ ಪಲ್ಲಟಗಳನ್ನು ಮಾಡುತ್ತದೆ. ಮುಂಚೂಣಿಯ ಮೌಲ್ಯಕಲ್ಪನೆಗಳು ಕ್ರಮೇಣವಾಗಿ ಮುಖ್ಯ ಸಂಪ್ರದಾಯದ ಮೂಲಕಲ್ಪನೆಗಳಾಗುತ್ತವೆ. ಪರಿಧಿಯಲ್ಲಿದ್ದದ್ದು ಕೇಂದ್ರವಾಗುತ್ತದೆ. ಇದನ್ನೆಲ್ಲಾ ಗಮನಿಸಿದರೆ ಮುಂಚೂಣಿಯ ಮೌಲ್ಯ ಕಲ್ಪನೆಗಳು ಓದುಗ ವರ್ಗವನ್ನು ಒಳಗೊಂಡ ಮುಖ್ಯ ಸಂಪ್ರದಾಯವನ್ನು ಪರೋಕ್ಷವಾಗಿ ,ಅವಲಂಭಿಸಿರುವುದು ಸ್ಪಷ್ಟವಾಗುತ್ತದೆ. ಒಂದು ಸತ್ವಶಾಲಿಯಾದ ಕೃತಿ ಓದುಗನ ಅಭಿರುಚಿಯನ್ನು ತಿದ್ದುತ್ತದೆ ಎನ್ನುವುದರ ಅರ್ಥವೆಂದರೆ ಅದು ಹೊಸ ಓದುಗ ವರ್ಗವನ್ನು ನಿರ್ಮಿಸಿಕೊಳ್ಳುತ್ತದೆಯೆಂದು. ಹೀಗೆ ಮಾಡುವುದರ ಮುಖಾಂತರ ಮೌಲ್ಯಕಲ್ಪನೆಯಲ್ಲಿ ಸೂಕ್ಷ್ಮವಾದ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಶ್ರೇಷ್ಠ ಕೃತಿ ಓದುಗನ ಮೌಲ್ಯಕಲ್ಪನೆಯನ್ನೂ ಬುಡಮೇಲು ಮಾಡಬಲ್ಲದು. ಸಾಹಿತ್ಯದ ಈ ಕೆಲಸ ಕಣ್ಣಿಗೆ ಹೊಡೆಯುವಂತಿರದಿದ್ದರೂ ಆಳದಲ್ಲಿ ಕ್ರಾಂತಿಕಾರಿ ಆಗಿರುತ್ತದೆ.

ಓದುಗನಲ್ಲಿದ್ದ ಗ್ರಹಿತ ಕಲ್ಪನೆಗಳನ್ನು, ಸ್ಪಂದಿಸುವ ಬಗೆಗಳನ್ನು ತಟ್ಟದೆ ಇರುವ ಸಾಹಿತ್ಯ ಸಾಹಿತ್ಯವಲ್ಲ. ಆದರೆ ಮುಂಚೂಣಿ ಸಾಹಿತ್ಯದ ವೈಶಿಷ್ಟವೆಂದರೆ ಅದು ಮಾಡುವ ಪಲ್ಲಟ ಹೆಚ್ಚು ತೀವ್ರವಾಗಿರುತ್ತದೆ. ಸಂಸ್ಕೃತಿಯು ಹೆಪ್ಪುಗಟ್ಟಿದ ಸಂವೇದನೆಯ ಬಗೆಗಳನ್ನು ವೈಭವೀಕರಿಸುವ ಅಥವಾ ಇದ್ದಂತೆಯೇ ಸ್ವೀಕರಿಸುವ ಬರಹಗಾರ ಒಬ್ಬ ಕಸುಬುದಾರನಾಗಬಹುದೇ ಹೊರತು ಸೃಷ್ಟಿಶೀಲ ಸಾಹಿತಿಯಾಗುವುದಿಲ್ಲ. ಸಂಸ್ಕೃತಿಯಿಂದ ಪಡೆದ ನೋಡುವ ಬಗೆಗಳನ್ನು ತಿರಸ್ಕರಿಸಿ, ಅನುಭವವನ್ನು ಹೊಕ್ಕು ನೋಡುವ ಧೈರ್ಯವಿಲ್ಲದಿದ್ದರೆ, ವ್ಯವಸ್ಥೆಯನ್ನು ಎದುರಿಸುವ ಗಟ್ಟಿತನವಿಲ್ಲದಿದ್ದರೆ ಬರಹಗಾರ ತನ್ನ ಸೃಷ್ಟಿಶೀಲತೆಯನ್ನು ಮಾರಿಕೊಳ್ಳುತ್ತಾನೆ. ಓದುಗನ ಪೂರ್ವ ಗ್ರಹಗಳನ್ನು, ಧೋರಣೆಗಳನ್ನು ಪುಸಲಾಯಿಸುವಂತೆ ಬರೆಯುವ ಬರಹಗಾರ ಮಾಡುವುದಿಷ್ಟೆ—ಓದುಗನಲ್ಲಿ ಆಗಲೇ ಸಿದ್ಧವಾಗಿರುವ 'ಅನುಭವ'ವನ್ನು ಅವನಿಗೆ ಪರಿಚಿತವಾದ ಸಿದ್ಧ ಶೈಲಿಯಲ್ಲಿ ಹೇಳುವುದು.

> "ಹಳೆಮನೆಯ ಮಹಿಮಾಟ ಎಲ್ಲ ಬಹಳ ಸಲೀಸು ಹಳೆಗಂಡಹೆಂಡಿರೊಡನಾಟ
> ಕೂಟದ ಚಟದ ಚುರುಕು, ತುರುಸು".

ಆದರೆ ವ್ಯವಸ್ಥೆಯ ಜತೆಗೆ ಎಷ್ಟರ ಮಟ್ಟಿಗೆ ಹೊಂದಾಣಿಕೆ ಮಾಡಿಕೊಳ್ಳದೆ ಬರೆಯಬಹುದು ಎನ್ನುವುದು ವ್ಯವಸ್ಥೆಯ ಒತ್ತಡಗಳ ಜತೆಗೆ ಓದುವರ್ಗದ ಸಂವೇದನೆ

ಯನ್ನೂ ಅವಲಂಬಿಸಿರುತ್ತದೆ. ಸಾಮಾಜಿಕ ಪರಿಸರದಿಂದಾಗಿ ಓದುಗ ವರ್ಗದಿಂದ ಬರಹಗಾರ ಪರಕೀಯನಾದಂತೆ ಅಂತರ್ಮುಖತೆ ವಿನಾಶಕಾರಿಯಾಗಿ ಬೆಳೆಯಬಹುದು. ಸಮಾಜದ ಭ್ರಷ್ಟತೆ ಓದುಗ ವರ್ಗವನ್ನು ಆವರಿಸಿದಂತೆ ಬರಹಗಾರ ಆವೇಶ, ರೊಚ್ಚು ಇವುಗಳಿಗೆ ಈಡಾಗಿ ಕಲೆಗೆ ಬೇಕಾದ ಹಿಡಿತವನ್ನು ಕಳೆದುಕೊಳ್ಳಬಹುದು. ಈ ದೃಷ್ಟಿಯಿಂದ ನೋಡಿದರೆ ಬರಹಗಾರ ಓದುಗ ವರ್ಗವನ್ನು ನಿರ್ಮಿಸುವಂತೆ, ಓದುಗ ವರ್ಗ ಬರಹಗಾರರನ್ನು ಸೃಷ್ಟಿಸುತ್ತದೆಯೆಂದು ಹೇಳಬಹುದು. ನಿಶ್ಚಲವಾದ, ಸಮಾಜದಲ್ಲಿ ಪೂರ್ತಿ ಸ್ವೀಕೃತವಾದ ಮೌಲ್ಯಕಲ್ಪನೆಯುಳ್ಳ ವ್ಯವಸ್ಥೆ ಈ ಮೌಲ್ಯ ಕಲ್ಪನೆಗಳನ್ನು 'ಸುಂದರ'ವಾಗಿ ಹೇಳಬಲ್ಲ ಕಸುಬುಗಾರ ಕವಿಯನ್ನು ಹುಟ್ಟಿಸುತ್ತದೆ. ಸಂಕ್ರಮಣಕಾಲದ ಪಲ್ಲಟಗಳಿಗೆ ಪಕ್ಕಾದ ಓದು ವರ್ಗ ಬಂಡುಕೋರನಾದ, ವ್ಯಗ್ರನಾದ ಕವಿಯನ್ನು ಹುಟ್ಟಿಸುತ್ತದೆ. ನಿರಂತರವಾಗಿ ನಡೆಯುವ ಸಾಮಾಜಿಕ ಬದಲಾವಣೆಗಳು ಮುಂಚೂಣಿ ಮತ್ತು ಮುಖ್ಯ ಸಂಪ್ರದಾಯದ ಅದಲು ಬದಲುಗಳನ್ನು ನಿರ್ದೇಶಿಸುತ್ತವೆ. ಆದ್ದರಿಂದ ಕೆಲವು ವಿಮರ್ಶಕರು ಹೇಳುವಂತೆ ಮುಂಚೂಣಿ, ಮುಂಚೂಣಿಯಾಗಿಯೇ ಉಳಿಯಬೇಕಾದರೆ ನಿರಂತರ ಕ್ರಾಂತಿಯ ಸ್ಥಿತಿಯೇ ಸ್ಥಾಯಿಯಾಗಿರಬೇಕಾಗುತ್ತದೆ. ಆದರೆ ಸಾಹಿತ್ಯ ಸದಾ ಮುಂಚೂಣಿ ಸ್ಥಿತಿಯಲ್ಲಿಯೇ ಉಳಿಯಬೇಕೆನ್ನುವುದು ಸಾಧ್ಯವೂ ಅಲ್ಲ, ಅಪೇಕ್ಷಣೀಯವೂ ಅಲ್ಲ. ಬದಲಾಗಿ ಮುಂಚೂಣಿಯ ಪ್ರಯೋಜನವೆಂದರೆ ಸಂಸ್ಕೃತಿಯಲ್ಲಿ ಮಾನ್ಯತೆ ಪಡೆದ ಎಲ್ಲವನ್ನೂ ಬೆಂಬಲಿಸುವುದು ಸಾಹಿತ್ಯದ ಕೆಲಸವಲ್ಲ ಎನ್ನುವುದನ್ನು ನೆನಪು ಮಾಡಿಕೊಡುವುದರಲ್ಲಿದೆ. ಸಮರ್ಥ ಬರಹಗಾರನೊಬ್ಬ ಮುಂಚೂಣಿಯ ಸಂವೇದನೆಯನ್ನು ತನ್ನ ಸೃಷ್ಟಿಶೀಲ ವ್ಯಕ್ತಿತ್ವದ ಬಹುಮುಖ್ಯ ಅಂಶವಾಗಿಸಿಕೊಳ್ಳುತ್ತಾನೆ. ಸಂಸ್ಕೃತಿಯೊಂದಿಗೆ ರಾಜಿ ಮಾಡಿಕೊಳ್ಳುವ ಅಥವಾ ಇಡಿಯಾಗಿ ತಿರಸ್ಕರಿಸುವ ಸರಳ ಉಪಾಯಗಳನ್ನು ತ್ಯಜಿಸಿ ಅದರ ಬಗ್ಗೆ ಸಂಕೀರ್ಣವಾದ ನಿಲುವನ್ನೂ ತಾಳಿ ಓದುಗ ವರ್ಗದ, ಸಂಸ್ಕೃತಿಯ ಆರೋಗ್ಯವನ್ನು ಕಾಪಾಡುತ್ತಾನೆ.

ಯುರೋಪಿನ ಸಂದರ್ಭದಲ್ಲಿ ಮುಂಚೂಣಿಯ ಬಗ್ಗೆ ವಿಮರ್ಶಕರು ಕೊಟ್ಟಿರುವ ಈ ಒಳನೋಟಗಳನ್ನು ಕನ್ನಡದ ಸಂದರ್ಭಕ್ಕೆ ಅನ್ವಯಿಸಿ ನೋಡುವ ಪ್ರಯತ್ನವನ್ನು ಮಾಡಬಹುದು. ಈ ಕೆಲಸದಲ್ಲಿ ಸಾಮ್ಯಗಳನ್ನು ಗುರುತಿಸುವುದಕ್ಕಿಂತ ಭಿನ್ನತೆಗಳನ್ನು ಗಮನಿಸುವುದು ಮುಖ್ಯವಾಗುತ್ತದೆ. ಆದರೂ ಈ ಒಳನೋಟಗಳು ಸಾಹಿತ್ಯ ಮತ್ತು ಓದುಗವರ್ಗದ ಂಧಗಳ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಬಲ್ಲವು. ಕನ್ನಡದ ಮುಖ್ಯ ಕವಿಗಳಾದ ಪಂಪ ಮತ್ತು ಕುಮಾರವ್ಯಾಸರ ಕಾಲದಲ್ಲಿದ್ದ ಬರಹಗಾರ ಓದುಗ (ಕೇಳುಗ) ಸಂಬಂಧಗಳ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗದಿದ್ದರೂ ಅವರ ಕೃತಿಗಳ ಆಧಾರದ ಮೇಲೆ ಕೆಲವು ಅನುಮಾನಗಳನ್ನು ಮಾಡಬಹುದು. ಅಂದಿನ ಸಾಹಿತ್ಯಕ, ಸಾಂಸ್ಕೃತಿಕ ಪರಿಸರಗಳ ಬಗ್ಗೆ ಪ್ರಾಥಮಿಕ ವಿವರಗಳು ನಮಗೆ ಗೊತ್ತಿರ

ತೂದ,

ವಿದ್ದರೂ, ಕೃತಿಗಳ ಸತ್ವವೇ ಕೆಲವು ಸೂಚನೆಗಳನ್ನು ಕೊಡುತ್ತವೆ. ಇಂದಿನ ಪರಿಕಲ್ಪನೆಗಳನ್ನೂ ಪಂಪ, ಕುಮಾರವ್ಯಾಸರ ಮೇಲೆ ಹೇರಿ ಅವರಿಬ್ಬರೂ ಸಂಪ್ರದಾಯಕ್ಕೆ ಪಕ್ಕಾಗಿ ಬರೆದರು ಎನ್ನುವುದು ದಡ್ಡತನವಾಗುತ್ತದೆ. ಪಂಪನ ಅದ್ಭುತವಾದ ಸಂಗ್ರಹ ಕಥನ ಶಕ್ತಿ, ಶೈಲಿಗಳ ವೈವಿಧ್ಯ, ಸಂಸ್ಕೃತ ಮೂಲಗಳ ಪಾಂಡಿತ್ಯ ಪೂರ್ಣ ಉಪಯೋಗ ಮಾರ್ಗದೇಶಿಗಳ ಹೆಣೆಯುವಿಕೆಗೆ ಪೂರಕವಾದ ವೈವಿಧ್ಯವುಳ್ಳ ಶಬ್ದ ಸಂಗ್ರಹ (diction) ಇವುಗಳನ್ನು ನೋಡಿದರೆ ಅವನು ಸಂಸ್ಕೃತ ಮತ್ತು ಕನ್ನಡ ಕಾವ್ಯದ ಪರಿಚಯವುಳ್ಳ ಸುಸಂಸ್ಕೃತ ನಾಗರೀಕ ಸಂವೇದನೆಯ ಓದುಗ (ಕೇಳುಗ) ರನ್ನು ಉದ್ದೇಶಿಸಿ ಬರೆದನೆನ್ನುವುದು ಸ್ಪಷ್ಟವಾಗುತ್ತದೆ. ಹಲವಾರು ರೀತಿಯಲ್ಲಿ ಪಂಪನ ಕಾವ್ಯದ ಸಾಮಾನ್ಯ ಗುಣಗಳು Court–Poetryಯ ಗುಣಗಳು. ಅನುಭವದಲ್ಲಿ ತೊಡಗಿಕೊಂಡಾಗ ಅವನ ಸೃಷ್ಟಿಯ ಸೆಳವು ಆಸ್ಥಾನ ಕಾವ್ಯದ ದಡಗಳನ್ನು ಕೊಚ್ಚಿಕೊಂಡು ಹೋಗುತ್ತದೆ. ಆದರೂ ಅವನ ಕಾವ್ಯದ ಮೂಲ ಸ್ವರೂಪ ಆ ಬಗೆಯದಾಗಿದೆ. ಅವನೇ ನೋಡಿ ಅನುಭವಿಸಿದ ಸಂಗತಿಗಳ ವರ್ಣನೆಯನ್ನು ಬಿಟ್ಟರೆ ಇತರ ವರ್ಣನೆಗಳ ಸೊಬಗು 'ಸ್ವಯಂಭು' ಗುಣವುಳ್ಳದಲ್ಲ. ಆದರೆ ಆ ವರ್ಣನೆಗಳ ಸೊಬಗು ಅವುಗಳಿಗೆ ಮೂಲವಾದ ಸಂಸ್ಕೃತ ಕಾವ್ಯಗಳ ಜತೆ ಹೋಲಿಸಿದಾಗ ಮಾತ್ರ ಪೂರ್ತಿಯಾಗಿ ವೇದ್ಯವಾಗುತ್ತದೆ. ತನ್ನ ಓದುಗ ಕೇಳುಗರು, ಹೀಗೆ ಸಂಸ್ಕೃತ, ಮೂಲಗಳ ನೆನಪನ್ನು ತನ್ನ ಕಾವ್ಯದ ಹೊಸ ಅನುಭವದ ಜತೆಗೆ ಹೋಲಿಸಿ ಪ್ರತಿಕ್ರಿಯಿಸುತ್ತಾರೆ ಎನ್ನುವ ವಿಶ್ವಾಸವೇ ಪಂಪನ ಕಾವ್ಯದ ವರ್ಣಕ ಶೈಲಿಯ ಹಿಂದಿದೆ. ಅಂದರೆ, ಪಂಪ, ತನ್ನ ಓದುಗರ ಸಂವೇದನೆಯನ್ನೂ ಹತ್ತಿರದಿಂದ ಮತ್ತು ಖಚಿತವಾಗಿ ಬಲ್ಲವನು ಎನ್ನುವುದು ಸ್ಪಷ್ಟ. ಅಷ್ಟಾದಶ ವರ್ಣನೆಗಳ ಮತ್ತು ಸಂಸ್ಕೃತ ಸಾಹಿತ್ಯದ ಓದಿನ ನೆನಪನ್ನು ಮರುಕಳಿಸುವ ಸ್ವೀಕೃತ ಮಾರ್ಗಗಳು (Conventions) ಬರಹಗಾರ ಮತ್ತು ಓದುಗರಿಬ್ಬರಿಗೂ ಒಪ್ಪಿತವಾಗಿದ್ದರಿಂದಲೇ ಪಂಪನ ಪ್ರಯೋಗಶೀಲತೆಗೆ ಅನುವು ದೊರೆಯಿತು. ಪಂಪನ 'ಲೌಕಿಕ' ಕಾವ್ಯವಾದ 'ವಿಕ್ರಮಾರ್ಜುನ ವಿಜಯದ' ವಸ್ತುವಿನ ಆಯ್ಕೆಯೂ ಅವನ ಮತ್ತು ಓದುಗರ ಸಂಬಂಧವನ್ನು ಅವಲಂಬಿಸಿತ್ತು. ಮೂಲ ಮಹಾಭಾರತದ ಕತೆಯನ್ನು 'ಮಿಗ್ಗಿಡದಂತೆ' ಸಂಗ್ರಹವಾಗಿ ಹೇಳುವುದು ಪಂಪ ಹೇಳಿಕೊಳ್ಳುವ ಉದ್ದೇಶ ಮಾತ್ರವಾಗಿದೆ. ಅವನ ಕಾವ್ಯದ ಯಶಸ್ಸು ಸಂಗ್ರಹವಾಗಿ ಹೇಳುವುದರಲ್ಲಿ ಅಲ್ಲ ಮೂಲದಲ್ಲಿ ಅವನು ಮಾಡಿಕೊಳ್ಳುವ ಮಾರ್ಪಾಟುಗಳಲ್ಲಿದೆ. ಈ ಮಾರ್ಪಾಟುಗಳನ್ನು ಒಟ್ಟು ಸಂಸ್ಕೃತಿಯ ಹಿನ್ನೆಲಿಯಲ್ಲಿ ಅರ್ಥಮಾಡಿಕೊಳ್ಳಬೇಕು. ವ್ಯಾಸ ಮಹಾಭಾರತದ ಕತೆ ಮುಖ್ಯ ಸಂಪ್ರದಾಯದಲ್ಲಿ ಸ್ವೀಕೃತವಾದ ಸಂಗತಿಯಾಗಿತ್ತು. (ಕೊನೆ ಪಕ್ಷ ಅದರ ಯಾವುದೋ ಪಾಠದಲ್ಲಿ). ಆದ್ದರಿಂದ ಆ ಕತೆಯನ್ನು ವಸ್ತುವನ್ನಾಗಿ ಉಪಯೋಗಿಸುವುದು ಸಂವಹನೆಯನ್ನು ಸುಲಭಗೊಳಿಸಿದರೂ ಕಾವ್ಯ ಸೃಷ್ಟಿಯಲ್ಲಿ ದೊಡ್ಡ ಸವಾಲಾಗಿತ್ತು. ಏಕೆಂದರೆ ಅಂದಿನ

ಪರಿಸರದಲ್ಲಿ ಕವಿ ತನ್ನ ಸ್ವಂತಿಕೆಯನ್ನು ಮೂಲದಲ್ಲಿ ಮಾಡಿಕೊಳ್ಳುವ ಮಾರ್ಪಾಟುಗಳ ಮುಖಾಂತರ ಮೆರೆಯಬೇಕಾಗಿತ್ತು. ಇದು ಕೇವಲ ಅಭಿವ್ಯಕ್ತಿಯಲ್ಲಿ ಸ್ವಂತಿಕೆಯನ್ನು ತೋರಿಸುವುದು ಮಾತ್ರವಲ್ಲ. ಈ ಮಾರ್ಪಾಟುಗಳ ಮುಖಾಂತರ ತನ್ನ ಅಥವಾ ತನ್ನ ಸಮಾಜದ ಮೌಲ್ಯ ಕಲ್ಪನೆಗಳನ್ನು ಅಭಿವ್ಯಕ್ತಿಸುವ ಪ್ರಶ್ನೆಯಾಗಿತ್ತು. ಅಂದಿನ ಕಾವ್ಯ ಪರಂಪರೆಯಲ್ಲಿ ಸಮಾಜದ ಬದಲಾದ ಮೌಲ್ಯ ಕಲ್ಪನೆಗಳು ಅಭಿವ್ಯಕ್ತ ಆಗುತ್ತಿದ್ದುದು ಹೊಸ ವಸ್ತುವಿನ ಆಯ್ಕೆಯಿಂದಲ್ಲ; ಪರಿಚಿತ ವಸ್ತುವಿನ ಮರು ಜೋಡಣೆ ಮತ್ತು ಹೊಸ ಅರ್ಥೀಕರಣದಿಂದ. ಮನಶ್ಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ ವ್ಯಕ್ತಿಯೊಬ್ಬ ತನ್ನ ಮಾನಸದ ಮೇಲೆ ಆಳವಾದ ಪರಿಣಾಮ ಬೀರಿದ ಘಟನೆಗಳ ಸರಣಿಯೊಂದನ್ನು, ಮೂಲ ಕಥಾ ಸಂವಿಧಾನವೊಂದನ್ನು (Script) ಮತ್ತೆ ತನ್ನ ಸ್ವಂತ ರೀತಿಯಲ್ಲಿ ಜೋಡಿಸುವ ಮುಖಾಂತರ ಅದರ ಮೇಲೆ ಹಿಡಿತ ಪಡೆದುಕೊಳ್ಳುತ್ತಾನೆ. ಹಾಗೆಯೇ ಮುಖ್ಯ ಪರಂಪರೆಯ ಆಕರ ಗ್ರಂಥವಾದ ವ್ಯಾಸ ಭಾರತವನ್ನು ಇಲ್ಲಿಯ ಪ್ರಾಂತೀಯ ಸಂವೇದನೆಗೆ ಅನುಗುಣವಾಗಿ ಮಾರ್ಪಡಿಸಿಕೊಳ್ಳುವುದು ಸಾಂಸ್ಕೃತಿಕ ಪಲ್ಲಟಗಳ ಅಭಿವ್ಯಕ್ತಿಯ ಮಾರ್ಗವಾಗಿತ್ತು. ಆದ್ದರಿಂದಲೇ ಪಂಪ, ಅರ್ಜುನನನ್ನು ಅರಿಕೇಸರಿಗೆ ಸಮೀಕರಿಸುವ ಮುಖಾಂತರ, ಅಥವಾ ವೀರವನ್ನೇ ಮುಖ್ಯ ಮೌಲ್ಯವೆಂದು ಎತ್ತಿ ಹಿಡಿಯುವ ಮುಖಾಂತರ ಪಂಪ ಮೂಲ ಭಾರತದ ಮೇಲೆ ಸಂಕೋಚಗಳನ್ನು ಹೇರುತ್ತಾನೆಯೆನ್ನುವುದು ಅರ್ಥವಿಲ್ಲದ ಮಾತು. ಪಂಪನ ಸ್ವಂತಿಕೆಯಿರುವುದು ತನ್ನ ಸಮಾಜದ ಮೌಲ್ಯ ಕಲ್ಪನೆಗಳ ಅನುಗುಣವಾಗಿ ಮೂಲಕತೆಯ ಮೇಲೆ ಈ ಸಂಕೋಚಗಳನ್ನು ಹೇರುವುದರಲ್ಲಿ ತೋರಿಸುವ ಧೈರ್ಯದಲ್ಲಿ. ತನಗೆ ಆಶ್ರಯ ನೀಡಿದ ಅರಿಕೇಸರಿಯನ್ನೇ ನಾಯಕ ಅರ್ಜುನನ ಜತೆಗೆ ಸಮೀಕರಿಸುವುದರ ಹಿಂದಿನ 'ವ್ಯಾವಹಾರಿಕತೆ' ಏನೇ ಇರಲಿ ವೀರವನ್ನೇ ಮುಖ್ಯ ಮೌಲ್ಯವನ್ನಾಗಿ ಮಾಡುವ ಮಾರ್ಪಾಟುಗಳಿಲ್ಲದೆ ಪಂಪ ತನ್ನ ಕಾವ್ಯವನ್ನು ಬರೆಯುವುದು ಅಸಾಧ್ಯವಾಗುತ್ತಿತ್ತು. ಪಂಪನ ಓದುಗರು ಅವನು ಮಾಡಿದ ಮಾರ್ಪಾಟುಗಳನ್ನು ಅರ್ಥಮಾಡಿಕೊಂಡು ಆ ಮಾರ್ಪಾಟುಗಳ ಹಿಂದಿನ ಸಾಂಸ್ಕೃತಿಕ ಸೂಕ್ಷ್ಮಗಳನ್ನು ಗಮನಿಸುವ ಸಾಮರ್ಥ್ಯವುಳ್ಳವರಾಗಿ ಇದ್ದಿರಬೇಕು. ಇದು ಓದುಗ, ಬರಹಗಾರನ ಖಚಿತ ಸಂಬಂಧದ ಒಂದು ಮಗ್ಗುಲಾದರೆ ಈ ಖಚಿತತೆಯೇ ಇಕ್ಕಟ್ಟಾಗುವ ಇನ್ನೊಂದು ಮಗ್ಗಲೂ ಇದೆ. ಆಸ್ಥಾನ ಕವಿಯಾಗಿ ರಾಜಾಶ್ರಯ ಪಡೆದ ಕವಿಯೊಬ್ಬ ಆಳುವ ವರ್ಗದ ಮೌಲ್ಯಗಳನ್ನು ಎಷ್ಟರ ಮಟ್ಟಿಗೆ ವಿಮರ್ಶಾತ್ಮಕವಾಗಿ ನೋಡಬಲ್ಲ ಎನ್ನುವುದು ಸ್ಪಷ್ಟವಾಗಿದೆ. ಓದುಗ ವರ್ಗ ತೀರ ನಿರ್ದಿಷ್ಟವಾಗಿದ್ದಾಗ, ಸಾಹಿತ್ಯದ ಪರಿಣಾಮಗಳು ನೇರವಾಗಿ ತಿಳಿಯುವಂತಿದ್ದಾಗ, ಸಾಹಿತ್ಯ ಆ ವರ್ಗದ ಮೌಲ್ಯ ಕಲ್ಪನೆಗಳನ್ನು ತೀವ್ರವಾಗಿ ವಿಮರ್ಶಿಸುವುದು ಸುಲಭ ಸಾಧ್ಯವಲ್ಲ. ಅಲ್ಲದೇ ಅದೇ ವರ್ಗಕ್ಕೆ ಸೇರಿದ ಕವಿ ಭಿನ್ನ ಆಶಯಗಳನ್ನು ಅಭಿವ್ಯಕ್ತಿಸುವುದನ್ನು ನಾವು ಆಶಿಸುವಂತಿಲ್ಲ. ಪಂಪನಿಂದಲೇ ಕನ್ನಡ ಕಾವ್ಯ ಪರಂಪರೆಯು ಎರಡು

ಮುಖ್ಯ ಎಳೆಗಳು ಆರಂಭವಾದದ್ದನ್ನು ಗುರುತಿಸಬಹುದು : ಈ ಪರಂಪರೆಯಲ್ಲಿ ಕಾಲ ದೇಶಗಳನ್ನು ಮೀರಿದ ಮನುಷ್ಯ "ಸ್ವಭಾವದ" ಆಳಸ್ತರಗಳನ್ನು ಅಳೆಯುವುದರಲ್ಲಿ ಮತ್ತು ಸಾರ್ವಕಾಲಿಕವೆನ್ನಬಹುದಾದ ಮನುಷ್ಯನ ಸ್ಥಿತಿಯ ಸೂಕ್ಷ್ಮಗಳನ್ನು ಗುರುತಿಸುವುದರಲ್ಲಿ ಕವಿಯ ಸ್ಪಂದನೆಗೆ ಪೂರ್ಣ ಸ್ವಾತಂತ್ರ್ಯವಿದೆ. ಆದರೆ ಸಮಕಾಲೀನವೆನ್ನಬಹುದಾದ ಬದುಕಿಗೆ ಸ್ಪಂದಿಸುವಾಗ ಮಾತ್ರ ಕವಿ ಸಿದ್ಧ ಪಡಿಯಚ್ಚುಗಳನ್ನು ಒಪ್ಪಿಕೊಂಡು ಬಿಡುತ್ತಾನೆ. (ಭಾರತೀಯ ಚಿಂತನ ಪರಂಪರೆಯಲ್ಲಿ ಪಾರಮಾರ್ಥಿಕ ಸತ್ಯ ಮತ್ತು ವ್ಯಾವಹಾರಿಕ ಸತ್ಯಗಳನ್ನು ಭಿನ್ನವೆಂದು ಬಗೆಯುವ ಪರಿಪಾಠ ಮತ್ತು ಬದುಕನ್ನು ಬೇರೆ ಬೇರೆಯಾದ ಗೂಡುಗಳಲ್ಲಿ ತುರುಕುವ ಹವ್ಯಾಸ (Compartmentalisation) ಇವುಗಳು ಇಂಥದೇ ಒಂದು ಮಾನಸಿಕ ಪ್ರಕ್ರಿಯೆಯನ್ನು ತೋರಿಸುತ್ತದೆಯೆಂದು ಕಾಣುತ್ತದೆ). ಇದರಿಂದಾಗಿ ಕಾವ್ಯವಾಗಿ ಕಾವ್ಯ ಊನಗೊಳ್ಳುತ್ತದೆಯೆಂದು ಹೇಳಲಾಗದಿದ್ದರೂ ಅದು ಇಲ್ಲಿಯ ಬದುಕನ್ನು ಬಗೆಯುವ ಸಾಧನವಾಗಿ ಪ್ರಸ್ತುತವಾಗುವುದಿಲ್ಲ. ಪಂಪ ತನ್ನ ಕಾವ್ಯವನ್ನು ಧಾರ್ಮಿಕ ಮತ್ತು ಲೌಕಿಕ ಎಂದು ವಿಂಗಡಿಸಿಕೊಂಡಿದ್ದು ನಮ್ಮ ಪರಂಪರೆಯಲ್ಲಿ ಕಾವ್ಯ ಹೊಂದಿದ್ದ ಸೀಮಿತ ಅಪೇಕ್ಷೆಯನ್ನು ಸೂಚಿಸುತ್ತದೆ. ಇದರ ಪರಿಣಾಮವೆಂದರೆ ಓದುಗ ವರ್ಗವೂ ಕೂಡ ಕಾವ್ಯವನ್ನು ಒಟ್ಟಂದದ ಜೀವನ ದೃಷ್ಟಿಯೊಂದನ್ನು ಅಭಿವ್ಯಕ್ತಿಸುವ, ಶೋಧಿಸುವ ಮಾಧ್ಯಮವೆಂದು ಗುರುತಿಸಲಿಲ್ಲ. ಪಂಪನಲ್ಲಿ ಕಂಡು ಬರುವ ಕನ್ನಡ ಕಾವ್ಯ ಪರಂಪರೆಯ ಇನ್ನೊಂದು ಎಳೆ ಮಾನವತಾವಾದಿ ಧೋರಣೆಗೆ ಸಂಬಂಧಪಟ್ಟದ್ದು. ನಮ್ಮ ಎಲ್ಲ ಕವಿಗಳೂ ಒಂದು ಧಾರ್ಮಿಕ ಚೌಕಟ್ಟಿಗೆ, ತತ್ವಕ್ಕೆ ಬದ್ಧರಾಗಿ ಬರೆಯುತ್ತಾರೆಯಾದರೂ, ಹಲವಾರು ಸಂದರ್ಭಗಳಲ್ಲಿ ಈ ಬದ್ಧತೆಯನ್ನೂ ಮೀರಿ ಮನುಷ್ಯನ ಪರವಾದ ಅವರ ತುಡಿತಗಳು ಅಭಿವ್ಯಕ್ತವಾಗುತ್ತವೆ. ಹೀಗೆ ಕೃತಿಯ ಕೇಂದ್ರದಲ್ಲಿರದಿದ್ದರೂ ಅಂಚಿನಲ್ಲಿ ಇಂಥ ತುಡಿತಗಳು ಹೊರ ಹೊಮ್ಮುವುದು ಕುತೂಹಲಕಾರಿಯಾಗಿದೆ. ಪಂಪ ಜಾತಿ ವ್ಯವಸ್ಥೆಯನ್ನು ಧಿಕ್ಕರಿಸಿ ಬರೆಯುವುದು ಚಾರಿತ್ರಿಕವಾಗಿ ಅಸಂಭವವಾಗಿತ್ತು. ಆದರೆ ಕರ್ಣನ ಪಾತ್ರ ಚಿತ್ರಣದಲ್ಲಿ ಸಮಾಜದ ಕಟ್ಟಳೆಗಳ ಇಕ್ಕಟ್ಟಿನಲ್ಲಿ ನಾಶವಾಗಬಹುದಾದ ಮನುಷ್ಯನ ಸಾಧ್ಯತೆಗಳ ಅರಿವನ್ನೂ, ಪಂಪ ತೀವ್ರವಾದ ರೀತಿಯಲ್ಲಿ ತೋರುತ್ತಾನೆ. ಅಂದರೆ ಓದುಗ ವರ್ಗದ ಮೌಲ್ಯ ಕಲ್ಪನೆಗಳಿಗೆ ಧಕ್ಕೆ ತರದಂತೆ, ಆದರೆ ಮನುಷ್ಯನ ಇರವಿನ ಬಗ್ಗೆ ಅವರ ಸ್ಪಂದನೆ ಹೆಚ್ಚು ಸಂಕೀರ್ಣವಾಗುವಂತೆ ಬರೆಯುತ್ತಾನೆ. ಹೀಗೆ ಕೃತಿಗಳ ಅಂಚಿನಲ್ಲಿ ವ್ಯಕ್ತವಾಗುವ ತುಡಿತಗಳನ್ನು ಗ್ರಹಿಸುತ್ತಾ ಹೋದರೆ ಕನ್ನಡ ಕಾವ್ಯ ಪರಂಪರೆಯಲ್ಲಿ ಮನುಷ್ಯನ ಪರವಾದ ಒಂದು ಸಂಪ್ರದಾಯವನ್ನು ಗುರುತಿಸಬಹುದು. ಆಸ್ಥಾನ ಕಾವ್ಯದ ಇಕ್ಕಟ್ಟಿನಲ್ಲಿ ಅರ್ಜುನ, ಸುಭದ್ರೆಯರ ಪ್ರಸಂಗವನ್ನು ವರ್ಣಿಸುವ ಪಂಪ ಸೂಳೆಗೇರಿಯ ವರ್ಣನೆಯಲ್ಲಿ ಥಟ್ಟನೆ ಬದುಕಿನ ವಾಸನೆ ಅಮರಿಕೊಂಡಂತೆ ನೆಲಕ್ಕಂಟಿದ ಮನುಷ್ಯರ ಬದುಕಿನ ಬಗ್ಗೆ ತನ್ನ ವಿಸ್ಮಯವನ್ನು ಗಾಢವಾದ

ಪ್ರೀತಿಯನ್ನು ಅಭಿವ್ಯಕ್ತಿಸುತ್ತಾನೆ. ಸೂಳೆಗೇರಿಯ ವರ್ಣನೆ ಅಷ್ಟಾದಶವರ್ಣನೆಗಳಲ್ಲೊಂದಾಗಿದ್ದರೂ, ಪಂಪನಲ್ಲಿ ಅದು ಬದುಕಿನ Frescoes ಆಗಿ ಮಾರ್ಪಡುತ್ತದೆ. ಹೀಗೆ ಕವಿಯ ಬದ್ಧತೆ, ಉದ್ದೇಶಗಾರಿಕೆಯನ್ನು ಮೀರಿ ಬದುಕು ಕಾವ್ಯವನ್ನು ಪ್ರವೇಶಿಸುತ್ತದೆ.

(ಮುಂದಿನ ಸಂಚಿಕೆಯಲ್ಲಿ ಪೂರ್ಣಗೊಳ್ಳುವುದು)

ಮಿಡಿತ

ಇನಿಯಾ, ನನ್ನೆದೆಯ ಕೋಮಲ ಮಿಡಿತಕ್ಕೆ,
ನನ್ನ ನಯನಗಳಲಿ ಹರಿವ ಸುಂದರ ಪ್ರೀತಿಯ ಹೊಳೆಗೆ,
ತೆರೆ ತೆರೆಯಾಗಿ ಬಿಡಿಸಿಟ್ಟಿರುವ ನನ್ನಂತರಂಗದ ಭಾವನೆಗಳಿಗೆ,
ಅಣೆಕಟ್ಟ ಕಟ್ಟ ಬಲ್ಲೆಯಾ ?

ಕಣ್ಣೆವೆಗಳಲಿ ಬಚ್ಚಿಟ್ಟ,
ಹೃದಯ ಕಲಶದಲಿ ಮುಚ್ಚಿಟ್ಟ,
ಕನಸುಗಳ ಆಸೆಗಳ ಆಗಸದಲಿ ತೇಲಿಬಿಟ್ಟ,
ನನ್ನಾತ್ಮದ ತರಂಗಗಳ ಮುಟ್ಟಬಲ್ಲೆಯಾ ?

ಹೃದಯಾಂತರಾಳದಲಿ,
ಅಂಗಾಂಗದ ನರನಾಡಿಗಳಲಿ,
ಮದಗಜದಂತೆ ನುಗ್ಗಿ,
ಮೈಯ ಕಣಕಣವೂ ನೀರು-ನೀರಾಗಿ,
ಮಾಡಿದ ನೀನು,
ಎನ್ನ ಬಾಳ ಸಂಗಾತಿಯಾಗ ಬಲ್ಲೆಯಾ ?

—ಸುಲೋಚನ ಜೆ. ರಾವ್

ಸುಲೋಚನ, ಜೆ. ರಾವ್, ನಂ. 42, 7ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.

ಫ್ರಿಟ್ಸ್ ಬೆನವಿಟ್ಸ್ : ಒಂದು ರಂಗ ತಾಲೀಮಿನಲ್ಲಿ

—ಕೆ. ಎಸ್.

ಫ್ರಿಟ್ಸ್ ಬೆನವಿಟ್ಸ್ ಅಂತರಾಷ್ಟ್ರೀಯ ಖ್ಯಾತಿಯ ಜರ್ಮನ್ ನಾಟಕ ನಿರ್ದೇಶಕರು. ಅನೇಕ ವರ್ಷಗಳಿಂದ ಅವರು ಆಗಾಗ ಭಾರತಕ್ಕೆ ಭೇಟಿ ನೀಡಿದ್ದಾರೆ. ಅದರಲ್ಲೂ ವಿಶೇಷವಾಗಿ ದಿಲ್ಲಿಯ 'ರಾಷ್ಟ್ರೀಯ ನಾಟಕ ಶಾಲೆ' ಹಾಗು ಭೂಪಾಲಿನ 'ರಂಗಮಂಡಲ'ದ ತಂಡಗಳಿಗೆ ಶೇಕ್ಸ್‌ಪಿಯರ್ ಮತ್ತು ಬರ್ಟೋಲ್ಟ್ ಬ್ರೆಕ್ಟ್‌ರ ನಾಟಕಗಳನ್ನು ಆಡಿಸಿದ್ದಾರೆ. ಕಳೆದ ಅಕ್ಟೋಬರ್ ಕೊನೆಯ ವಾರ ಅವರು ಹೆಗ್ಗೋಡಿಗೆ ಆಗಮಿಸಿ, ಅಲ್ಲಿಯ ನೀನಾಸಮ್ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಗಾಗಿ ಹತ್ತು ದಿನಗಳ ರಂಗಶಿಬಿರವನ್ನು ನಡೆಸಿದರು.

ಶಿಬಿರಕ್ಕಾಗಿ ಬೆನವಿಟ್ಸ್ ಆರಿಸಿಕೊಂಡದ್ದು ಬ್ರೆಕ್ಟ್‌ನ 'ಕಕೇಶಿಯನ್ ಚಾಕ್ ಸರ್ಕಲ್'ನ ಮಕ್ಕಳ ನಾಟಕ ಕೃತಿ. ಆ ಮೂಲಕ ಅವರು ಬ್ರೆಕ್ಟ್‌ನ ರಂಗಭೂಮಿ ಹಾಗು ಜೀವನ ಕಲ್ಪನೆ ಮತ್ತು ರಂಗನಟನೆ ಬಗ್ಗೆ ವ್ಯಕ್ತಪಡಿಸಿದ ವಿಚಾರ, ಅಭಿಪ್ರಾಯಗಳು ತುಂಬ ಅರ್ಥಪೂರ್ಣ.

ಬೆನವಿಟ್ಸ್‌ರವರನ್ನು ರಂಗ ತಾಲೀಮಿನಲ್ಲಿ ನೋಡುವುದೇ ತುಂಬ ಸಂತೋಷಕರ ಅನುಭವ. ಅವರ ಕೆಲವು ಭಾರತೀಯ ಸ್ನೇಹಿತರು ಅವರನ್ನು 'A fire on stage' ಎಂದೇ ಹೆಸರಿಸುತ್ತಾರೆ. ಅರವತ್ತು ವರ್ಷ ತುಂಬಿದ ಶರೀರದಲ್ಲಿ ಯಾವುದೋ ಅದಮ್ಯ ಜೀವನ ಪ್ರೇರಣೆ, ಆಸಕ್ತಿ, ಜೀವಂತಿಕೆ ಹಾಗು ಉದ್ದೇಶವನ್ನೆಲ್ಲ ತುಂಬಿಕೊಂಡು ನಟನಟಿಯರನ್ನು ಸತ್ವಯುತ ಅಭಿನಯಕ್ಕೆ ಪ್ರೇರೇಪಿಸುವ ರೀತಿ ನಿಜಕ್ಕೂ ಸ್ಫೂರ್ತಿದಾಯಕ. ನಟನಟಿಯರು ಕೇವಲ ನಿರ್ದೇಶಕನ ಕೈಗೊಂಬೆಗಳಾಗದೆ, ಆತ ಹೇಳಿದ್ದನ್ನು ತಮ್ಮ ಪ್ರೇರಣೆಗಳಾಗಿ ಅರಗಿಸಿಕೊಂಡು ಅಭಿನಯಿಸಿದಾಗ ಬೆನವಿಟ್ಸ್‌ರಲ್ಲಿ ಅತೀವ ಆನಂದ ಉಕ್ಕುತ್ತಿತ್ತು. ಬೆನವಿಟ್ಸ್ ಹೇಳುವ ಪ್ರಕಾರ ರಂಗಭೂಮಿ ಹಾಗು ಬದುಕು ಪರಸ್ಪರ ದೂರವಲ್ಲ, ಬೇರೆಯಲ್ಲ. ನಮ್ಮ, ನಮ್ಮ ಸುತ್ತಲಿನ ಜೀವನದ ಗ್ರಹಿಕೆ ಸೂಕ್ಷ್ಮವಾಗಿರದಿದ್ದರೆ ರಂಗಭೂಮಿಯಲ್ಲಿ ತೊಡಗಿಕೊಂಡು ಅರ್ಥ

ಕೆ. ಎಸ್. ಪೂರ್ಣಿಮ, ಅಧ್ಯಾಪಕಿ, ನೀನಾಸಮ್ ರಂಗ ತರಬೇತಿ ಕೇಂದ್ರ, ಹೆಗ್ಗೋಡು ಶಿವಮೊಗ್ಗ ಜಿಲ್ಲೆ.

ಪೂರ್ಣವಾದ ಕಾರ್ಯ ಕೈಗೊಳ್ಳುವುದೂ ಅಸಾಧ್ಯ. ಈ ದೃಷ್ಟಿಯಿಂದ ಬ್ರೆಕ್ಟ್‌ನ ನಾಟಕಗಳನ್ನು ಗಮನಿಸಿದರೆ ನಮಗೆ ಆತನ 'ಜೀವನ ಕಲ್ಪನೆ' ಮುಖ್ಯವಾಗಬೇಕು, 'ಶೈಲಿ' ಅಲ್ಲ. ಏಕೆಂದರೆ 'ಬ್ರೆಕ್ಟ್ ಶೈಲಿ' ಎಂಬುದಿಲ್ಲ. ಕೇವಲ 'ಬ್ರೆಕ್ಟ್‌ಶೈಲಿ'ಯ ಕುರಿತಾದ ಮಾತುಗಳು ತಪ್ಪುಗ್ರಹಿಕೆಗೆ ಕಾರಣವಾಗಬಹುದು. ಜಾನಪದವೋ, ಸಾಂಪ್ರದಾಯಿಕವೋ ಹೀಗೆ ನಮ್ಮ ರಂಗಭೂಮಿ ಹಿನ್ನೆಲೆಯಲ್ಲಿಯೇ ಆತನನ್ನು ಬಳಸಿ ಕೊಳ್ಳುವಂತಾಗಬೇಕು. ಆತನ ಸಾಮಾಜಿಕ, ರಾಜಕೀಯ ವಿಚಾರಗಳು, ಒಳನೋಟ ಗಳು ನಮ್ಮದಾಗಬೇಕು.

ರಂಗನಟನೆ ಎಂದರೇನು ?— ಕೇವಲ ಪದಗಳಲ್ಲ ; ಅವನ್ನೇ ಮನಸ್ಸಿನಲ್ಲಿಟ್ಟು ಕೊಂಡು ರಂಗದ ಮೇಲೆ ಬರುವಾತ ನಟನಲ್ಲ. ನಟನೆ ನಾಟಕದ ಸನ್ನಿವೇಶಗಳಲ್ಲಿ ನಟ ಸಹನಟನೊಂದಿಗೆ ರಂಗದ ಮೇಲೆ ಜೀವಂತವಾಗಿ ಪ್ರತಿಕ್ರಿಯಿಸಿದ್ದರಿಂದ ಹುಟ್ಟುವ ಕ್ರಿಯೆ. ಅದು ನಟನಟಿಯರ ಪ್ರೇರಣೆ (Impulse), ಆಸಕ್ತಿ (Interest) ಹಾಗು ಉದ್ದೇಶ(Motivation) ಇವು ಸೇರಿ ರೂಪುಗೊಳ್ಳುವಂಥದ್ದು.

ಈ ಅಂಶಗಳೆಲ್ಲ ಬೆನವಿಟ್ಸ್‌ರವರ ರಂಗಶಿಬಿರದಲ್ಲಿ ಹಾದು ಬಂದ ಬಗೆಯನ್ನು ನೋಡೋಣ. ಪ್ರಸ್ತುತ ನಾಟಕದಲ್ಲಿ ಬ್ರೆಕ್ಟ್‌ನ ಮೂಲ ನಾಟಕದ ಹಲವು ಸಂಕೀರ್ಣ ಸನ್ನಿವೇಶಗಳನ್ನು ಮಕ್ಕಳಿಗೋಸ್ಕರ ಕೈಬಿಡಲಾಗಿದೆ. ನಾಟಕದ ಕಥೆ ಸ್ಥೂಲವಾಗಿ ಹೀಗಿದೆ : ಗ್ರುಸೀನಿಯಾ ದೇಶದಲ್ಲಿ ದಂಗೆಯ ಪ್ರಾರಂಭ. ಅಲ್ಲಿಯ ರಾಜ ಯುದ್ಧಕ್ಕೆ ಹೋಗಿದ್ದಾನೆ. ಈಗ ಯುವರಾಜನ ಪಿತೂರಿಯಿಂದ ರಾಜ್ಯಪಾಲನ ಕೊಲೆಯಾಗು ತ್ತದೆ. ರಾಜ್ಯಪಾಲನ ಹೆಂಡತಿ ಸೇನಾಪತಿಯೊಡನೆ ಓಡಿಹೋಗುವ ಗಡಿಬಿಡಿಯಲ್ಲಿ ತನ್ನ ಮಗುವನ್ನು ಬಿಟ್ಟು ಹೋಗುತ್ತಾಳೆ. ಅದು ಅಲ್ಲಿಯ ಪರಿಚಾರಿಕೆ ಗ್ರೂಶಾಳಿಗೆ ಸಿಕ್ಕು ಆಕೆಯೇ ಅದನ್ನು ಸೈನಿಕರ ಅಪಾಯಗಳಿಂದ ತಪ್ಪಿಸಿ ಸಾಕುತ್ತಾಳೆ. ಎರಡು ವರ್ಷದ ನಂತರ ಪರಿಸ್ಥಿತಿ ಬದಲಾಗಿದೆ. ರಾಜ ರಾಜ್ಯಕ್ಕೆ ಹಿಂತಿರುಗಿದ್ದಾನೆ. ರಾಜ್ಯ ಪಾಲನ ಹೆಂಡತಿ ಈಗ ಮಗು ತನ್ನದಾಗಬೇಕೆನ್ನುತ್ತಾಳೆ. ಕೋರ್ಟಿನಲ್ಲಿ ವಿಚಾರಣೆ, ಹಳ್ಳಿಯವನಾಗಿದ್ದ ಅಜದಾಕ್ ಎಂಬ ವಿಚಿತ್ರ ವ್ಯಕ್ತಿ ಅದರ ನ್ಯಾಯಾಧೀಶನಾಗಿ ಕಾರ್ಯ ನಿರ್ವಹಿಸುತ್ತಾನೆ. ಬಡವರ ಪರ ಎಂದೆನಿಸಿಕೊಂಡಿದ್ದ ಆತ ಗ್ರೂಶಾಳನ್ನು ಅರ್ಥಮಾಡಿ ಕೊಳ್ಳುತ್ತಾನೆ. ಕೊನೆಯಲ್ಲಿ ರಕ್ತಸಂಬಂಧದ ಮೂಲಕ ರಾಣಿಗೆ ಸೇರಬೇಕಾಗಿರುವ ಮಗುವನ್ನು, ತಾನೇ ಕಷ್ಟಪಟ್ಟು ಬೆಳೆಸಿದ ಹಕ್ಕನ್ನು ಹೊಂದಿರುವ ಗ್ರೂಶಾಗೆ ಒಪ್ಪಿಸಿ ಬಿಡುತ್ತಾನೆ.

ಈ ಕಥೆಯ ವಿಚಾರವನ್ನು ಬೆನವಿಟ್ಸ್ ದೃಶ್ಯೀಕರಿಸಿದ ಶೈಲಿಯ ಅಂಶವೆಂದರೆ, ದರ್ಪ, ಅಧಿಕಾರ ಮದವನ್ನು ಹೊಂದಿರುವ ರಾಣಿಯ ವರ್ಗ ಮಾನವೀಯ 'ಸತ್ವ'

(Content)ವೇ ಇಲ್ಲದೆ ಕೇವಲ 'ಆಕೃತಿ' (Form)ಯೇ ಎದ್ದು ಕಾಣುವಂಥದ್ದು. ಇದಕ್ಕೆ ತದ್ವಿರುದ್ಧವಾಗಿ ಗ್ರೂಶಾ ಹಾಗು ಇತರರು ತೀರ ಸಹಜವಾಗಿ, ಸರಳವಾಗಿ ವರ್ತಿಸುತ್ತಾರೆ. ಪ್ರಸ್ತುತ ಪ್ರದರ್ಶನವಲ್ಲಿ, ರಾಣಿ ಸೇವಕರನ್ನು ನಡೆಸಿಕೊಳ್ಳುವ ರೀತಿಯು ನಟನೆ 'ನೈಜ' ಶೈಲಿ ಅಲ್ಲ, 'ಶೈಲೀಕೃತ'. ರಾಣಿ ಸೇವಕನೊಬ್ಬನ ಬೆನ್ನಿನ ಮೇಲೆ ಕುಳಿತು ತನಗೇನು ಬೇಕೆಂಬ ಅಪ್ಪಣೆಯನ್ನು ಇನ್ನೊಬ್ಬನ ಮೂಲಕ ಮಾಡಿಸುವುದು ಅಸಂಗತ ಎನಿಸಿದರೂ ಅದು ಅರಮನೆಯಲ್ಲಿ ಕಾಣಸುವ ದಿನನಿತ್ಯದ ಆಚರಣೆ. ರಾಣಿ ಅಂಥ ವಿಧೇಯತೆಯನ್ನು ಕೊಂಡುಕೊಳ್ಳಲು ಶಕ್ತಳಾದ್ದರಿಂದ ಹಾಗೆ ನಡೆದುಕೊಳ್ಳಬಲ್ಲಳು. ಹಾಗಾಗಿ ಅಲ್ಲಿಯ ನಟನೆ 'ಶೈಲೀಕೃತ'ವಾದರೂ ಅದು ಜೀವನದ ಮೂಲಭೂತ ಧೋರಣೆ ಹಾಗು ಸಂಬಂಧವನ್ನೇ ಅವಲಂಬಿಸಿರುತ್ತದೆ.

ಈ ನಾಟಕದ ಎಷ್ಟೋ ಸನ್ನಿವೇಶಗಳಲ್ಲಿ ಪಾತ್ರಗಳ ವರ್ತನೆ Sentimental ಆಗಿರದೆ 'Practical' ಆಗಿರುತ್ತದೆ. ಅಲ್ಲಿ ನಟರ ನಟನೆ ಪ್ರೇಕ್ಷಕರ ಭಾವನೆಯನ್ನು ಕೆರಳಿಸುವಂತಿರದೆ ಅವರನ್ನು ಯೋಚನೆಗೆ ತೊಡಗಿಸುವಂತಿರಬೇಕು. ದಂಗೆ ಪ್ರಾರಂಭವಾಗಿದೆ. ರಾಣಿ ಗಡಿಬಿಡಿಯಲ್ಲಿ ಮಗುವನ್ನು ಬಿಟ್ಟು ಓಡಿಹೋಗಿದ್ದಾಳೆ. ದಾದಿ ಬಂದು ಓಡಿಹೋದವರು ಕಟುಕರೆಂದು ಜರೆಯುತ್ತ ಮಗುವನ್ನು ಎತ್ತಿಕೊಳ್ಳುತ್ತಾಳೆ. ಆದರೆ, ಇಂಥ ಅಪಾಯಕರ ಸಂದರ್ಭದಲ್ಲಿ ತಾನು ಅದನ್ನು ಸಾಕಲಾರೆ, ಅಲ್ಲದೆ, ಅಲ್ಲಿರುವ ಅಡಿಗೆಯವಳು ಅಥವಾ ಇನ್ನೊಬ್ಬ ಸೇವಕನಿಗೆ ಕೊಟ್ಟರೆ ಅವರು ಅದನ್ನು ಒಪ್ಪಲಾರರು. ಆದ್ದರಿಂದ ಈಗ ಗ್ರೂಶಾ ಒಬ್ಬಳೇ ಅದನ್ನು ತೆಗೆದುಕೊಳ್ಳಬಹುದಾದವಳು ಎಂದು ಅವಳ ಕೈಯಲ್ಲಿ ಮಗುವನ್ನು ಹಾಕಿ ಓಡಿಹೋಗುತ್ತಾಳೆ. ಬೆನವಿಟ್ಸ್ ಗುರುತಿಸುವ ಹಾಗೆ ಈ ಸಂದರ್ಭದಲ್ಲಿ ತೋರಬಹುದಾದ ಮನಃಸ್ಥಿತಿಯನ್ನು ಅದರಲ್ಲೂ ಭಾರತೀಯರಿಗೆ ಅನ್ವಯಿಸಿದಂತೆ ಅರ್ಥ ಮಾಡಿಕೊಳ್ಳುವುದಾದರೆ ಮಗುವನ್ನು ಆ ಕೂಡಲೇ ಎದೆಗೊತ್ತಿಕೊಳ್ಳುವುದು ತೀರ ಸಹಜ ಕ್ರಿಯೆ. ಆದರೆ ಅದು ಇಲ್ಲಿ ಅಷ್ಟೊಂದು ಸರಿಯಾಗಲಾರದು. ದಾದಿಯಾಗಲೀ, ದಾದಿ ಪುನಃ ಬರಬಹುದೆಂದು ಕಾಯುತ್ತಿರುವ ಗ್ರೂಶಾ ಆಗಲೀ ಹಾಗೆ ಮಾಡುವುದಿಲ್ಲ. ಅದನ್ನು ತನ್ನದೇ ಎಂದು ಕಾಪಾಡುವ, ಸಾಕುವ ಆಲೋಚನೆ ಇಬ್ಬರಲ್ಲೂ ಇರುವುದಿಲ್ಲ. ರಂಗದ ಮೇಲೆ ನಾವು ಕಾಣುವಂತೆ ಎಷ್ಟೋ ಕಾಲದ ನಂತರ ಅಂಥ 'ಮಾತೃಹೃದಯ' (Motherly instinct) ಕಾರ್ಯೋನ್ಮುಖವಾಗುತ್ತದೆ. ಹಾಗಿಲ್ಲದೆ, ಮೊದಲೇ ಅದನ್ನು ತೋರಿಸಿದರೆ ಅಂಥ 'ಮಾತೃಹೃದಯ' ಇಲ್ಲ ಎಂಬ ಆಪಾದನೆಗೆ ಉಳಿದವರು ಗುರಿಯಾಗಬೇಕಾಗುತ್ತದೆ. ದಾದಿ ಗ್ರೂಶಾಳಿಗೆ ಮಗುವನ್ನಿತ್ತಾಗಲೂ ಆಕೆ 'ಇಲ್ಲ' ಅನ್ನುವುದಿಲ್ಲ ಎಂಬ ಆಲೋಚನೆಯಿಂದಲೇ ಹೊರತು ಗ್ರೂಶಾಗೆ 'ಮಾತೃಹೃದಯ' ಇದೆ ಎಂಬ ನಂಬಿಕೆಯಿಂದಲ್ಲ. ಒಬ್ಬ ವ್ಯಕ್ತಿಯಾಗಿ, ಗ್ರೂಶಾಗೆ ಈಗ ಬರುವ ಸಮಸ್ಯೆಯೆಂದರೆ, ಕೆಲ ಸಮಯದ

ಹಿಂದಷ್ಟೇ ಆಕೆ ಯುದ್ಧಕ್ಕೆ ಹೊರಟ ತನ್ನ ಪ್ರೇಮಿ ಸೈಮನ್‌ಗಾಗಿ ಕಾಯುತ್ತೇನೆಂದು ಆತನಿಗೆ ವಚನ ನೀಡಿದ್ದಾಳೆ. ಅದಕ್ಕೆ ಅನುಗುಣವಾಗಿ, ಸಹಜವಾಗಿ ತನ್ನದೇ ಮಕ್ಕಳ ಕನಸು ಕೂಡ ಆಕೆಯ ಮನಸ್ಸಿನಲ್ಲಿ ತುಂಬಿರುತ್ತದೆ. ಹೀಗಿರುವಾಗ ಆ ಕ್ಷಣದಲ್ಲಿ ಅದು 'ತನ್ನ'ದೆನ್ನುವ ಯಾವ ಉದ್ದೇಶವೂ ಆಕೆಗಿರುವುದಿಲ್ಲ. ಆ ಸಂದರ್ಭದ ಸಂಚು ಹೊಂಚುಗಳೆಲ್ಲ ಗ್ರೂಶಾಗೆ ತಿಳಿದಿತ್ತೋ ಇಲ್ಲವೋ ಈಗ ತನಗೇ ಆ ಮಗು 'ಬೇಕು' ಅನ್ನುವುದಕ್ಕಿಂತ ಯಾವುದೇ ತೊಂದರೆಗೂ ಅದು ಸಿಲುಕಬಾರದೆಂಬುದು ಆಕೆಗೆ ಮುಖ್ಯವಾಗುತ್ತದೆ. ಅಂಥ 'ಅಪಾಯಕರ' ಮಗುವನ್ನು 'ರಕ್ಷಿತ' ಪ್ರದೇಶಕ್ಕೆ ಒಯ್ಯ ಬೇಕಾಗಿದೆ. ಮಗುವನ್ನು ಹೊತ್ತ ಗ್ರೂಶಾ ಅಲೆದಾಡುತ್ತ ಒಬ್ಬ ರೈತನ ಮನೆಗೆ ಬಂದು ಮಗುವಿಗಾಗಿ ಹಾಲು ಬೇಡುತ್ತಾಳೆ. ಬೆಲೆ ಅತಿಯೆನಿಸಿ, ಈಗಾಗಲೇ ಮಾಡಿ ದಂತೆ ಮಗುವನ್ನು ಸುಮ್ಮನಾಗಿಸಲು ಮೊಲೆ ಕೊಟ್ಟು ಹಾಲೂಡಿಸುವ ಭ್ರಮೆಗೆ ತನ್ನನ್ನೂ ಮಗುವನ್ನೂ ಈಡು ಮಾಡುತ್ತಾಳೆ. ಅದು ಮಗುವನ್ನು ವಂಚಿಸುವುದಾದ್ದ ರಿಂದ ಆಕೆ ಮಗುವನ್ನು ದೃಷ್ಟಿಸುತ್ತ ಆ ಕ್ರಿಯೆಯಲ್ಲಿ ತೊಡಗಲಾರಳು. ಅದು ನಡೆ ಯದಿದ್ದಾಗ ಪುನಃ ರೈತನ ಬಳಿ ಬಂದು ಹಾಲು ಕೊಳ್ಳುತ್ತಾಳೆ. ಮಗುವಿನ ಆರೋಗ್ಯ ಕೆಡಬಾರದೆಂದು ಹಾಲಿನ ಕೆನೆಯನ್ನು ತಿಂದು, ನಂತರ ಮಗುವಿಗೆ ಕುಡಿಸಿ ಮಿಕ್ಕದ್ದನ್ನು ತಾನು ಕುಡಿಯುವುದು ನಿಜಜೀವನದ ಸಂಗತಿಗಳನ್ನು ಗಮನಿಸಿಯೇ ವರ್ತಿಸುವ ರೀತಿ. ಹಾಗಾಗಿ ಇಡೀ ಆ ಸನ್ನಿವೇಶದಲ್ಲಿ, ಹಸಿದಿರುವ ಮಗುವಿಗೆ ಬೇಕಾಗಿರುವುದು ಈಗ ಹಾಲು. ಅದಕ್ಕಾಗಿ ಗೋಳಿಡುವ ಮನಃಸ್ಥಿತಿಯಲ್ಲ, ಅದರಿಂದ ಯಾವ ಪ್ರಯೋ ಜನವೂ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಜತೆಗೆ, 'ಹಾಲಿನ ಬೆಲೆ ಏರಿದೆ' ಎಂದ ರೈತನ ಮಾತು ಆಗಿನ ರಾಜಕೀಯ ಹಾಗು ಸಾಮಾಜಿಕ ಪರಿಸ್ಥಿತಿಯನ್ನು ತಿಳಿಸುತ್ತದೆ. ಏಕೆಂದರೆ, ಆತ ಕ್ರೂರನೇನೂ ಅಲ್ಲ, ಸಮಯಸಾಧಕನೂ ಅಲ್ಲ. ಅಂಥ ಕಾಲದಲ್ಲಿ ಬದುಕನ್ನು ಕಷ್ಟಪಟ್ಟು ನಡೆಸಬೇಕಾದ ಒಬ್ಬ ಸಾಧಾರಣ ರೈತ ಅಷ್ಟೆ.

ನಟರು ನಾಟಕದ ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳುವುದು ತೀರ ಅಗತ್ಯ. ಅದಕ್ಕನುಗುಣವಾಗಿ ನಟರ ನಟನೆಯೇ ಹೊರತು ಯಾವುದೇ ನಿರ್ದೇಶಕನ ಅಭಿನಯದ ಅಥವಾ ಬೇರೆ ಇನ್ನಾವುದರದ್ದೋ Copy ಯಾಗಬಾರದು. ಹಾಗಾದರೆ, ಬೇರೆ ಅರ್ಥ ಅನಗತ್ಯವಾಗಿ ಹುಟ್ಟಬಹುದು. ಹಾಲು ಮಾರುವ ರೈತ ಹಾಗು ಗ್ರೂಶ್ರಾಳ ಪ್ರಾಮಾಣಿಕತೆಯನ್ನು ಅಭಿನಯಿಸಿದ ನಟರ ಬಗ್ಗೆ ಬೆನವಿಟ್ಸ್ ಹೇಳಿದ ಒಂದು ಉದಾ ಹರಣೆ, "ಹಣವನ್ನು ತಿಕ್ಕಿ ನೋಡಿ ಜೇಬಿನಲ್ಲಿಳಿಬಿಡುತ್ತ ರೈತ ಅದನ್ನು ಕಂಡು ಎಷ್ಟೋ ದಿನಗಳಾದವು ಅನ್ನುವ ಹಾಗೆ ಭೂಪಾಲಿನ ರಂಗಮಂಡಲದ ಕಲಾವಿದ ಅಭಿನಯಿಸಿದ. ಆದರೆ, ಇದನ್ನೇ ಜರ್ಮನ್ ನಟನೊಬ್ಬ ತಾನು ನೋಡಿದ 'ಮದರ್ ಕರೇಜ್' ನಾಟಕ ವನ್ನು ಅನುಕರಿಸಿ ಹಣವನ್ನು ಬಾಯಲ್ಲಿ ಕಡಿದು ಪರೀಕ್ಷಿಸಿದ. ಆ ನಾಟಕದ

ಸಂದರ್ಭದ. ಆ ಸ್ಥಳದ ಮೋಸ, ವಂಚನೆ ಈ ಪ್ರಾಮಾಣಿಕ, ಮುಗ್ಧ ಹಳ್ಳಿಗರಿಗಿರಲು ಸಾಧ್ಯವಿರಲಿಲ್ಲ. ಹಾಗಾಗಿ ಜರ್ಮನ್ ನಟನ ನಟನೆ ತೀರ ಸುಳ್ಳಾಗುತ್ತದೆ.

ತೀವ್ರ ಸಾಮಾಜಿಕ ಕಾಳಜಿಯನ್ನು ಹೊಂದಿರುವ ಬ್ರೆಕ್ಟ್‌ನ ಜನಜಾಗೃತಿಯ ಅರಿವು ಹಾಗು ಯುದ್ಧ ವಿರೋಧೀ ಧೋರಣೆ ನಾಟಕದ ಪ್ರಾರಂಭದಿಂದಲೂ ವ್ಯಕ್ತಗೊಳ್ಳುತ್ತದೆ. ರಾಣಿಯ ಬೆದರಿಕೆಯ ನಂತರ ಅವಳಿಂದ ತಪ್ಪಿಸಿಕೊಂಡೋ ಎನ್ನುವಂತೆ ಓಡಿದ ಸೇವಕಿಯ ಪ್ರಸಂಗ ಇಡೀ ನಾಟಕಕ್ಕೆ ಅನ್ವಯವಾದರೆ, ದಂಗೆಯು ಆ ಕ್ಷಣದಿಂದಲೂ ಗಮನಕ್ಕೆ ಬರುವಂತೆ ಅದು ಬಡಜನರ, ತುಳಿತಕ್ಕೊಳಗಾದವರ ಜಾಗೃತಿಯೇ ಆಗಿದೆ. ದಂಗೆಯಿಂದಾಗಿ ಜನರೆಲ್ಲ ದಿಕ್ಕಾಪಾಲಾಗುತ್ತಿದ್ದಾರೆ. ಸೈಮನ್ ರಾಣಿಯೊಡನೆ ರಕ್ಷಣೆಗಾಗಿ ಹೋಗಬೇಕಾಗಿದೆ. ಇಂಥ ಸಂದರ್ಭದಲ್ಲಿ, ಗ್ರೂಶಾ-ಸೈಮನ್ ಕೇವಲ ತಮ್ಮ ತಮ್ಮ ಬಗ್ಗೆ ಮಾತ್ರ ಆಲೋಚಿಸದೆ 'ನೀನೇನು ಮಾಡುತ್ತಿ' ಎಂದು ಪರಸ್ಪರರಲ್ಲಿ ಕಾಳಜಿ ತೋರಿಸುತ್ತಾರೆ. ಈ ಪ್ರೇರಣೆಗಳ ಮೂಲಕವೇ ಮನುಷ್ಯ ಸಂಬಂಧಗಳನ್ನು ಗುರುತಿಸುವಂತಾಗುತ್ತದೆ. ಬೆನವಿಟ್ಸ್‌ರ ಪ್ರಕಾರ ಈ ಸನ್ನಿವೇಶದ ವಿಶ್ಲೇಷಣೆ ಪಾತ್ರಗಳ ಕಾರ್ಯಕಾರಣಗಳನ್ನು ಅರ್ಥಮಾಡಿಕೊಳ್ಳುವ ಒಂದು ಮುಖ್ಯ ವಿಧಾನ; ಇನ್ಯಾವ ವೈಚಾರಿಕ ವಿಮರ್ಶೆಗಾಗಿ ಅಲ್ಲ. ಅವರಿಬ್ಬರ ಪ್ರೀತಿ ನಟರಸತ್ವಯುತ ಅಭಿನಯದಿಂದ ಹೊಮ್ಮಬೇಕು. ಕೇವಲ ಮೇಲು ಮೇಲಿನ ಪ್ರೀತಿಯ ಕ್ಲೀಷೆ ಮಾತು, ನಡವಳಿಕೆಯಿಂದಲ್ಲ. ಉದಾಹರಣೆಗೆ 'ರೋಮಿಯೋ–ಜೂಲಿಯೆಟ್'ನಾಟಕದಲ್ಲಿ ಜೂಲಿಯೆಟ್ ಪಾತ್ರದ ನಟಿಗೆ ಒಬ್ಬ ಹುಡುಗಿ ತನ್ನ ತಂದೆ ಆರಿಸಿದವನನ್ನು ವರಿಸಲೊಪ್ಪದೆ ತನಗೆ ಬೇಕಾದವನನ್ನು ವರಿಸುತ್ತೇನೆಂದು ಹೇಳುವ ಪ್ರೇಮದ ಶಕ್ತಿ ಹಾಗೂ ಮಹತ್ವ. ಅಂಥ ಗಾಢ ಪ್ರೇಮದ ಮುಖಾಂತರವೇ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಎದುರಿಸುವ ರೀತಿ ಅರಿವಾಗದಿದ್ದರೆ ಆ ಪಾತ್ರವನ್ನು ನಟಿಸುವುದೇ ಕಷ್ಟಕರ. ರಂಗದ ಹೊರಗೆ ಆ ರೀತಿಯ ಸಿದ್ಧತೆ ನಡೆದಿದ್ದಾಗ, ರಂಗದ ಮೇಲೆ ಅದು ಸರಾಗವಾಗಿ ಬಂದು ನಟನ ಪ್ರೇರಕ ಶಕ್ತಿಯಾಗಲು ಸಾಧ್ಯ. ಯಾಕೆಂದರೆ ಯಾವುದೇ ಸನ್ನಿವೇಶದಲ್ಲಿ ಮುಂದೇನಾಗುವುದೆಂದು ನಟರಿಗೆ ತಿಳಿದಿರುತ್ತದೆ, ಪಾತ್ರಗಳಿಗಲ್ಲ. ನಟರ ಅಭಿನಯ ಸಹಜವಾಗಿರುವುದಕ್ಕೆ ಪೂರಕವಾಗಿ ಪಾತ್ರಗಳು ಸಂಭಾಷಣೆಯಲ್ಲಿ ಏನನ್ನೊ 'ಹೇಗೆ' ಹೇಳುತ್ತವೆ ಅನ್ನುವುದಕ್ಕಿಂತ 'ಏನನ್ನು' ಹೇಳುತ್ತಿವೆ ಅನ್ನುವುದರತ್ತ ನಟರು ಹೆಚ್ಚು ಗಮನ ಹರಿಸಬೇಕಾದ್ದು ಅಗತ್ಯ. ಗ್ರೂಸಾ-ಸೈಮನ್, ಇರುವ ಅಲ್ಪ ಸಮಯದಲ್ಲಿ ಹೃದಯದ ಮಾತನ್ನೆಲ್ಲ ಹೇಳಿಕೊಳ್ಳಲು ಹೊರಟಿರುವ ಪ್ರೇಮಿಗಳು. ಇದನ್ನು ಅಭಿನಯಿಸುವ ನಟರಿಗೆ 'ಭಾವನೆಗಳು' ಅಭಿನಯದ ತಳಪಾಯವಾಗಿದ್ದರೂ ಅವರು ಅದನ್ನು 'ಭಾವುಕ'ವಾಗಿ ಅಭಿನಯಿಸಬೇಕಾಗಿಲ್ಲ. ಉಕ್ಕುವ ಭಾವನೆಯನ್ನು ಹತೋಟಿಯಲ್ಲಿಡುತ್ತ ವರ್ತಿಸುವ ಪಾತ್ರಚಿತ್ರಣದಿಂದ ಭಾವನಾತ್ಮಕ ಸನ್ನಿವೇಶದ ಕಲ್ಪನೆ ಮೂಡಬೇಕು.

ಇದನ್ನು ಬ್ರೆಕ್ಟ್ ತುಂಬ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಸೈಮನ್ 'ನೀನು ಆರೋಗ್ಯ ವಾಗಿದ್ದೀಯ' ಎಂದು ಕೇಳಿದ್ದಕ್ಕೆ 'ಹೌದು ಆರೋಗ್ಯವಾಗಿದ್ದೇನೆ. ಅಪರೂಪಕ್ಕೊಮ್ಮೆ ಬಲಭುಜ ನೋವು ಬರುತ್ತೆ. ಅದು ಬಿಟ್ಟರೆ ಇನ್ನೇನೂ ಆಗೋದಿಲ್ಲ. ಯಾಕೊ ಇದು ವರೆಗೆ ನನ್ನ ಮೇಲೆ ದೂರು ಹೇಳಲಿಲ್ಲ' ಎಂಬ ಗ್ರೂಶಾಳ ವಸ್ತುನಿಷ್ಠವಾದ ಉತ್ತರ ತುಂಬ ಪ್ರಾಮಾಣಿಕ ಕಾಳಜಿ ಹಾಗೂ ಪ್ರೀತಿಪೂರ್ವಕವಷ್ಟೇ ಅಲ್ಲದೆ ಆದರಿಂದಾಗಿಯೇ ಅವರಿಬ್ಬರು ಪರಸ್ಪರರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಕ್ಕೂ ಸಾಕ್ಷಿ. ಮುಂದೆ ಸೈಮನ್ 'ಚಳಿಗಾಲದಲ್ಲೂ ಹುಡುಗಿ ದ್ರಾಕ್ಷಿ ಬೇಕೆನ್ನುತ್ತಾಳಾ ?' ಎಂದು ಕೇಳದೆ ತನ್ನ ಬಡತನವನ್ನು ಸೂಚಿಸುವ ನೇರ ಒಣ ಮಾತುಗಳಲ್ಲಿ ಹೇಳಿದ್ದರೆ ಅದರ ಕಾವ್ಯಾತ್ಮಕತೆ ಇಲ್ಲವಾಗುತ್ತಿತ್ತು. ಅಂದರೆ, ಇಲ್ಲಿ ನಾಟಕಕಾರ ನಾಟಕವನ್ನು 'ಕಾವ್ಯ'ವನ್ನಾಗಿ ತೋರಿಸುತ್ತಿಲ್ಲ; ಮಾನವೀಯ ಸಂಬಂಧಗಳನ್ನು ಪ್ರಾಮಾಣಿಕ ಪ್ರೀತಿಯ ಮಾಧುರ್ಯ ವನ್ನು ಅದೇ ಒಂದು 'ಕಾವ್ಯ' ಅನ್ನುವಂತೆ ಚಿತ್ರಿಸುತ್ತಿದ್ದಾನೆ. ಅದು ತುಂಬ ಭಾವ ನಾತ್ಮಕ: ಎಲ್ಲೂ ಅತಿಭಾವುಕವಾಗುವುದಿಲ್ಲ. ಸೈಮನ್‌ನ ಪ್ರೀತಿ ಮಾತಿಗುತ್ತರವಾಗಿ ಗ್ರೂಶಾ ಅವನಿಗಾಗಿ ಕಾಯುತ್ತೇನೆಂದು ಹೇಳಿದ ನಂತರ ಹಾವನ್ನು ತರುವುದು ಬ್ರೆಕ್ಟ್‌ನ ಒಂದು ತಂತ್ರ. ಅದನ್ನು ಅಕೆ ಆತನನ್ನು ಕುರಿತು ಹಾಡುವುದಿಲ್ಲ; ಅದು 'ಕಾಯುವಿಕೆ' ಅಂದರೇನು ಎಂದು ತಿಳಿಸುವಂಥದ್ದು.

ಇವಲ್ಲದೆ, ಈ ಪ್ರದರ್ಶನವಲ್ಲಿ ನೈತಿಕ ಮೌಲ್ಯಗಳು ಸಾಂಪ್ರದಾಯಿಕ ಶೈಲಿಯಲ್ಲಿ ವ್ಯಕ್ತಗೊಂಡು ಅರ್ಥವತ್ತಾಗುವುದನ್ನು ಕಾಣಬಹುದು. ಯುದ್ಧ ಬಂದಿದೆ; ಈ ಪ್ರೇಮಿಗಳು ಅಗಲಬೇಕಾಗಿದೆ. ಇಂಥ ಅನಿಶ್ಚಿತ ಸಂದರ್ಭದಲ್ಲೂ ಈ ಪ್ರಾಮಾಣಿಕರು ಪರಸ್ಪರ ಸುಳ್ಳನ್ನು ಹೇಳಿಕೊಳ್ಳಲಾರರು. ಆದ್ದರಿಂದಲೇ ಸೈಮನ್ ತಾನು ಬರುವುದು ತಡವಾಗಬಹುದು ಹುಡುಗಿ ತಾಳ್ಮೆಯಿಂದ ಕಾಯಬೇಕಾಗಬಹುದೆನ್ನುತ್ತಾನೆ. ಸೈಮನ್ ಆ ಮಾತಿನ ಜತೆಗೆ ಅವಳ ಕೊರಳಿಗೆ ಸರ ಹಾಕುವುದು ತುಂಬ ಅನಿವಾರ್ಯವಾದಂತೆಯೇ ಚಿರಕಾಲ ಉಳಿಯುವಂಥ ಸಂಭ್ರಮದ ಕ್ರಿಯೆ. ಆದರೆ ಆ ಬಡಜನರ ಗಡಿಬಿಡಿಯ ಜೀವನದಲ್ಲಿ ಇಂಥ ಮಂಗಲ ಕ್ಷಣಕ್ಕೆ ಪಾದ್ರಿಯನ್ನಾಗಲೀ ಇನ್ನಾರನ್ನಾಗಲೀ ಕರೆತರುವ ಅವಕಾಶವೇ ಇರಲಿಲ್ಲ. ಅವರವರ ವಚನವೇ ಅವರಿಗೆ ಸಾಕ್ಷಿ. ಇದು ಅವರಿಬ್ಬರ ಪ್ರೇಮದೊಂದಿಗೆ ಇದ್ದ ಪರಸ್ಪರ ಗೌರವ, ಗಾಢ ನಂಬಿಕೆಯ ಸೂಚನೆ ಕೂಡ. ಇಂಥ ನಂಬಿಕೆ ತೀರ ಅಗತ್ಯ. ಏಕೆಂದರೆ ತಾವು ಬದುಕುತ್ತಿದ್ದ ಸಂದರ್ಭದಲ್ಲಿ ವಚನವಿತ್ತಿದ್ದೇ ನೆಂದು ಹೇಳಿದ ಮರುಕ್ಷಣಕ್ಕೇ ಅದು ಮುರಿದು ಹೋಗುತ್ತಿರುತ್ತದೆ.

ಯಾವುದೇ ಪಾತ್ರವನ್ನು ಸುಲಭ, ಸರಳೀಕೃತ ತೀರ್ಮಾನಗಳ ಚೌಕಟ್ಟಿನೊಳಗಿಡದೆ ದ್ವಂದ್ವಾತ್ಮಕವಾಗಿ ತೋರಿಸುವ ನಾಟಕೀಯ ತಂತ್ರ ಬ್ರೆಕ್ಟ್ ಬಯಸುವ ಸಾಫಲ್ಯದತ್ತ

ಸಾಗುತ್ತದೆ. ಅಂದರೆ ಪ್ರಶ್ನೆ-ವಾದ-ಚರ್ಚೆಯ ಮೂಲಕ ಜನರನ್ನು ಆಲೋಚನೆಗೆ ತೊಡಗಿಸುವ ರೀತಿ.

ಇಡೀ ನಾಟಕವೇ ಹಲವು ಕಥೆಗಳಿಂದ ಕೂಡಿದ್ದು. ಅವೆಲ್ಲ ಹೆಚ್ಚು ಕಡಿಮೆ ಸ್ವತಂತ್ರ ವಾದವು. ಮೊದಲನೆಯ ಕಥೆ ಗ್ರೂಶಾ-ಮಗುವಿನದ್ದಾದರೆ ನಂತರ ಅಜದಾಕ್ ಅನ್ನುವ ವ್ಯಕ್ತಿ ನ್ಯಾಯಾಧೀಶನಾದದ್ದು ಬರುತ್ತದೆ. ಅಜದಾಕ್ ಹಳ್ಳಿಯ ಬುದ್ಧಿವಂತ, ಬಡ ಜನರ ಪರ ಅನ್ನಿಸಿಕೊಂಡವನು, ಭಿಕ್ಷುಕನ ವೇಷದಲ್ಲಿ ಬಂದ ರಾಜನಿಗೆ ಮೊದಲು ಆಶ್ರಯವಿತ್ತರೂ ಅವನ ನಡವಳಿಕೆಯಿಂದ ಉತ್ತಮ ಕುಲದವನಿರಬೇಕೆಂದು ಶಂಕಿಸಿ ಆತನ ಬಗ್ಗೆ ಜಿಗುಪ್ಸೆಗೊಂಡವನು, ನಿಷಿದ್ಧ ಬೇಟೆಯನ್ನಾಡಿ ಹೊಟ್ಟೆ ಹೊರೆದುಕೊಂಡು, ಅದರ ವಿಚಾರಣೆಗೆ ಬಂದ ಪೋಲೀಸ್ ಶಾವಾನಿಗೆ 'ನೀವೆಲ್ಲ ನರಭಕ್ಷಕರು, ಆದರೆ ನಾನು ಕೇವಲ ಮೊಲಭಕ್ಷಕ' ಎಂದು ಪ್ರತ್ಯುತ್ತರ ಕೊಡುತ್ತಾನೆ. ಆಗ ಶಾವಾನ ಸಂಕಟವೂ ಅರ್ಥಪೂರ್ಣ. ಏಕೆಂದರೆ ಆತ ಅಜದಾಕ್‌ನ ಸ್ನೇಹಿತ. ಆದರೆ ಪೋಲೀಸ್ ಉದ್ಯೋಗ ದಲ್ಲಿದ್ದು ತನ್ನ ಕರ್ತವ್ಯ ಪಾಲಿಸದಿದ್ದರೆ. ಕೆಲಸ ಕಳೆದುಕೊಳ್ಳುವಂತಹ ಸ್ಥಿತಿ.

ಬ್ರೆಕ್ಟ್ ಒಬ್ಬ ಸಮಾಜವಾದಿಯಾಗಿ ನಂಬಿದ್ದೇನೆಂದರೆ ಮನುಷ್ಯನ ಸ್ವಭಾವವನ್ನು ಕೇವಲ ದೇವರು ಕೊಟ್ಟದ್ದೆಂಬ ದೃಷ್ಟಿಯಿಂದ ಕಾಣಬಾರದು. ಅದು ಅವನು ಬೆಳೆ ಯುವ ಪರಿಸರದ ಪ್ರಭಾವದಿಂದ ಅವನ ಜೀವಿತ ಕಾಲದಲ್ಲಿ ಅವನೊಳಗ ಸೇರಿ ಬೆಳೆಯುವಂಥದ್ದು. ಅದನ್ನು ಬದಲಾಯಿಸಬಹುದು. ಎಷ್ಟೋ ಸಂದರ್ಭದಲ್ಲಿ ಅದು ಮನುಷ್ಯರ ನಿಜ ಸ್ವಭಾವವೇ ಆಗಿರದೆ ಸಾಂದರ್ಭಿಕವಾಗಿ ಅವರು ಹಾಗೆ ವರ್ತಿಸು ತ್ತಾರೆ. ಹಾಗಿಲ್ಲದೆ. ಮೂಲತಃ ಸಿಟ್ಟಿನವನೋ ಹೇಡಿಯೋ ಆದ ಮನುಷ್ಯ. ಬ್ರೆಕ್ಟ್‌ನ ಪ್ರಕಾರ ಯಾವ ರೀತಿಯ ಆಸಕ್ತಿಯನ್ನೂ ನಮ್ಮಲ್ಲಿ ಕೆರಳಿಸಲಾರ. ಹಾಗಾಗಿ ರಂಗದ ಮೇಲೆ ಪಾತ್ರಗಳನ್ನು ಕ್ರೂರಿ, ಮೂರ್ಖ, ಅಥವಾ ಒಳ್ಳೆಯವನೆಂದು ತೋರಿಸಿಬಿಟ್ಟ ರಾಗುವುದಿಲ್ಲ. ಅವರು ಹಾಗೆಯೇ ಎಂಬ ಸುಲಭ ತೀರ್ಮಾನಗಳಿಗೆ ಇಂಥ ಸಂದರ್ಭ ದಲ್ಲಿ ನಾವು ಬಂದುಬಿಡುತ್ತೇವೆ. ಆದರೆ, ಯಾಕೆ ಪಾತ್ರಗಳು ಹಾಗೆ ವರ್ತಿಸುತ್ತವೆ, ಅವು ಹಾಗಿರಲೇಬೇಕೇ, ಅದಕ್ಕೆ ಹಿನ್ನಲೆಯಾಗಿರುವ ಸಾಮಾಜಿಕ ಪ್ರಕ್ರಿಯೆಗಳೇನು, ಕಾರಣಗಳೇನು ಎಂದು ಅನ್ವೇಷಿಸಿದಾಗ ನಾವು ಇಡೀ ಆ ಸಾಮಾಜಿಕ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಅದನ್ನು ಬದಲಾಯಿಸುವ ಅಗತ್ಯವಿದ್ದಾಗ, ಹಾಗೆ ಮಾಡಲು ಸಾಧ್ಯವೇ ಎಂಬ ಅಂಶದತ್ತಲೂ ನಮ್ಮ ಆಲೋಚನೆಯನ್ನು ಹರಿಸುತ್ತೇವೆ. ಇದೇ ಬ್ರೆಕ್ಟ್‌ನ alienation ತಂತ್ರದ ಮುಖ್ಯ ವಿಚಾರ ಹಾಗು ಉದ್ದೇಶ.

ನಾಟಕದ ಕೊನೆಯ ಹಂತ. ಈಗ ಪರಿಸ್ಥಿತಿ ಬದಲಾಗಿದೆ. ರಾಜ ರಾಜ್ಯಕ್ಕೆ ಹಿಂತಿರುಗಿದ್ದಾನೆ. ದಂಗೆ ಅಡಗಿದೆ. ಗ್ರೂಶಾ ಸಾಕಿದ ಮಗು ಯಾರಿಗೆ ಸೇರಬೇಕೆನ್ನು

ವುದರ ಬಗ್ಗೆ ಈಗ ವಿಚಾರಣೆ. ಒಂದು ಅರ್ಥದಲ್ಲಿ ಆ ವಿಚಾರಣೆ ಮಗುವಿನ ನಿಜವಾದ ತಾಯಿ ಯಾರು ಅನ್ನುವುದರ ಬಗ್ಗೆ ಅಲ್ಲ; ಮಗುವಿಗೆ ಬೇಕಾದ ಉತ್ತಮ ತಾಯಿ ಯಾರು ಎನ್ನುವ ನಿರ್ಧಾರದ ಬಗ್ಗೆ ನಡೆಯುತ್ತದೆ. ಏಕೆಂದರೆ ರಾಣಿಯ ಗುಂಪಿನವರು ನ್ಯಾಯವನ್ನು ಕೊಳ್ಳಬಲ್ಲರು. ಅಂಥ ವ್ಯವಸ್ಥೆಯೇ ಎಲ್ಲೆಡೆಯೂ ಇದೆ. ಆದರೆ ಗ್ರೂಶಾ ತಾನು ಮಗುವನ್ನು ಬೆಳೆಸಿದ್ದೇನೆಂಬ ಕಾರಣದಿಂದಲೇ ಅದನ್ನು ತನ್ನದಾಗಿಸಿ ಕೊಳ್ಳಬೇಕಾಗಿದೆ, ಇನ್ಯಾವ ಮೂಲದಿಂದಲೂ ಆಕೆ ನ್ಯಾಯವನ್ನು ಪಡೆಯಲು ಶಕ್ಯಳಲ್ಲ.

ಈಗ ವಿಚಾರಣೆ ನಡೆಸುವಾತ "ನಿಜವಾದ" ನ್ಯಾಯಾಧೀಶನಲ್ಲ. ಅಜದಾಕ್ ಎಂದು ಅಡಿಗೆಯವಳು ಸಂತೋಷ ವ್ಯಕ್ತಪಡಿಸುತ್ತಾಳೆ. ಅಜದಾಕ್ ಬಡವರ ಪರ. ಒಂದು ವೇಳೆ, "ನಿಜವಾದ" ನ್ಯಾಯಾಧೀಶನೇ ಆಗಿದ್ದರೆ ಇವರಿಗೆ ಅಪಾಯ ಒದಗು ತ್ತಿತ್ತು. ಇಲ್ಲಿ ಗ್ರೂಶಾ ಹಾಗು ಅಡಿಗೆಯವಳ ಮಾತುಗಳ ವಾದ, ಚರ್ಚೆಯ ರೂಪ ದಲ್ಲಿವೆ. ಅಡಿಗೆಯವಳು ಗ್ರೂಶಾಗೆ ಕೇಳುವ ಪ್ರಶ್ನೆಗಳು ಪ್ರೇಕ್ಷಕರೇ ಗ್ರೂಶಾಗೆ ಹಾಕುವಂಥಹವು. ಅಡಿಗೆಯವಳಿಗೆ ಗ್ರೂಶಾ ಮಗುವಿನ ಮೇಲೆ ಇರಿಸಿದ್ದ ಭಾವನೆ ಅರ್ಥವಾಗುತ್ತದೆ. ಆದರೆ 'ಅಂಥ ಕಾಲದಲ್ಲಿ' ಹೇಗೆ ತಾನೆ ಗ್ರೂಶಾ ಮಗುವನ್ನು ಸಾಕಬಲ್ಲಳು ಎಂಬ ಪ್ರಶ್ನೆ. ಯಾವರೀತಿಯ ಗಾಢ ಸಂಬಂಧವನ್ನು ಗ್ರೂಶಾ ಮಗು ವನ್ನು ಬೆಳೆಸುವ ಹಂತದಲ್ಲಿ ಮಗುವಿನ ಬಗ್ಗೆ ಹೊಂದಿದ್ದಾಳೆ, ಅಲ್ಲದೆ, ಇಂಥ ಸಂದರ್ಭ ದಲ್ಲಿ ತನ್ನದಲ್ಲದ ಮಗುವನ್ನು ತನ್ನದೆಂದು ಹೇಳುವ ಹಕ್ಕು ತೋರಿಸುವ ಮನೋ ಸ್ಥೈರ್ಯದ ಸ್ವರೂಪವೇನು ಎಂಬ ಆಲೋಚನೆಗೆ ಒಯ್ಯುತ್ತದೆ. ಆ ಪ್ರಶ್ನೆ ಹಾಕಿದ ಅಡಿಗೆಯವಳಿಗೂ ತಾನು ಹಿಂದೊಮ್ಮೆ ಆ ಮಗುವನ್ನು ಸಾಕುತ್ತಿದ್ದೇನೆ ಅನ್ನುವುದೂ ತಿಳಿದಿರುವುದಿಲ್ಲ. ಪ್ರೇಕ್ಷಕರು ತಾವಾಗಿದ್ದರೂ ಆಗ ಹಾಗೇಯೇ ಮಾಡುತ್ತಿದ್ದೆವೆಂದು ಕೊಂಡು ಬಹು ಸುಲಭವಾಗಿ ಗ್ರೂಶಾಳಲ್ಲಿ ತಮ್ಮನ್ನು ಕಂಡುಬಿಡುತ್ತಾರೆ. ಆದ್ದರಿಂದಲೇ ಅಡಿಗೆಯವಳ ಪ್ರಶ್ನೆ ಅಂಥ ಮನಃಸ್ಥಿತಿಗೆ ತಡೆ ಹಾಕಿ, ಆಗ "ತಾವೇನು ಮಾಡುತ್ತಿ ದ್ದೆವು" ಎಂದು ತಮ್ಮನ್ನೇ ಪ್ರಶ್ನಿಸಿಕೊಳ್ಳುವಂತೆ ಮಾಡುತ್ತದೆ. ಗ್ರೂಶಾಳನ್ನು ಒಬ್ಬ ವಿಶಿಷ್ಟ ವ್ಯಕ್ತಿಯನ್ನಾಗಿ ರೂಪಿಸುವುದು ಯಾವುದು ಎಂಬ ವಿಷಯದತ್ತ ನಾವು ಗಮನ ವೀಯುವಂತೆ ಪ್ರೇರೇಪಿಸುತ್ತದೆ.

ಅಜದಾಕ್ ಬಡವರ ಪರ ಎಂದು ಪ್ರಸಿದ್ಧನಾಗಿದ್ದರೂ ಈ ವಿಚಾರಣೆಯ ಸನ್ನಿ ವೇಶದಲ್ಲೆಲ್ಲೂ ಆತ ಹಾಗೆ ತೋರುವುದಿಲ್ಲ, ಇದು ಕೂಡ sentimental ಅಲ್ಲ. ವಾದಿಗಳ ಸಹಕಾರವಿಲ್ಲದಿದ್ದರೆ ನ್ಯಾಯ ಗೆಲ್ಲಲೂ ಅಸಾಧ್ಯ. ಗ್ರೂಶಾ ಹಾಗು ಅವಳ ಜನ ಸಹಕರಿಸಿದರೆ ಮಾತ್ರ ತಾನೂ ಅವರಿಗೆ ಸಹಾಯ ಮಾಡಬಲ್ಲೆ ಎಂದು ಸೂಚನೆ ಕೊಡುತ್ತಾನೆ. ಈಗ ಮಗು ತನ್ನದೆಂದು ಗ್ರೂಶಾ ವೃಥವಾಗಿ ಹೇಳಿದರೆ ಮಾತ್ರ

ಸಮಸ್ಯೆ ಬಗೆಹರಿಯಬಹುದು. ಕೋರ್ಟಿನಲ್ಲಿ "ನೀವು ಹಣ ತೆರಲು ಸಿದ್ಧರಿಲ್ಲ" ಎಂದು ಆಜದಾಕ್ ಗ್ರೂಶಾ ಗುಂಪಿಗೆ ದೂಷಿಸಿದಾಗ "ಚರಿತ್ರೆಯುದ್ದಕ್ಕೂ ನಿಮ್ಮಂಥ ವ್ಯಕ್ತಿಗಳು ನ್ಯಾಯ ಬೇಕೆನ್ನುತ್ತಾರೆ: ಆದರೆ ಅದಕ್ಕಾಗಿ ಹೋರಾಡಲು ಮಾತ್ರ ಸಿದ್ಧರಿಲ್ಲ" ಎಂಬ ಕಟುಟೀಕೆಯೂ ಅವನ ಮಾತಿನಲ್ಲಿ ಸೇರಿದೆ. ಹೇಗಿದ್ದರೂ ಕೊನೆಯಲ್ಲಿ ಮಗು ಗ್ರೂಶಾಗೇ ಸೇರುತ್ತದೆ.

ಒಟ್ಟಿನಲ್ಲಿ ಇಡೀ ನಾಟಕ ಈಗ ಮನುಷ್ಯ ನಾಗರೀಕತೆ ಯಾವ ಹಂತವನ್ನು ತಲುಪಿದೆ. ಆತನ ಪ್ರಜ್ಞೆ ಯಾವ ರೀತಿಯಲ್ಲಿ ವರ್ತಿಸುತ್ತದೆ ಎಂಬ ಅಂಶಗಳತ್ತ ನಮ್ಮ ಗಮನ ಸೆಳೆಯುತ್ತದೆ. ನಾಟಕದಲ್ಲಿ ರಾಣಿ ಪ್ರತಿಪಾದಿಸುವ ನೈಸರ್ಗಿಕವೋ, ರಕ್ತ ಸಂಬಂಧವೋ ಹೀಗೆ ಪೂರ್ವನಿರ್ಧಾರಿತ ಜೀವನ ಮೌಲ್ಯಗಳ ಬದಲಿಗೆ ಗ್ರೂಶಾ ಪ್ರತಿಪಾದಿಸುವ ಸಾಮಾಜಿಕ ಹಾಗು ನೈತಿಕ ಮೌಲ್ಯಗಳು, ಆ ಮೂಲಕ ಸಮಾಜದಲ್ಲಿ ವ್ಯಕ್ತಗೊಳ್ಳಬೇಕಾದ ಮಾನವೀಯತೆ ಮುಖ್ಯವಾಗುತ್ತದೆ. ಜತೆಗೆ ಬ್ರೆಕ್ಟ್ ಸೂಚಿಸುವಂತೆ ಈಗಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯನ ಒಳ್ಳೆಯತನದಿಂದ ಅವನಿಗೆ ತೊಂದರೆಯೇ ಹೊರತು ಒಳ್ಳೆಯದಾಗುವುದಿಲ್ಲ. ಹಾಗಾಗಿ ಅವನ ಒಳ್ಳೆಯತನದ ಉಪಯೋಗವಾಗಬೇಕಾದರೆ ಈಗಿರುವ ವ್ಯವಸ್ಥೆಯನ್ನೇ ಬದಲಿಸಬೇಕು.

ಭಾರತೀಯ ಕಲೆಯ ಬಗ್ಗೆ. ಜಾನಪದ ಹಾಗು ಸಾಂಪ್ರದಾಯಿಕ ರಂಗಭೂಮಿ ಬಗ್ಗೆ ಬೆನವಿಟ್ಸ್ ತುಂಬ ಗೌರವಾದರಗಳಿಂದ ಮಾತನಾಡುತ್ತಾರೆ. ಯಾವುದೇ ದೇಶದ ಜನರಿಗೆ ಅವರವರ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನ ಶೈಲಿಯ ಮೂಲಕವೇ ಬ್ರೆಕ್ಟ್‌ನಂತಹ ನಾಟಕಕಾರರ ವಿಚಾರಗಳು ಅರ್ಥಪೂರ್ಣವಾಗಿ ವ್ಯಕ್ತಗೊಳ್ಳಬೇಕು ಎಂಬುದು ಬೆನವಿಟ್ಸ್‌ರವರ ಪ್ರಾಮಾಣಿಕ ಅಭಿಪ್ರಾಯ. ಹೀಗೆ ಹತ್ತು ದಿನಗಳವರೆಗೆ ನಮ್ಮೊಡನೆ ಇದ್ದು, ನಾಟಕವೊಂದನ್ನು ದೃಶ್ಯೀಕರಿಸಿದ ಫ್ರಿಟ್ಸ್ ಬೆನವಿಟ್ಸ್ ರಂಗಭೂಮಿ ಹಾಗು ಬದುಕು ಇವೆರಡರ ಸಂಬಂಧವನ್ನು ನಮಗೆ ಅತಿ ನಿಕಟವಾಗಿ ತಿಳಿಯಪಡಿಸಿದರು; ಅಂಥದೇ ಆಪ್ತತೆಯಲ್ಲಿ ನಮಗೆ ಬ್ರೆಕ್ಟ್‌ನನ್ನು ಪರಿಚಯಿಸಿದ ಅಪೂರ್ವ ವ್ಯಕ್ತಿ.

(ಫ್ರಿಟ್ಸ್ ಬೆನವಿಟ್ಸ್. 23 ಅಕ್ಟೋಬರ್ 86ರಿಂದ. 3 ನವೆಂಬರ್ 86ರವರೆಗೆ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಗೆ ನಡೆಸಿದ ರಂಗ ತಾಲೀಮಿನ ಸಂಗ್ರಹ ನಿರೂಪಣೆ)

ಕರಿಮಣ್ಣ ಹುಡುಗನ ಚೆಂಗುಲಾಬಿ

೧

ಆಮ್ಮನೆಯ ಕರಿಮಣ್ಣ ಹುಡುಗ
ತನ್ನೆಲ್ಲ ಅದಮ್ಯ
ಆಸೆಗಳನ್ನು ತನ್ನ ಗುಲಾಬಿಗಣ್ಣಿನ ಚೆಲುವೆ
ಗುಲಾಬಿಗೆ ಪೇರಿಸಿ ಬರೆದಂಥ ಕಾವ್ಯ
ಗುಲಾಬಿಯು ಅಗಲಗಣ್ಣಿನ ಹಾಗೇ
ಇಷ್ಟಗಲ ತೆರೆಕೊಂಡಿತು.

ಅದರಲ್ಲಿ ಗುಲಾಬಿಯು
ಕುಲುಕುಲಿಸುವ ಗಲ್ಲ.
ಗಲ್ಲಕ್ಕೊಂದು ಮುತ್ತಿಡಲು
ಚಿಗುರೊಡೆದ ಮೊಡವೆ.

ಮೊಡವೆಗಿಂಥಲೆ ಬಂಗಾರದೊಡವೆ !
ಮುಖ ಸಿಂಗಾರ ಸೂಸಲು ಮೆಲ್ಲ
ಗೋಧಿ ರಂಗಿನ ನಗುಮಾರಿ
ಗುಲಾಬಿ ಸುಕುಮಾರಿ.

ಹೀಗೆ ಕರಿಮಣ್ಣ ಹುಡುಗ
ತನ್ನ ಕನವರಿಕೆಗಳಲ್ಲೆ ಫಲವತ್ತಾಗಿ
ಮುಳುಗಿ ಹೋಗುತ್ತಿದ್ದುದು
ಗುಲಾಬಿಗೆ ಗೊತ್ತಿರಲಿಲ್ಲ.

ಎಲ್ಲಾದರು ಎದುರಿಗೆ ಕಂಡಾಗ
ನೀರು ಹೊತ್ತು ನಡೆವಾಗ
ಇಲ್ಲಾ ಪುಸ್ತಕ ತೆರೆದು ಕೂತಾಗ
ತನ್ನ ಅಗಲ ಕಣ್ಣುಗಳಲ್ಲಿ ನಕ್ಕಂತಾಗಿ ಗುಲಾಬಿ

ಎದೆಹೊಕ್ಕಿದ ಪ್ರೇಮ ಕೂಸು
ಕರಿಮಣ್ಣ ಹುಡುಗನಿಗೆ

ಕೆ.ಪಿ. ಮೃತ್ಯುಂಜಯ ದ್ವಿತೀಯ ಬಿ.ಇ. ಕಲ್ಕೆರೆ-572 221 ಹುಲಿಯೂರುಸಂದ್ರ (ಮಾರ್ಗ)

ಇಷ್ಟು ಆರ್ಭಟ ಮಾಡುತ್ತೆಂದು
ಪಾಪ ಗುಲಾಬಿಗೆ ತಿಳಿದಿರಲಿಲ್ಲ.
ಆಗ ಅವಳಿಗೆ ಇನ್ನೂ ಚಿಕ್ಕ ವಯಸು.

೨

ಅಲ್ಲಿಂದೀಚೆಗೆ ಗುಲಾಬಿಗೆ
ಪುಸ್ತಕದ ತುಂಬ ಕರಿಮಣ್ಣ ಹುಡುಗನದೆ
ಚಿತ್ರ. ಹಾಳೆಗಳೆಲ್ಲ ವಸಂತದ ಪತ್ರ.
ಓದುವುದೆಲ್ಲ ಅವನ ಕಾವ್ಯ.
ಕನಸುವುದಿಲ್ಲ ಬಿಟ್ಟವನ ಅನ್ಯ.

ಇದು ಗೊತ್ತಾಗಿ
ಅವಳಮ್ಮನಿಗೆ ಅಪ್ಪನಿಗೆ.
ಗುಸುಗುಸು ಗೊತ್ತಾದರೆ ಊರಿಗೆ

ತಮ್ಮ ಜಾತಿಯ ಮಾನ ಉಳಿಯುವುದೇನೆಯ
ಗುಟ್ಟಾಗಿ ಕರೆಸಿ ಕರಿಮಣ್ಣ ಹುಡುಗನಿಗೆ
ಹೆದರಿಸಿ ಪ್ರಾಣಕ್ಕೆ
ತಳ್ಳಿದರು ಗುಲಾಬಿಯ ಕಗ್ಗತ್ತಲ ಕೋಣೆಗೆ.

ಈಗ ಕರಿಮಣ್ಣ ಹುಡುಗ
ಕಂಗಾಲಾಗಿ ಸೊರಗಿದ್ದಾನೆ ಗುಲಾಬಿಗೆ ಕೊರಗಿ,
ಸುಟ್ಟ ಬೆರುಳುಗಳಿಂದ
ಕಟ್ಟುತ್ತಾನೆ ಕಾವ್ಯ ಈಗಲೂ ಗುಲಾಬಿಗಾಗಿ.

ಅತ್ತ ಗುಲಾಬಿ ಆ ಕಗ್ಗತ್ತಲ
ಕೋಣೆ ಮೂಲೆಯಲ್ಲೆ
ಕಾದಿದ್ದಾಳೆ ಬರಬಹುದಾದ ತನ ನಲ್ಲ
ಕರಿಮಣ್ಣ ಹುಡುಗ ಕಾವ್ಯ ಓಲೆಯಲ್ಲೆ.

ಆದರೆ ಕರಿಮಣ್ಣ ಹುಡುಗನ
ಕಾವ್ಯ ಪತ್ರವನ್ನು ಕೊಂಡೊಯ್ಯುವರು ಯಾರು ?
ಕೊಟ್ಟು, ಗುಲಾಬಿ ಸುಕುಮಾರಿಯ ವದನ
ಮತ್ತೆ ಅರಳಿಸುವವರು ಯಾರು ?

—ಕೆ.ಪಿ. ಮೃತ್ಯುಂಜಯ

ಕೆಂಗುಲಾಬಿಯಂತೆ ನನ್ನ ಪ್ರೀತಿ

ಜೂನ್ ತಿಂಗಳಿನ ಸ್ವಚ್ಛ ಬೆಳಗಿನಲ್ಲಿ
ಆಗಷ್ಟೇ ಅರಳಿದ ಕೆಂಗುಲಾಬಿಯಂತೆ
ನನ್ನ ಪ್ರೀತಿ
ಅದಾದರೋ ಸುಶ್ರಾವ್ಯವಾಗಿ
ಹಾಡಿದ ವಿರಹ ಗೀತೆ
ನನ್ನವಳಾದ ನೀನು
ಕಡೆದಿಟ್ಟ ಸುಂದರ ಕಲೆ
ಮುಳುಗಿದ್ದೀಯೆ ನೀನು
ಪ್ರೀತಿಯ ಅತ್ಯಂತ ಆಳದಲ್ಲಿ
ನಾನಾದರೂ ಪ್ರೀತಿಸುತ್ತೇನೆ
ನಿನ್ನನ್ನೇ ಖಾಯಂ ಆಗಿ
ಆ ಸಮುದ್ರ ಬತ್ತುವವರೆಗೆ
ಒತ್ತಿ. ಬರಡಾಗುವ ತನಕ-ಪ್ರಿಯೆ
ಮತ್ತೆ ರವಿಯ ಬಿಸಿಲಿನಾಘಾತಕ್ಕೆ
ಕಲ್ಲುಗಳು ಕರಗುವವರೆಗೆ.

ಈ ಪಯಣದಿಂದ ಸ್ವಲ್ಪ ಬಿಡು
ದಣಿವಾರಿಸಿಕೊಳ್ಳುವುದಕ್ಕಷ್ಟು ಅಲ್ಪ ಕಾಲ
ಅನಂತರ ಪುನಃ ನಿನ್ನೆಡೆಗೆ
ಮರಳುತ್ತೇನೆ ಪ್ರೀತಿಯಿಂದ
ಅದೆಷ್ಟು ಸಹಸ್ರ ಮೈಲು ಸಾಗಿದ್ದರೂ ಕೂಡ.

ಕವನ : O MY LUVE'S LIKE A RED, RED ROSE.

ಕವಿ : Robert Burns

ಕನ್ನಡಕ್ಕೆ ರೂಪಾಂತರ : ರವೀಂದ್ರ ಭಟ್ಟ ಕುಳಿಬೀಡು.

---

*ರವೀಂದ್ರಭಟ್ಟ, ಕುಳಿಬೀಡು, ಎಂ.ಎ, ಮಾವಿನ ಗುಂಡಿ, ಅಂಚೆ, ಸಿದ್ದಾಪುರ 581355 ಉತ್ತರ ಕನ್ನಡ

ಕಾವ್ಯಾವಲೋಕನ

—ಕೆ. ಎಸ್. ರಾಧಾಕೃಷ್ಣ

ನವ್ಯ ಕಾವ್ಯ ಎಷ್ಟು ಬೇಗ ಬಂದು ಉಚ್ಛ್ರಾಯ ಸ್ಥಿತಿಯನ್ನು ತಲುಪಿತೋ ಅಷ್ಟೇ ಬೇಗ ಹೊರಟು ಹೋಯಿತು. ಬರುವಾಗ ಇದ್ದಷ್ಟು ಸಾವಧಾನ ನಿರ್ಗಮಿಸು ವಾಗ ಅದಕ್ಕಿರಲಿಲ್ಲ, ಪರಂಪರೆಯ ಭಾಗವಾಗಿ ಬರೆದ ಯಾವುದೇ ಕಾವ್ಯ ಮಾರ್ಗಕ್ಕೂ ಅನಿವಾರ್ಯವಾದ ದುರಂತ ಸ್ಥಿತಿ ಇದು, ಅದರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಬೇಕಾಗಿಯೂ ಇಲ್ಲ. ಆದರೆ ಅದು ಎಬ್ಬಿಸಿದ ಗೊಂದಲ, ಹುಟ್ಟುಹಾಕಿದ ಪ್ರಶ್ನೆಗಳು, ಮುಖ್ಯವಾಗಿ ಕನ್ನಡದ ಅತ್ಯಂತ ಶ್ರೇಷ್ಠರಾದ ಕೆಲವು ಕವಿಗಳನ್ನು ಈ ಮಾರ್ಗ ನೀಡಿದೆ ಎಂಬ ಕಾರಣಕ್ಕಾಗಿ ಹಾಗೂ ಅನಂತರ ಅದರಷ್ಟೇ ಅವಸರಜನ್ಯ ವಾದ ಕೆಲವು ಕಾವ್ಯ ಮಾರ್ಗಗಳು ಉದ್ಭವವಾಗಿರುವುದನ್ನೂ ಚಿಂತಿಸುವುದು ಈ ಸಂದರ್ಭದಲ್ಲಿ ಅತ್ಯಂತ ಅವಸರವೆಂದು ತೋರುತ್ತದೆ.

ಚಂಡಮಾರುತ ವೇಗದಿಂದ ಬಂದು ಮರೆಯಾದ ನವ್ಯ ಮಾರ್ಗ ಭಾರತೀಯ ಕಾವ್ಯ ಪರಂಪರೆಗೆ ಅನ್ಯವಾದ ಆಶಯಗಳನ್ನು ಹೊಂದಿತ್ತೆನ್ನುವುದು ನಿರ್ವಿವಾದ. ಅಂದ ಮಾತ್ರಕ್ಕೆ ಈ ಮಾರ್ಗದ ಅತ್ಯಂತ ಶ್ರೇಷ್ಠರಾದ ಕವಿಗಳ ಸಾಧನೆಯನ್ನೇನೂ ಅಲ್ಲಗಳೆದಂತಾಗುವುದಿಲ್ಲವೆಂದುಕೊಂಡಿದ್ದೇನೆ, ಮತ್ತು ಮೇಲೆ ಮಾಡಿದ ಆಪಾದನೆ ನವೋದಯ ಸಂಪ್ರದಾಯಕ್ಕೂ ಅನ್ವಯವಾಗುತ್ತದೆ. ಒಂದು ರೀತಿಯಲ್ಲಿ ಇವಳ ಸೀರೆಯನ್ನು ಅವಳಿಗುಡಿಸಿ, ಅವಳ ತೊಡುಗೆಯನ್ನು ಇವಳಿಗೆ ಹಾಕಿ ಆನಂದಿಸಿ ಹಾಕಲು ನಮ್ಮ ಕವಿಗಳು ತೊಡಗಿದಾಗಲೇ ಅವಿಚ್ಛಿನ್ನವಾಗಿ ಹರಿದು ಬಂದಿದ್ದ ಜೀವಂತ ಪರಂಪರೆಯೊಂದು ಕತ್ತರಿಸಿಹೋಯಿತು. ಕಾವ್ಯರಚನೆಗೆ ಬೇಕಾಗಿದ್ದ ಸಿದ್ಧತೆ ಗಳು ಅನವಶ್ಯಕವೆಂದು ತೋರಿದವು. ಹಳೆಯ ಕಾವ್ಯ ಛಂದೋ ಬಂಧಗಳು ಹೊಸ ಕಾವ್ಯರಚನೆಯ ಸಂದರ್ಭದಲ್ಲಿ ಬೇಡವಾದುವು. ಹಾಗೆ ಹೊಸರೂಪಗಳು ಸೃಷ್ಟಿ ಯಾಗುವುದು ಕಾವ್ಯದ ಜೀವಂತಿಕೆಯ ಲಕ್ಷಣವೆಂಬ ಅರಿವು ನನಗಿದೆ. ಆದರೆ ಆ ಛಂದೋ ರೂಪಗಳು ನಮಗೆ ಸುಲಭ ಗ್ರಾಹ್ಯವಲ್ಲ ಅನ್ನುವ ಕಾರಣಕ್ಕೆ ಜೀವಂತಿಕೆಯ ನೆವ ಹೂಡುವುದು ಪರಂಪರೆಯನ್ನೂ ಸಾವಿನತ್ತ ದೂಡಿದಂತೆ ಎನ್ನುವುದು ಹೆಚ್ಚು ಸತ್ಯವಾದ ಮಾತು. ಅಡಿಗರು, ಗೋಕಾಕರು, ನರಸಿಂಹಸ್ವಾಮಿ ಹೀಗೆ ಕೆಲವು

ಕೆ. ಎಸ್. ರಾಧಾಕೃಷ್ಣ, ನಂ. 16, 5ನೇ ಬೀದಿ, ಶಂಕರಪುರಂ, ಬೆಂಗಳೂರು-560 004

ಮೊದಲ ನವ್ಯ ಕವಿಗಳನ್ನು ಬಿಟ್ಟರೆ ಕನ್ನಡ ಛಂದೋರೂಪಗಳು ಅಭ್ಯಾಸ ಯೋಗ್ಯ ವೆಂದು ಬಹಳ ಮಂದಿ ನವ್ಯ ಕವಿಗಳಿಗೆ ಕಂಡಿಲ್ಲ.

ನಮಗೆ ಇಂದು ಬೇಕಾದುದು ನವೋದಯ, ನವ್ಯ, ಬಂಡಾಯ ಯಾವ ಕಾವ್ಯವೂ ಅಲ್ಲ. ಈ ಮಾತನ್ನು ಹೇಳುವಾಗ ಈ ಎಲ್ಲ ಮಾರ್ಗಗಳಲ್ಲೂ ಶ್ರೇಷ್ಠ ವೆನ್ನಬಹುದಾದ ಕಾವ್ಯರಚನೆಯಾಗಿದೆ ಎಂಬುದನ್ನು ನಾನು ಮರೆತಿಲ್ಲ. ಆದರೆ ಅಚ್ಚ ಭಾರತೀಯವಾದ ಆಶಯಗಳನ್ನೊಳಗೊಂಡ, ಅಚ್ಚ ಭಾರತೀಯವಾದ ಅಭಿವ್ಯಕ್ತಿ ಯನ್ನೂ ತನ್ನದಾಗಿಸಿಕೊಂಡ ಕಾವ್ಯರಚನೆಯಾಗಬೇಕು. ಅಂಥಕಾವ್ಯ ಈ ಶತಮಾನದಲ್ಲಿ ಹೆಚ್ಚು ರಚನೆಯಾಗಿಲ್ಲ ಎನ್ನುವುದು ನೆನಪಾದರೆ ಕಾವ್ಯಪರಂಪರೆಯ ದುರಂತದ ಅರಿವಾಗು ತ್ತದೆ. ಇಂಗ್ಲಿಷ್ ನವೋದಯದ ಮಹಾ ಸಾಹಿತಿಗಳಿಂದ ಅಥವ ಅಲ್ಲಿನ ನವ್ಯ ಸಂಪ್ರ ದಾಯದ ಪ್ರವರ್ತಕರಿಂದ ಪ್ರೇರಿತವಾದ ಕಾವ್ಯ ಮಾರ್ಗಗಳು ನಮ್ಮ ಸಂದರ್ಭದ ಆಶೋತ್ತರಗಳನ್ನೂ. ದುಃಖಖೇದಗಳನ್ನು ಅಭಿವ್ಯಕ್ತಿಸುವುದರಲ್ಲಿ ಸೋಲುತ್ತವೆ. ಎಲಿ ಯಟ್ಟಿನ ಕಾವ್ಯವನ್ನು ಓದಿ ಆನಂದಿಸುವುದಕ್ಕೆ ಅವನ ಕಾವ್ಯದ ಅನುಭವ ಸಾರವನ್ನು ಒಪ್ಪಿಕೊಳ್ಳಬೇಕು ಅನ್ನುವುದು ಅನುಚಿತವಾದ ಮಾತು. ಲೀವಿಸ್‌ನಿಗೆ ಎಲಿಯಟ್ಟಿನ ಕಾವ್ಯದ ಅಭಿವ್ಯಕ್ತಿಯ ಜೊತೆಗೇ ಅವನ ಕಾವ್ಯದ ಅನುಭವವೂ ಅತ್ಯಂತ ಜರೂರಾದುದು ಎಂದು ಅನಿಸಿದ್ದರೆ ಅದಕ್ಕೆ ಕಾರಣಗಳುಂಟು. ಆದರೆ ಅದೇ ಕಾರಣಗಳು ಭಾರತೀಯ ನಾದ ನನ್ನವೂ ಆಗಬೇಕಿಲ್ಲ. ಅಲ್ಲಿನ ವಿಮರ್ಶಕ ಪ್ರಜ್ಞೆಗೆ ಜರೂರೆನಿಸಿದ್ದು ಇಲ್ಲಿನ ವಿಮ ರ್ಶಕ ಪ್ರಜ್ಞೆಗೂ ಜರೂರು ಎನಿಸಿದರೆ ವಿಮರ್ಶೆ ವಿಮರ್ಶೆಯಾಗಿ ಉಳಿಯಲಾರದು. ಅಂದರೆ ಕಾವ್ಯದ ಅನುಭವಸಾರ ಆಯಾಯ ಸಂಸ್ಕೃತಿಯ, ಕಾವ್ಯ ಪರಂಪರೆಯ ಮೂಲ ಸೂತ್ರವಾಗಿರಬೇಕು ಅನ್ನುವ ಮಾತು ಈ ಕಾರಣದಿಂದಲೇ ಅಡಿಗರ ಮೋಹನ ಮುರಲಿ ಹಾಗೂ ರಾಮನವಮಿಯ ದಿನ ಹೆಚ್ಚು ಭಾರತೀಯವಾದ ಕವನಗಳು ಎಂದು ಹೇಳ ಬೇಕು—ಎರಡನೆಯ ಪದ್ಯದ ಬಂಧ ಕೊಂಚ ಶಿಥಿಲವೆನ್ನಿಸಿದರೂ ರಾಮಾನುಜಂ ಅವರ ರಾಮಚಂದ್ರ ಶರ್ಮರ ಕಾವ್ಯಗಳು ಪರಂಪರೆಯ ಭಾಗವೆನ್ನಿಸದಿರುವುದಕ್ಕೆ ಕಾರಣ ಅವರ ವಿಮರ್ಶಕ ಪ್ರಜ್ಞೆ ಭಾರತೀಯವಾಗಿಲ್ಲದಿರುವುದು. ಜಿ. ಎಸ್. ಸಿದ್ದಲಿಂಗಯ್ಯ ನವರ ಮಿಥಿಲೆಗಿಲ್ಲಿಂದಲೇ ಹಾರಿಯೇನು ಗುರು? ಕವನ ಕಾವ್ಯವಾಗಿ ಶಿಥಿಲಸೌಧ ವನ್ನೊಳಗೊಂಡಿದ್ದರೂ ಅವರ ಇತ್ತೀಚಿನ ಸೇಬಿನಗಿಡ ಅಥವ ಮುದುಕ-ಮಗು-ಗೊಂಬೆ ಕವನಗಳಿಗಿಂತ ಹೆಚ್ಚು ಆದರಣೀಯವಾಗುತ್ತದೆ. ಕೊನೆಯ ಎರಡು ಕವನಗಳು ಕವನಗಳಾಗಿ ಹೆಚ್ಚು ಬಿಗಿಯಾದ ಬಂಧಗಳಾಗಿವೆ ಎಂಬುದನ್ನು ಅರಿತೂ ಈ ಮಾತು ಹೇಳುತ್ತಿದ್ದೇನೆ. ಶಿವಪ್ರಕಾಶರ ಮರುಳ ಶಂಕರದೇವನಂತೂ ಅಚ್ಚ ಭಾರತೀಯವಾದ ಕವನ. ಇದೇ ಮಾತನ್ನು ಕವನವಾಗಿ ಅಷ್ಟೇ ಸಫಲವಾಗಿರುವ ಕಟ್ಟಡದ ಕೆಲಸಗಾರರು ಎಂಬ ಪದ್ಯದ ಬಗ್ಗೆ ಹೇಳಲಾಗದು. ಬೇಂದ್ರೆ ಮತ್ತು ಮಧುರಚೆನ್ನರಂತೆ ಕವಿಯ ಇಡೀ ಕಾವ್ಯಶಕ್ತಿ ಪ್ರತಿಭೆ ಭಾರತೀಯವಾಗಿ ಕೆಲಸ ಮಾಡುತ್ತಿರುವುದು ಈ ಶತಮಾನ

ದಲ್ಲಂತೂ ವಿರಳವೆಂದೇ ಹೇಳಬೇಕು. ಈ ಮಾತಿಗೆ ನರಸಿಂಹಸ್ವಾಮಿಯವರೂ ಹೊರತಲ್ಲವೆಂದರೆ ತಪ್ಪಾಗಲಾರದು.

ಪ್ರಾಯಶಃ ಪಂಪನನ್ನು ಬಿಟ್ಟರೆ ಅಡಿಗರವರೆಗೆ ಕಾವ್ಯಶಿಲ್ಪದ ಬಗ್ಗೆ, ಅದರ ನಿರ್ಮಾಣ ಶಕ್ತಿಯ ಬಗ್ಗೆ ಪ್ರಜ್ಞಾಪೂರ್ವಕವಾಗಿ ಯೋಚಿಸಿ ಕಾವ್ಯ ಬರೆದವರು ಇಲ್ಲವೇ ಇಲ್ಲವೆನ್ನಬಹುದು. ಅಂದ ಮಾತ್ರಕ್ಕೆ ಇವರಿಬ್ಬರನ್ನು ಬಿಟ್ಟರೆ ಶ್ರೇಷ್ಠ ಕವಿಗಳು ಅಥವ ಕಾವ್ಯ ಜನ್ಮತಾಳಿಯೇ ಇಲ್ಲ ಎನ್ನುವ ಮಾತು ಹೇಳಿದಂತಾಗಲಿಲ್ಲ. ಹರಿಹರ, ಕುಮಾರ ವ್ಯಾಸ. ಮುದ್ದಣ್ಣರು ಹಾಗೂ ಬೇಂದ್ರೆ ಪುಟ್ಟಪ್ಪ, ನರಸಿಂಹಸ್ವಾಮಿ, ಪುತಿನ ಅಂಥ ವರು ಶ್ರೇಷ್ಠ ಎನ್ನಬಹುದಾದ ಕಾವ್ಯರಚನೆ ಮಾಡಿದ್ದಾರೆ. ಆದರೆ ಈ ಯಾವ ಕವಿ ಯಲ್ಲಿಯೂ ವಿಮರ್ಶಕ ಪ್ರಜ್ಞೆ ಆತ್ಮವಿರೋಧಿಯಾಗಬಲ್ಲಷ್ಟು ಶಕ್ತಿಯುತವಾಗಿರಲಿಲ್ಲ ಎನ್ನುವ ಮಾತು ಕುಮಾರವ್ಯಾಸ ಹರಿಹರರದಂತೂ ಅತ್ಯಂತ ಸಹಜವಾದ ಕಾವ್ಯ ಪ್ರತಿಭೆ. ಅಷ್ಟೇ ಸಮರ್ಥವಾದರೂ ಹೌದು. ಆದರೆ ಅವರಲ್ಲಿನ ವಿಮರ್ಶಕ ಪ್ರಜ್ಞೆ ಸಾರ್ಥಕವಾಗಿ ಕೆಲಸ ಮಾಡಲಿಲ್ಲವಾದುದರಿಂದ ಅವರ ಕವಿ ಪ್ರತಿಭೆಯಲ್ಲಿನ ತೀಕ್ಷ್ಣತೆ ಓತಪ್ರೋತವಾಗಿ ಒಂದೇ ಸಮನೆ ಹರಿಯುವುದಿಲ್ಲ. ಕೊರತೆಯ ಕಾರಣದಿಂದಾಗಿಯೇ ಬೇಂದ್ರೆ ಪುಟ್ಟಪ್ಪನವರು ಶ್ರೇಷ್ಠವೆನ್ನಬಹುದಾದ ಕವನಗಳನ್ನು ಬರೆದಂತೆಯೇ ಅತಿ ಸಾಮಾನ್ಯವಾದ ಕಾವ್ಯವನ್ನು ರಚಿಸಿದ್ದಾರೆ.

ಪಂಪಕವಿಯ ಪ್ರತಿಭೆಗೆ ಅವನ ಸಂಯಮ ಅಚ್ಚುಕಟ್ಟನ್ನೂ, ಹರಿತವನ್ನೂ ತಂದೀಯುತ್ತದೆ. ಅಡಿಗರದೂ ಅಷ್ಟೇ ನಿಶಿತವಾದ ವಿಮರ್ಶಕ ಪ್ರಜ್ಞೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅವರ ಕೆಲವು ಒಳ್ಳೆಯ ಪದ್ಯಗಳನ್ನು ತುಂಬ ಸಮರ್ಥ ವಾಗಿ ಇಂಗ್ಲೀಷಿಗೆ ಅಥವ ಬೇರೆ ಯಾವುದೇ ಭಾರತೀಯವಲ್ಲದ ಭಾಷೆಗೆ ಭಾಷಾಂತರಿಸಿ ಬಿಟ್ಟರೆ ಅವರ ಕಾವ್ಯ ಭಾರತೀಯದೆ ಎಂಬ ಸಂಶಯ ತರುವಷ್ಟು ಅನ್ಯದೇಶಿಯ ವಾಗುತ್ತದೆ. ಹರಿಹರನನ್ನು ಅಥವ ಮಧುರಚೆನ್ನರನ್ನು ಭಾಷಾಂತರಿಸಿ ನೋಡಿ. ಅವರ ತಾಜಾ ಕನ್ನಡತನ ಯಾವ ಭಾಷೆಯಲ್ಲಾದರೂ ಎದ್ದು ಕಾಣುತ್ತದೆ. ಇದು ದೇಶಿಯ ವಾದ, ಪಾರಂಪರಿಕ ಸಂಸ್ಕಾರ ಜನ್ಮ ಪ್ರತಿಮಾರೂಪಕಗಳು ಹಾಗೂ ಇನ್ನಿತರ ಕಾವ್ಯ ಪರಿಕರದ ಮಾತಲ್ಲಿ, ಕಾವ್ಯದ ಮೂಲ ತುಡಿತವೇ ತನ್ನ ಮೂಲ ಪರಂಪರೆಯದು ಎನ್ನುವ ಮಾತು. ಈ ಮಾತನ್ನು ಹೇಗೊ ಹೇಳಬಹುದು. ಅಡಿಗರ ಹಾಗೂ ಅವರ ಕಾವ್ಯದಿಂದ ಪ್ರೇರಿತರಾದ ಅನೇಕ ಕವಿಗಳ ರಚನೆಗಳನ್ನು ಓದಿದಾಗ ಇವರು ಯುರೋ ಪಿನ ಕಾವ್ಯಮೀಮಾಂಸೆಯ ಪರಿಚಯ ಉಳ್ಳವರು, ಇಂಗ್ಲೀಷ್ ಬಲ್ಲವರು ಎಂಬುದು ಸ್ಪಷ್ಟವಾಗಿ ಗೋಚರವಾಗಬಲ್ಲಷ್ಟು ಅನ್ಯದೇಶಿಯ ಹಾಗೂ ಪರಂಪರಾಶೂನ್ಯವಾಗಿ ಬಿಡುತ್ತದೆ ಕಾವ್ಯಾನುಭವ. ಇದೇ ಮಾತನ್ನೂ ಮಧುರಚೆನ್ನರ ಕಾವ್ಯದ ಬಗ್ಗೆಯಾಗಲೀ, ಬೇಂದ್ರೆಯವರ ಕಾವ್ಯ ಸಂಪತ್ತಿಯ ಬಗ್ಗೆಯಾಗಲೀ, ಶಿವಪ್ರಕಾಶರ ಕೆಲವು ಕವನಗಳ

ಬಗ್ಗೆಯಾಗಲೀ ಹೇಳಲಾಗದು. ಯಾವ ಭಾಷೆಯಲ್ಲಿ ಓದಿದರೂ ಅವುಗಳ ಅಚ್ಚ ಭಾರತೀಯವಾದ ಕಾವ್ಯಾನುಭವ ಗೋಚರಿಸುತ್ತದೆ. ನಾನು ಹೇಳಬೇಕಾದ ಮಾತಿದು: ನಾವು ಇಂಗ್ಲೀಷ್ ಅಥವ ಬೇರೆ ಯಾವುದೇ ವಿದೇಶಿಯ ಭಾಷೆಯಲ್ಲಿನ ಛಂದೋರೂಪಗಳನ್ನು, ಅಲ್ಲಿಯ ಕವನ ಕಲೆಯ ಸೌಂದರ್ಯವನ್ನು ಕಲಿಯುವಾಗ, ಪ್ರಜ್ಞಾಪೂರ್ವಕವಾಗಿಯಲ್ಲದಿದ್ದರೂ ಅಲ್ಲಿಯ ಕವನಗಳ ಅನುಭವ ಸಾರವನ್ನು ಹೀರಿಬಿಡುತ್ತೇವೆ ಎನ್ನುವುದು ಹಾಗೆ ಮಾಡಿದಾಗ ಅಡಿಗರಂಥ ಶ್ರೇಷ್ಠ ಕವಿಗಳ ಕಾವ್ಯ ಪ್ರತಿಭೆಯ ಕುಲುಮೆಯಿಂದ ಸೊಗಸಾದ ಕಾವ್ಯ ರಚನೆಯಾದರೂ ಅದು ಅಚ್ಚ ಭಾರತೀಯವಾಗಿ ಉಳಿಯಲಾರದು ಎನ್ನುವುದು. ಹೀಗೆ ಆದಾಗ ಅತ್ಯುತ್ತಮ ಪ್ರತಿಭೆಯಿಂದ ಪರಂಪರೆಗೆ ದಕ್ಕಬೇಕಾದದ್ದು ದಕ್ಕದೆ ಅದಕ್ಕೆ ಅನ್ಯಾಯವಾಗುತ್ತದೆ ಎನ್ನುವುದು. ಆದುದರಿಂದಲೇ ನನಗೆ ನವೋದಯ ನವ್ಯಮಾರ್ಗಗಳಿಗಿಂತಲೂ ಬಂಡಾಯ ಸಾಹಿತ್ಯ ಹೆಚ್ಚು ಭಾರತೀಯವಾಗಿ ಕಾಣುತ್ತದೆ ದುರದೃಷ್ಟಕರವೆಂದರೆ ಇಲ್ಲಿನ ಹೆಚ್ಚಿನ ಕವಿಗಳು ನವ್ಯ ಸಾಹಿತ್ಯ ಪ್ರವರ್ತಕರ ಕಾವ್ಯ ರಚನೆಯ ಕೌಶಲವನ್ನು ಮೆಚ್ಚುವವರಾದ್ದರಿಂದ ಆ ಕಾವ್ಯದ ಲೋಪದೋಷಗಳೇ ಇಲ್ಲಿನ ಕಾವ್ಯದಲ್ಲೂ ನುಸುಳಿಬಿಡುತ್ತವೆ ಎನ್ನುವುದು.

ಪ್ರಜ್ಞೆ ಮತ್ತು ಪರಿಸರದ ಕಲ್ಪನೆಯಿರುವ ಜನ ಪರಿಸರದಿಂದಲೇ ಮೂಡಿದ ಬೌದ್ಧಿಕತೆಯನ್ನು ಕಾವ್ಯವಾಗಿಸಬೇಕು. ಪ್ರಜ್ಞೆ, ಪರಿಸರ, ಕಾವ್ಯ ಈ ಮೂರೂ ಒಂದಾದಾಗ ಮಾತ್ರ ಹೆಚ್ಚು ಸಮರ್ಥವಾದ ಕಾವ್ಯ ಮೂಡುತ್ತದೆ. ಓದುಗನ ಬಗ್ಗೆ ಉಪೇಕ್ಷೆಯಿಂದ ತನ್ನ ಬೌದ್ಧಿಕ ಸಾಮಗ್ರಿಯೆಲ್ಲವನ್ನೂ ಕಾವ್ಯಕ್ಕೆ ಆರೋಪಿಸಿ ಸಾಹಿತ್ಯ ರಚನೆ ಮಾಡಿದರೆ ಅದು ಉತ್ತಮ ಸಾಹಿತ್ಯವಾದಾಗಲೂ ಅನಪೇಕ್ಷಣೀಯವಾಗುತ್ತದೆ ಎಂದು ನನ್ನ ಭಾವನೆ. ಈ ಕಾರಣಕ್ಕಾಗಿಯೇ ಹರಿಹರ ತನ್ನ ಎಲ್ಲ ಮಿತಿ ದೌರ್ಬಲ್ಯಗಳನ್ನೊಳಗೊಂಡೂ (ಅಚ್ಚ ಭಾರತೀಯವಾದ ಸಂಪೂರ್ಣಾನಂದದಲ್ಲಿ ಬರೆದು ಕಾವ್ಯವನ್ನು ಜಾಳುಮಾಡುವುದು ಅವುಗಳಲ್ಲೊಂದು) ನನಗೆ ಹೆಚ್ಚು ಹತ್ತಿರದವನಾಗುತ್ತಾನೆ. ಈ ಸಂದರ್ಭದಲ್ಲೇ ಇನ್ನೊಂದು ಮಾತನ್ನು ಹೇಳಿಬಿಡಬೇಕು. ಈ ಶತಮಾನದ ಆದಿಯಲ್ಲಿ ಬರೆದ ಮುದ್ದಣ್ಣನಿಗೆ ಇಂಗ್ಲೀಷ್ ಬರುತ್ತಿರಲಿಲ್ಲ. ಆ ಸಾಹಿತ್ಯದ ವಿವಿಧ ಪ್ರಾಕಾರಗಳ ಸಂಪೂರ್ಣ ತಿಳಿವಳಿಕೆಯೂ ಇರಲಿಲ್ಲ. ಒಂದು ವೇಳೆ ಆತ ಇನ್ನೂ ಮೂರು ನಾಲ್ಕು ದಶಕಗಳು ಬದುಕಿದ್ದು, ನವೋದಯದ ಆರಂಭದ ತರುವಾಯ ಅವನು ಕಾವ್ಯಗಳನ್ನೂ ಬರೆದಿದ್ದರೆ ಅವುಗಳ ಸ್ವರೂಪ ಎಂತಿರುತ್ತಿತ್ತು ಎಂಬುದನ್ನು ಊಹಿಸಿಕೊಂಡರೆ ನನ್ನ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಕುಹಕದಿಂದ ಅವನ ಕಾವ್ಯ ಇನ್ನೂ ಚೆನ್ನಾಗಿರುತ್ತಿತ್ತು ಎಂದು ಹೇಳುವುದು ಸುಲಭ. ಅಂಥ ಮಾತನ್ನು ಕೆಲವರಾದರೂ ಹೇಳುತ್ತಾರೆ ಎಂದು ನಾನು ಬಲ್ಲೆ. ಆದರೆ ಅದು ಕಾವ್ಯಮೀಮಾಂಸೆಯಾಗುವುದಿಲ್ಲ. ಇನ್ನೂ ಒಂದು ಮಾತು: ನಿರಂಕುಶಮತಿಗಳಾಗಿ, ವೈಜ್ಞಾನಿಕ ದೃಷ್ಟಿಯನ್ನು

ಬೆಳಸಿಕೊಳ್ಳಿ ಇತ್ಯಾದಿ ಯೂರೋಪಿನಿಂದ ಕಲಿತು ಮಾತನಾಡುವ ಕವಿಪ್ರಜ್ಞೆಗೆ ಕಲ್ಲಾಗಿದ್ದ ಅಹಲ್ಯೆ ಶ್ರೀರಾಮ ಪಾದಸ್ಪರ್ಶದಿಂದ ಮಾನವರೂಪಿಯಾದಳು ಎನ್ನುವುದರಲ್ಲಿ ಯಾವ ವಿರೋಧಾಭಾಸವೂ ಕಾಣುವುದಿಲ್ಲ. ತನ್ನ ವೈಜ್ಞಾನಿಕ ದೃಷ್ಟಿಯಿಂದ ಅನೇಕ ಅವೈಜ್ಞಾನಿಕ ವಿಷಯಗಳನ್ನೊಳಗೊಂಡ ರಾಮಾಯಣದ ವಸ್ತು ತನ್ನ ಕಾವ್ಯಕ್ಕೆ ಅನಾಧಾರಣೀಯ ಎಂದೂ ಅನ್ನಿಸುವುದಿಲ್ಲ. ಅಂದಮಾತ್ರಕ್ಕೆ ರಾಮಾಯಣ ಭಾರತಗಳನ್ನು ನಾವು ಮರೆತುಬಿಡಬೇಕೆಂದು ನಾನು ಹೇಳುತ್ತಿಲ್ಲ. ಅಭಾರತೀಯವಾದ ಬೌದ್ಧಿಕ ಮೂಸೆಯಲ್ಲಿ ಭಾರತೀಯವಾದ ವಸ್ತುವನ್ನಿಟ್ಟಾಗ ಆಗುವ ಅನಿವಾರ್ಯ ಗೊಂದಲಗಳು, ವಿರೋಧಾಭಾಸಗಳು ಕಾವ್ಯರಚನೆಗೆ ಪೂರಕವಾಗಿರುವುದಿಲ್ಲ ಎಂಬುದು ಹೇಳುವುದಕ್ಕಾಗಿ ಈ ಉದಾಹರಣೆ ನೀಡಿದೆ. ಭಾರತೀಯವೆಂದರೆ ಕಬಂಧನಿಗೆ ಯೋಜನ ಉದ್ದ ಕೈಗಳಿದ್ದವು, ಕಪಿಯೊಂದು ನೂರು ಯೋಜನ ಅಗಲದ ಸಾಗರವನ್ನು ಹಾರಿತು ಎಂಬುದನ್ನು ಹಾಗೇ ಒಪ್ಪಿಕೊಳ್ಳುವುದು ಅಥವ ಚಾರ್ವಾಕದರ್ಶನದಂತೆ ಐಹಿಕ ಭೋಗಕ್ಕೆ ತನ್ನನ್ನು ಪೂರ್ಣವಾಗಿ ತನ್ನನ್ನು ಒಪ್ಪಿಸಿಕೊಳ್ಳುವುದು ಇವು ಎರಡರ ನಡುವಿನ ಸ್ಥಿತಿ ಖಂಡಿತವಾಗಿಯೂ ಭಾರತೀಯವಲ್ಲವೆಂದು ನನ್ನ ಮತ.

ನಾವು ಶ್ರೇಷ್ಠ ಎನ್ನುವ ಕಾದಂಬರಿ. ಕಥೆಗಳು ಈ ಜಾತಿಯವೆ. ಭಾರತೀಪುರದಷ್ಟು ಸುಸಂಬದ್ಧವಾಗಿ ರಚಿತವಾದ ಕಾದಂಬರಿಯನ್ನು ನಾನು ಕನ್ನಡದಲ್ಲಿ ಓದಿಲ್ಲ. ಆದರೆ ಈ ಕಾದಂಬರಿಯನ್ನು ಓದಿದಾಗ (ಈ ಸಮಯದಲ್ಲಿ ಗತಿಸ್ಥಿತಿ, ಬಿರುಕು, ಶಿಕಾರಿ, ದೇಸಾಯಿಯವರ ಕಾದಂಬರಿಗಳನ್ನು ಹೇಳಿಬಿಡಬೇಕು) ಅಥವ ಈ ಲೇಖನ ಬರೆದ ಇನ್ನಾವುದೇ ಕಥೆ ಕಾದಂಬರಿಯನ್ನು ಓದಿದಾಗ ಈತ ಕನ್ನಡದಲ್ಲಿ ಬರೆಯುತ್ತಿದ್ದಾರೆ ಎನ್ನುವುದನ್ನು ಬಿಟ್ಟರೆ ಇವರು ನಿಜವಾಗಿಯೂ ಕನ್ನಡದ ಲೇಖಕರೆ ಎಂದು ಅನುಮಾನವಾಗಿಬಿಡುತ್ತದೆ. ಏಕೆ ಈ ಮಾತು ಹೇಳುತ್ತಿದ್ದೇನೆಂದರೆ ಬೌದ್ಧಿಕ ಪಾತಳಿಯಲ್ಲೇ ಕೆಲಸಮಾಡುವ ಬರಹಗಾರನ ಪ್ರತಿಭೆ ನಮ್ಮ ಸನ್ನಿವೇಶದಲ್ಲಿ ಅಭಾರತೀಯವಾಗಿಬಿಡುತ್ತದೆ. ಅಂದ ಮಾತ್ರಕ್ಕೆ ಬುದ್ಧಿಯ ಮಹತ್ವ ಕಾದಂಬರಿಕಾರನಿಗಿಲ್ಲ ಎಂದೇನೂ ಹೇಳಿದಂತಾಗಲಿಲ್ಲ ಎಂದುಕೊಂಡಿದ್ದೇನೆ. ಅನಂತಮೂರ್ತಿಯವರ, ಚಿತ್ತಾಲರ, ಲಂಕೇಶರ ಸಾಹಿತ್ಯ ಶಕ್ತಿಯ ಬಗ್ಗೆ ಅಪಾರ ಗೌರವವನ್ನಿಟ್ಟುಕೊಂಡಿರುವವನು ನಾನು. ಆದರೆ, ಗುಂಗವ್ವ ಗಂಗಾಮಾಯಿಯನ್ನು ತೇಜಸ್ವಿ ದೇವನೂರರ ಕಥೆಗಳನ್ನು ಒಂದು ಕಡೆ ಭಾರತೀಪುರವನ್ನು (ಅದರ ಜೊತೆಗೆ ಹೆಸರಿಸಿದ ಇನ್ನಾವುವೇ ಕಾದಂಬರಿಯನ್ನು) ನನಗೆ ತುಂಬ ಇಷ್ಟವಾಗಿರುವ (ನನ್ನಲ್ಲಿಯೇ ಒಂದು ವಿರೋಧಾಭಾಸವಿದೆ ಎಂದು ಅರಿವಿದೆ) ಪ್ರಕೃತಿಯನ್ನು ಕ್ಲಿಷ್‌ಜಾಯಿಂಟನ್ನು ಇನ್ನೊಂದು ಕಡೆಯಿಟ್ಟು ಎರಡನ್ನು ಇಂಗ್ಲೀಷಿನಲ್ಲಿ ಓದಿ. ಮೊದಲ ಜೊತೆಯವು ಯಾವ ಭಾಷೆಯಲ್ಲಿ ಓದಿದರೂ ಭಾರತೀಯವೆ. ಕನ್ನಡದ ಕೃತಿಗಳು ಎಂಬುದು ಸ್ಪಷ್ಟವಾಗಬಲ್ಲಷ್ಟು ದೇಶೀಯ. ಎರಡನೆಯವು ಕನ್ನಡದಲ್ಲಿ ಓದಿದಾಗಲೂ ಅಭಾರತೀಯವೆ. ಆರ್.ಕೆ ನಾರಾಯಣರನ್ನು ಇಂಗ್ಲೀಷಿನಲ್ಲಿ ಓದಿದಾಗಲೂ ಅವರ ಕೃತಿಗಳು ಭಾರತೀಯವಾಗಿರುತ್ತವೆ

ತ್ತವೆ. ಇಂಗ್ಲೀಷಿನಲ್ಲಿ ಬರೆಯುತ್ತಿರುವ ನಮ್ಮ ಬರಹಗಾರರು ಇಂಗ್ಲೀಷಿನಲ್ಲಿ ಬರೆಯುವ ಅಗತ್ಯವಿರಲಿಲ್ಲ. ಅವರು ಒಳ್ಳೆಯ ಕೃತಿ ರಚನೆ ಮಾಡಲಿಲ್ಲ ಎನ್ನುವ ಮಾತು ಬೇರೆ.

ಇಷ್ಟು ಹೇಳುವ ಉದ್ದೇಶವೇನೆಂದರೆ, ಇಷ್ಟೊಂದು ಸಾಮರ್ಥ್ಯವಿರುವ ನಮ್ಮ ಕೆಲವು ಬರಹಗಾರರು ಪರಂಪರೆಯ ಮೂಲದಲ್ಲಿರುವ ತುಡಿತವನ್ನು ಆ ಪರಂಪರೆಯ ವಿಮರ್ಶಕ ಪ್ರಜ್ಞೆಯಲ್ಲಿ ಎರಕಹೊಯ್ದು ಸಾಹಿತ್ಯರಚನೆ ಮಾಡಿದ್ದರೆ ನಮ್ಮ ಸಾಹಿತ್ಯ ಎಷ್ಟೊಂದು ಶ್ರೀಮಂತವಾಗಿರುತ್ತಿತ್ತು ಎಂದು ಅರಿಯುವುದು - ಮತ್ತು ಕನ್ನಡದಲ್ಲಿ ಸಾಹಿತ್ಯಸೃಷ್ಟಿ ಏಕೆ ಇದ್ದಕ್ಕಿದಂತೆ ಸೊರಗಿಹೋಯಿತು ಎಂಬುದರ ಕಾರಣಗಳನ್ನು ಅರಸುವುದು.

ಒಂದು ಪಕ್ಷಿಯ ಕಥೆ

ಕ್ರೌಂಚ ಪಕ್ಷಿಯ ಶೋಕ ಬ್ಯಾಡನೊಬ್ಬನ
ಎದೆಯಲ್ಲಿ ಹಾಡಗಟ್ಟಿದಂತೆ
ನನ್ನ ಪಕ್ಷಿಯ ಶೋಕ
ಯಾರ ಎದೆಯ ಹಾಡಾಗುವುದೋ !

* * *

ಕಣ್ಣಿಗೆಟಕುವಂತೆ ಹರಿದ ಹಸಿರು ತೊರೆಯ
ಕವಲೊಡೆದ ಎತ್ತರದ ಹಸಿರು ಅಂಚಲ್ಲಿ
ಜೋಡಿ ಗೋಜನಕ್ಕಿಗಳು ಸಹಜ ಲಲ್ಲೆಯಿಂದ
ಉರಿಯಂಟದ ಲೋಕಗಳ ಹೆಬ್ಬಾಗಿಲಲ್ಲಿ
ಸ್ವಪ್ನ ಸಾಮ್ರಾಜ್ಯಗಳ ಗಡಿದಾಟಿ
ಗಾಜುಗಣ್ಣಿನ ಕನ್ನಡಿಯಲ್ಲಿ ಒಂದರಲ್ಲೊಂದು ಕಾಣುತ್ತ
ರೆಕ್ಕೆಗರಿಗಳ ನೀಲಿಗಾಳಿಯಲ್ಲಿ ಮೈಮರೆತು... ...

ಎಲ್ಲಿಂದ ಬಂತೋ ಕಾಣೆ ಆ ಬಾಣ
ಹೇಗೆ ನಾಟಿತೋ ಕಾಣೆ ಆ ಬಾಣ
ಬಾಣ ನಾಟುವಂತೆ ಆ ಬಾಣ ನಾಟಿ
ಆ ಪಕ್ಷಿಯ ಎದೆಬಗೆದು ಬಿಸಿ ನೆತ್ತರ ಬಸಿದಿತ್ತು

ಬಿ. ಅನಂತಮೂರ್ತಿ 'ನೀಲಿ' ವಿ ಎನ್ ಪುರ ಹಾಸನಜಿಲ್ಲೆ ರಾಯರಕೊಪ್ಪಲು-573130

ಒಬ್ಬೊಂಟಿ ಗೋಜನಕ್ಕಿ ಸಂಗಾತಿಯ
ಜೀವ ಪಕ್ಷಿ ಹಾರಿಹೋದುದ ಕಂಡಂಥವನಾಗಿ
ದಿಕ್ಕುಗಳು ದಿಕ್ಕೆಡುವಂತೆ ಏರಿ ಚೀರಿದಂತೆ
ನೆಲಬಗೆದು ಮುಗಿಲೇರಿ ಅರಸುತ್ತಾ
ಸಾವಿರ ಕಣ್ಣಿನ ಪಕ್ಷಿಯು ಕೇಳಿತು
'ಎಲ್ಲಿ ನನ್ನ ಗೆಳತಿ'?

ಎದೆಹಾಲ ಸುರಿಸಿ ನನ್ನ ಮೈದಡವಿದವಳು
ಮುಂಗೈಯ ಮೇಲೆ ನನ್ನ ಆಡಿಸಿದವಳು
ಮನತುಂಬಿದ ನೀಲಿ ಸೆರಗಿನವಳು
ಕೊರಳ ಹಾಡಿನಲಿ ನನ್ನ ಕರುಳ ಮೀಟಿದವಳು

ಜೀವ ಪಕ್ಷಿಯು ನೆರಳಿಗೆ ಜ್ಯೋತಿಯಾಗಿ
ಹಗಲ ಅಂಗೈಯಲ್ಲಿ ಉರಿವ ದೀಪವಾಯಿತು.

— ಜಿ. ವಿ. ಆನಂದಮೂರ್ತಿ

ಮತ್ತೊಂದು ಗೋವಿನ ಹಾಡು

ಇದ್ದ ಬೆಳಕನು ಬಳಿದು ಮೂಟೆಕಟ್ಟಿದ ಇರುಳು
ಹೊತ್ತೊಯ್ಯುವಾಗ ರವಿ ಹೊತ್ತುರಿದು ಕೆಂಪಾದ
ಕೋಪದಿಂದೊದ್ದ ಬುವಿ ನಿತ್ರಾಣ ಕಾಲಿಂದ
ಎದ್ದಿತ್ತು ಅಲ್ಲಲ್ಲಿ ಕೊಂಚವೇ ಧೂಳು

ಪಕ್ಷಿ ಹಿಮ್ಮೇಳದಲಿ ವಿಜಯ ಕಹಳೆಯು ಮೊಳಗಿ
ಕ್ಷೀಣ ಚಂದ್ರನ ಮೊಗವ ಕವಿದ ಮುಗಿಲು
ಕವಿದ ಕತ್ತಲೆ ರಾಜ ಗೂಬೆ ಬಾವುಲಿ ಪ್ರಜೆ
ಹಸಿದ ಹುಲಿ ತೋಳಗಳೆ ವಂದಿ ಮಾಗಧರು

ಮುಂದೆ ನೆನಪಿಗೆ ಬರದೆ ಹಾದಿತಪ್ಪಿದ ಗೋವು
ದಿಕ್ಕೆಟ್ಟು ಆಸರೆಯ ಆಸೆಯಲಿ ಓಟ
ನೋಟಕೆಟುಕದ ದಾರಿ ಕಲ್ಲುಮುಳ್ಳುಗಳಡ್ಡ
ಹೆತ್ತ ಕರುಳಿನ ವೇಗ ತಗ್ಗಲಿಲ್ಲ

ಸ್ವಾಮಿನಾಥ್, ಗೌನಿಪಲ್ಲಿ, ಶ್ರೀನಿವಾಸಪುರ ತಾ, ಕೋಲಾರ ಜಿಲ್ಲೆ-563135

ಮುಂಜಾವು ಮನೆಬಿಟ್ಟು ಸಂಜೆಯಲಿ ಹಿಂದಿರುಗಿ
ಎದುರು ನೋಡುವ ಕರುವ ಸಂತೈಸಿ ಮೈದಡವಿ
ಮೊಲೆಯ ಹಾಲನ್ನುಣಿಸಿ ಮುದ್ದಿಸಿ ಮೈನೆಕ್ಕಿ
ತೃಪ್ತಿಯಲಿ ಮಲಗುವುದು ದಿನದ ಪರಿಪಾಠ

ಇಂದು ಕಂದನ ಗತಿ ? ಯಾರುಂಟು ಗಮನಿಸಲು
ಅಳುವ ಕಣ್ಣೊರೆಸಲು ಅಪ್ಪಿ ಮುದ್ದಿಸಲು
ದುಗುಡ ನದಿಯೊಳವ ಸುಳಿಯು ಒತ್ತಡದಲ್ಲಿ
ತೇಲುತ್ತ ಮುಳುಗುತ್ತ ನಡೆದಿತ್ತು ಪಯಣ

* * *

ಪಕ್ಕ ಬೆಟ್ಟದ ಕಟ್ಟೆ ಜಾರಿದರೆ ಪಾತಾಳ
ನಡುವೆ ಕಷ್ಟದ ಹಾದಿ ಮುಂದೊಂದು ಕಪ್ಪುಗುಹೆ
ಬಂಡೆ ಮೇಲಿಂದಿಣುಕಿ ಕಾಡ ಮೂಲೆಗಳಿಂದ
ಬರುವ ಮೃಗಗಳ ಕೊಂದು ಕೊಬ್ಬಿತ್ತು ಹುಲಿಯೊಂದು

ಮುಂದೆ ತಪ್ಪಿದ ಗೋವ ಕಂಡು ಗಹಗಹಿಸಿತ್ತು
ಮತ್ತೆಲ್ಲಿ ಹೋದೀತು ನನ್ನ ಈ ತುತ್ತೊಂದು
ಅಚ್ಚ ಬಿಳುಪಿನ ಬಾಲ ಹೊಳೆವ ಮಿಂಚಿನ ಕಣ್ಣು
ನೆನಪಲ್ಲೇ ಓಡಿತ್ತು ಆ ಆಕಳು

ಇದ್ದಕಿದ್ದಂತೆ ಅಡ್ಡಗಟ್ಟಿತು ಹುಲಿಯು
ಒಡಲಲ್ಲಿ ಛಳಿ ಹತ್ತಿ ನಡುಗಿತ್ತು ಗೋವು
ಬೇಡ ಹುಲಿರಾಯನೇ ಬೇಡಿಕೊಳ್ಳುವೆ ನಿನ್ನ
ಬೀದಿ ಪಾಲಾಗುವುದು ನನ್ನ ಕಂದ

ಗಂಡಬಲಿಯಾದ ಕಸಾಯಿಖಾನೆಯೊಂದಕ್ಕೆ
ವಿಧಿಯೆಲ್ಲ ಜೀವಿಸಿದೆ ಕಂದನೇಳಿಗೆಗೆ
ಸುತ್ತಜ್ವಾಲೆಯ ಮಧ್ಯೆ ಸತ್ತು ಬದುಕಿದೆ ಹೇಗೋ
ಬಿಟ್ಟುಬಿಡು ಮತ್ತೆ ಬರಲಾರೆನಿತ್ತ

ಅಸಹಾಯಕಳು ನಾನು ಒಂಟಿ ಹೆಣ್ಣು
ದುಡಿದು ಸಲಹುವೆ ಹೇಗೋ ಕಂದನನ್ನು
ನಿನಗೂ ಇರಬೇಕಲ್ಲ ಅಕ್ಕ-ತಂಗಿಯರು
ತಿಳಿದುಕೋ ನನ್ನನ್ನು ಅವರಂತೆಯೇ ಎಂದು

ಬೇಡಿತ್ತು ವ್ಯಾಘ್ರನಲಿ ಹಚ್ಚ ದೈನ್ಯದಧ್ವನಿಂದಿ
ತುಂಬಿಮನದಗಲ ಬದುಕುವಿಚ್ಛೆ
ಹರಿದ ಕಣ್ಣೀರಿಗೆ ಬೆಟ್ಟ ಕರಗಿತ್ತೇನೊ
ಚಲಿಸಲಿಲ್ಲ ಹುಲಿ ಆದರ ಬೇಡಿಕೆಗೆ

ತಪ್ಪು ನಿನ್ನದೇ ಗುಂಪುಬಿಟ್ಟೇಕೆ ಬಂದೆ
ಆದರಲ್ಲೂ ಕತ್ತಲಲಿ ಕೊಬ್ಬೆಷ್ಟು ನಿನಗೆ
ನನಗಿಲ್ಲಾ ಕರುಣೆ ಶಾಪದಾದಿಗಿಲು
ಹಸಿದ ಜಠರದ ಜ್ವಾಲೆ ಎಲ್ಲಕೂಮಿಗಿಲು

ಸಿಗುವುದೇ ಅಪರೂಪ ಒಂಟಿ ಬೇಟೆ
ಅದಕೆ ಒಗ್ಗರಣೆ ಈ ಅಳುವುಬೇರೆ
ಬಿಡಲಾರೆ ನಿನ್ನನ್ನು ಕರಗಿ ಕಣ್ಣೀರಿಗೆ
ಬಾಯುಮುಚ್ಚಿ ನಮಿಸಿಕೋ ನಿನ್ನ ದೈವಕ್ಕೆ

o o o

ವ್ಯಾಘ್ರಕ್ರೌರ್ಯವ ಕಂಡು ಹೆದರಿ ಓಡಿತ್ತಿರುಳು
ಆರ್ತನಾದವ ಕೇಳಿ ಕಾಡೆಲ್ಲ ಸ್ತಬ್ಧ
ಹಗಲು ಮೇಯಲು ಬಂದ ಮಿಕ್ಕ ದನಗಳ ಮುಂದೆ
ಮೇದು ಹಿಂತಿರುಗಿತ್ತು ಎಂದಿನಂತೆ.

— ಸ್ವಾಮಿನಾಥ್

ಮನಸೊಳಗಿನ ಕನಸು

ಸಿಂಗಾರ ಧಿರಿಸಿನಲಿ
ವಾಲುತ್ತ ಬಳುಕುತ್ತ
ಊರ ಮುಂದಿನ ತೇರು
ನನ್ನ ಅಟ್ಟಿಯ ಮುಂದೆ
ಹೊಸಲ ತಿದ್ದಿದ ರಂಗೋಲಿ
ಮೆಟ್ಟಿ ಹರಿದೀತೆ ?

ನನ್ನ ಕೇರಿಯ ಮರದ
ನೆರಳಿನಲಿ ಅರಗಳಿಗೆ
ದವನ ಕಡಿ, ಹೂಎಸಳ
ಉದುರಿ ಚೆಲ್ಲುತ್ತ
ತಡಿಕೆ ಬಾಗಿಲ ಹಸಿರ
ತೋರಣವ ಬೆಸೆದು
ಕುಲುಕಾಡಿ ನಕ್ಕೀತೆ ?

ನಮ್ಮಪ್ಪ ದ್ಯಾವರೆ
ನೀ ಕುಳಿತ ಗುಡಿ
ಮಂಟಪದ ಮೇಲ್ಹಾಸು
ಅಂಟಿ ಕಟ್ಟಿದ
ಕಲ್ಲು ಮಣ್ಣಿನ ಗಾರೆ
ನನ್ನವರ ಬೆವರಲ್ಲೇ ತೊಯ್ದು
ಅಭಿಷೇಕ ಗೊಂಡದ್ದು
ತೇರ ಎಳೆಯುವ ಪುಲಕದ
ಕನಸನ್ನೆ ಹೊತ್ತು
ಸವೆದು ಉರುಳಿತ್ತು
ನನ್ನೆಲ್ಲ ತಲೆ ಮಾರು
ಮುಂದಿಗಾದರು ಆ ಕನಸು
ನನಸಾಗಿ ಬೆಸೆದೀತೆ ?

—ಉತ್ತನೂರು ರಾಜಮ್ಮ ವಿ. ಶೆಟ್ಟಿ

ಉತ್ತನೂರು ರಾಜಮ್ಮ ವಿ. ಶೆಟ್ಟಿ, W/o ವಿಶ್ವನಾಥ ಶೆಟ್ಟಿ, ವಕೀಲರು, ಚಿಂತಾಮಣಿ, ಕೋಲಾರಜಿಲ್ಲೆ

ನನ್ನ ಪ್ರೀತಿಯ ಹಿರೋಶಿಮಾ —ಒಂದು ಟಿಪ್ಪಣಿ

—ಬಂದಗದ್ದೆ ರಾಧಾಕೃಷ್ಣ

೧೯೮೩ರ ಅಕ್ಟೋಬರ್ ರಾತ್ರಿ ಚಳಿಯಲ್ಲಿ ಬೆಚ್ಚಗೆ ಶಾಲು ಹೊದ್ದು ಹೆಗ್ಗೋಡಿನ ಶಿವರಾಮಕಾರಂತ ರಂಗಮಂದಿರದಲ್ಲಿಕೂತು ಅಲೆನ್‌ರೆನೈ (ALAIN RENAIS) ನಿರ್ಮಿಸಿದ HIROSHIMA MON AMOVR ಎಂಬ ಚಲನಚಿತ್ರ ನೋಡಿ ತಲ್ಲಣಗೊಂಡೆ. ಇಂಗ್ಲೀಷ್, ಫ್ರೆಂಚ್ ಮತ್ತು ಜಪಾನಿ ಭಾಷೆಗಳಲ್ಲಿ ಸಂಭಾಷಣೆ ಇದ್ದುದರಿಂದ ಪಾತ್ರಗಳು ಆಡುವ ಎಲ್ಲಾ ಮಾತುಗಳೂ ಅರ್ಥವಾಗಲಿಲ್ಲ. ಕೇವಲ ನೋಡಿದ್ದರಿಂದಲೇ ಮನಸ್ಸಿನ ಆಳವನ್ನು ಆ ಚಿತ್ರ ಕೆಣಕಿತು, ಮಾರ್ಗೊರಿತಾ ದುರಾಸ್ ಬರೆದ ಚಿತ್ರ ಲೇಖನವನ್ನು ಕನ್ನಡಕ್ಕೆ ಅನುವಾದಿಸಿದ ಕೆ.ವಿ. ಸುಬ್ಬಣ್ಣ "ಮೊದಲ ಮಾತುಗಳಲ್ಲಿ" ಹೀಗೆ ಬರೆಯುತ್ತಾರೆ.

"೧೯೩೯ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ಮುಂದೆ ಈ ಹೋರಾಟದಲ್ಲಿ ಅನಿರೀಕ್ಷಿತವಾಗಿ ಕೂಡಿಕೊಂಡ ಅಮೇರಿಕಾ ೧೯೪೫ರಲ್ಲಿ ಹಿರೋಶಿಮಾ ನಾಗಸಾಕಿಗಳ ಮೇಲೆ ಅಣುಬಾಂಬ್ ಹಾಕಿ ಜಪಾನ್ ಶರಣಾಗುವಂತೆ ಮಾಡಿತು, ಆ ಸಮಯಕ್ಕೆ ಹಿರೋಶಿಮಾ ಇನ್ನು ಯಾವತ್ತೂ ಹುಟ್ಟಲಾರದೆನ್ನುವಂತೆ ನೆಲಮಟ್ಟ ನಾಶಗೊಂಡಿತ್ತು. ಆದರೆ ಅದು ಪುನಃ ಹುಟ್ಟದಿರಲಿಲ್ಲ. (ವಿನಾಶ ಪ್ರಲಯ ನಡೆದ ಮರುದಿನವೇ ಮಣ್ಣಿನ ಆಳದಿಂದ ಹುಳುಗಳು ಉಮ್ಮಿ ಉಮ್ಮಿ ಮೇಲಕ್ಕೆ ಬರತೊಡಗಿದ್ದವು. ಹದಿನಾಲ್ಕನೆಯ ದಿನಕ್ಕಾಗಲೇ ಆ ತನಕ ಯಾವತ್ತೂ ಕಂಡು ಕೇಳದ ಸೊಕ್ಕು ಸೊಮ್ಮುಗಳಿಂದ ಬೃಹದಾಕಾರದ ಸುಂದರ ಹೂವುಗಳು ನೆಲವನ್ನು ಸೀಳಿ ಮೇಲಕ್ಕೆ ನೆಗೆದು ನಿಂತಿದ್ದವು. ಮತ್ತೆರಡು ದಿನಗಳಲ್ಲಿ ಹಿರೋಶಿಮಾ ಹೂವಿನ ಭಾದರವನ್ನು ಹೊದ್ದುಕೊಂಡಿತು.) ಕೇವಲ ಹದಿನೈದು ವರ್ಷಗಳಲ್ಲಿ ಹೊಸ ಹಿರೋಶಿಮಾ ನಿರ್ಮಾಣಗೊಂಡು ನಿಂತಿತು. ಜರ್ಮನ್ ಸೈನಿಕನ ಜತೆ ಫ್ರೆಂಚ್ ನೆಲೆಯಲ್ಲಿ ಹುಟ್ಟಿ ಯುದ್ಧದ ಬೆಂಕಿಯಲ್ಲಿ ಉರಿದು ಹೋದ ಆಕೆಯ ಪ್ರೇಮ, ಈಗ ಜಪಾನ್‌ನಲ್ಲಿ ಈ ವಾಸ್ತುಶಿಲ್ಪಿಯ ಸಾನಿಧ್ಯದಲ್ಲಿ ಭಸ್ಮ ಕೇವಲದಿಂದ ಉದ್ಭವಗೊಂಡು ನಿಂತ ಹಾಗೆ ನಾಶಶೇಷಗಳ ಭಸ್ಮರಾಶಿಯೊಳಗಿಂದ ಹಿರೋಶಿಮಾ ಮತ್ತೆ ತಲೆ ಎತ್ತಿಕೊಂಡಿತು. ಇದೀಗ ಕಾಂಕ್ರೀ

ಬಂದಗದ್ದೆ ರಾಧಾಕೃಷ್ಣ, ಬಂದಗದ್ದೆ, ಕೆಳದಿ (ಅಂಚೆ), ಸಾಗರ (ತಾ) ಶಿವಮೊಗ್ಗ ಜಿಲ್ಲೆ

ಟಿನ ವಜ್ರಕವಚ ತೊಟ್ಟು ಅಜರಾಮರವೆಂಬಂತೆ ವೈಭವದಿಂದ ಸೊಗೆಸಿ ನಿಂತಿರುವ ಯಕ್ಷನಗರಿ, ಆಗಿನ ಹಿಂಸೆ, ವಿನಾಶ, ಯಾತನೆಗಳೆಲ್ಲ ಈಗ ಇಲ್ಲಿ ಮ್ಯೂಜಿಯಮ್‌ನ ಪ್ರದರ್ಶಕ ವಸ್ತುಗಳು".

ವಿಧ ವಿಧ ಬೆಳೆಗಳು ಬೆಳೆಯುತ್ತಿರುವ ಈ ನೆಲದಲ್ಲಿ ಬದುಕುತ್ತಿರುವ ಎಲ್ಲರ ಅಹಂಕಾರ, ಅಟ್ಟಹಾಸ, ಅಹಂಕಾರಗಳನ್ನೂ, ಐಶ್ವರ್ಯಗಳನ್ನೂ. ಅಣುಬಾಂಬ್ ಬೂದಿ ಮಾಡಬಲ್ಲದು. ನಮ್ಮ ಅನುಕೂಲಗಳಿಗೆ ನಿರ್ಮಿಸಿಕೊಂಡ ಕಟ್ಟಡ, ವಾಹನಗಳು, ಗಿಡ ಮರ, ಬಳ್ಳಿಗಳು ಬೂದಿಯಾಗುವ ಕಲ್ಪನೆ ನನ್ನನ್ನೂ ನಡುಗಿಸಿತು. ಕೇವಲ ೧೫ ವರ್ಷಗಳಲ್ಲಿ ಹೊಸ ಹಿರೋಶಿಮಾ ನಿರ್ಮಾಣಗೊಂಡ ಸಂಗತಿ ತಲ್ಲಣವನ್ನು ಕಮ್ಮಿ ಮಾಡಿ, ನೆಲದ ಗರ್ಭದ ರಹಸ್ಯದತ್ತ ಯೋಚಿಸುವಂತೆ ಮಾಡಿತು,

ಅಣು ವಿಕರಣವೋ ಅಥವಾ ಬೆವರಿನ ಹನಿಗಳೋ ಅಥವಾ ಕೆಸರಿನಲ್ಲಿ ಉರುಳಾಡಿ ಎದ್ದ ದೇಹಗಳೋ-ಏನೆಂಬುದೇ ತಿಳಿಯದಂತೆ, ಕೊನೆಗೆ ಗಂಡು-ಹೆಣ್ಣು ದೇಹಗಳು ಮೈಥುನದಲ್ಲಿ ತೊಡಗಿದಂತೆ ತೋರುವ ದೃಶ್ಯದಿಂದ ಪ್ರಾರಂಭವಾಗುವ ಈ ಚಿತ್ರದಲ್ಲಿ "ಕಥೆ" ಇಲ್ಲ. ಒಟ್ಟಿಗಿರಲಿಕ್ಕೂ ಆಗದೆ, ಅಗಲಲಿಕ್ಕೂ ಆಗದ ಸಂದಿಗ್ಧ ಸ್ಥಿತಿಯಲ್ಲಿ ವಿದಾಯ ಹೇಳುವುದರಲ್ಲಿ ಚಿತ್ರ ಮುಕ್ತಾಯವಾಗುತ್ತದೆ.

ಚಿತ್ರದ ನಡುವೆ ಒಂದಷ್ಟು ಮಕ್ಕಳು ಪೋಸ್ಟರುಗಳನ್ನೂ ಹಿಡಿದುಕೊಂಡು ನಡೆದಿರುವ ದೃಶ್ಯ. ಆಟಂಬಾಂಬ್ ಮತ್ತು ಹೈಡ್ರೋಜನ್ ಬಾಂಬ್‌ಗಳ ಶಕ್ತಿಗಳ ಬಗೆಗೆ ಆ ಪೋಸ್ಟರುಗಳು ಹೇಳುತ್ತ ಪ್ರಪಂಚ ನಾಶವಾಗುವುದನ್ನೂ ಸಾರುತ್ತದೆ. ಪೋಸ್ಟರುಗಳ ಎರಡನೇ ಸರಣಿಯಲ್ಲಿ ಮೊದಲ ಪೋಸ್ಟರ್ "ಈ ಅಸಾಧಾರಣ ಸಾಧನೆ ಮನುಷ್ಯನ ವೈಜ್ಞಾನಿಕ ತಿಳುವಿಗೆ ಸಾಕ್ಷಿ ನಿಲ್ಲುತ್ತದೆ" ಎಂದು ಹೇಳಿದರೆ ಎರಡನೇ ಪೋಸ್ಟರು "ಆದರೆ ಮನುಷ್ಯನ ರಾಜಕೀಯ ತಿಳಿವು ಆತನ ವೈಜ್ಞಾನಿಕ-ತಿಳಿವಿಗಿಂತ ನೂರುಪಾಲು ಕಡಿಮೆ ಎನ್ನುವುದು ವಿಷಾದದ ಸಂಗತಿ" ಎಂದು ತಿಳಿಸುತ್ತದೆ. ಮೂರನೇ ಪೋಸ್ಟರು ಹೇಳುವ ಮಾತನ್ನು ಗಮನಿಸಿ. ಆದ್ದರಿಂದ ಮನುಷ್ಯನನ್ನು ಕಂಡು ಮೆಚ್ಚುವುದು ಕಷ್ಟ ಮನುಷ್ಯ ಕುಲಕ್ಕೇ ಅಪಮಾನ ಮಾಡುವ ಈ ಪೋಸ್ಟರಿನ ಸೃಷ್ಟಿಗೆ ಮನುಷ್ಯನೇ ಕಾರಣನಾದ.

ಜಾತಿ, ವರ್ಗ, ಜನಾಂಗ, ಧರ್ಮ ಮತ್ತು ದೇಶಗಳು ಅಂದರೆ ಭಾರತೀಯ. ಜಪಾನಿ, ಆಂಗ್ಲರು, ಚೀನಿ, ರಷಿಯನ್ ಇತ್ಯಾದಿ ಕಲ್ಪನೆಗಳನ್ನು ಕ್ಷಣಕಾಲ ಆಚೆಗೆ ನೂಕಿ ಖಾಲಿ ನಿಂತಿರುವ ನೆಲದ ಬಗೆಗೆ, ಮನುಷ್ಯನ ಕ್ರೂರತೆಯ ಬಗೆಗೆ ಈ ಚಿತ್ರ ಯೋಚಿಸಲು ತೊಡಗಿಸಿತು. ಕರುಳನ್ನೂ ನಡುಗಿಸಿತು.

ಬದುಕನ್ನು ನಾಶಗೊಳಿಸುವುದು, ಮತ್ತು ಪ್ರೀತಿಸುವುದರ ನಡುವೆ ಕಾಮ, ಸ್ನೇಹ, ಪ್ರೀತಿ ಪ್ರೇಮಗಳು ಮಿಂಚುತ್ತ, ಮಾಯವಾಗುತ್ತ ವಿಚಿತ್ರ ಅನುಭವವನ್ನು ಕೊಟ್ಟಿತು.

ಗಡಿ

ಇಹದಸಾಲ ಸಲಿಸಲೆಂದು
ಕಣ್ತೆರೆವ ಬಾಳಿಗೆಲ್ಲ
ಮಣ್ಣ ಬಾಗಿಲ ಗಡಿ,
ಈ ನಡುವೆ ಇಂದಿನಿರುಳ
ಬೆದೆಗೆ ಅರಳುವ ನಾಳೆಗಳು.
ಉದ್ದುದ್ದ ನೆರಳು ಹಳಿಗೆ ನೇಸರನ
ಲಕ್ಷಣರೇಖೆ ; ತಿಳಿಗೊಳದೆ
ತರಂಗಗಳಲಿ ಕವಲ ಸೀಳಿದ ನೀರಹಾದಿ
ದಡಕೆ ತಲೆಗಟ್ಟಿಸಿ ಅಲೆಹೆಡೆ.
ಮನಸು ಮುನಿಸಪರೆ ಕಳಚಿ
ಪೊರೆ ಏಕ್ಯ, ನಗೆಯು ನಡೆ
ಅಪರ ದೆಸೆಯು ಹೇಮ ಕುಂಭಗಳಲಿ
ಹೊನ್ನೀರಿ ಸೋಕುಳಿ
ಈಗ ಮುಗಿದ ನೋಟ
ಇಳಿ ಸಂಜೆಗೆ ತೂಗಿಟ್ಟ
ಲಾಂದ್ರಗಳಲಿ ನೆರಳು ಬೆಳಕಿನ
ಜೀಕುಯ್ಯಾಲೆ ಶ್ವೇತ ಛತ್ರದಡಿ
ಎರಡು ಕಾಲ ನಿಲ್ಲುವ
ಚೆಲುವಿನಾವುಟ
ವಸ್ತ್ರಷ್ಠದ ನಿಷ್ಟೆದುತೆ-ಕೊನೆಗೆ
ಮಣ್ಣಹುದು ಎಂಟು ಗೇಣಿನ ದೇಹ
ಬಾನೆತ್ತರಕೂ ನಿಲ್ಲುವುದುತ್ತರವಾಗಿ
ಒಲವಿನ ಬಾವುಟ. ಪಂಜರದ ಗಡಿಯಿಂದ
ಹಕ್ಕಿಗೀಗ ಬಿಡುಗಡೆಯು ಸಡಗರ
ಅಸೀಮ ದಂಬರದಲಿ
ಚಿಕ್ಕ ಮಿಂಚಿನ ಗೋಪುರ.

—ಎಸ್. ಎಸ್. ಪ್ರಸಾದ

ಎಸ್. ಎನ್. ಪ್ರಸಾದ್, ವಿಜಯಾ ಬ್ಯಾಂಕ್, ಚನ್ನಪಟ್ಟಣ, ಬೆಂಗಳೂರು ಜಿಲ್ಲೆ.

ಸಿಂಹಾವಲೋಕನ

ತಾಯಿಗರ್ಭಸ್ಥ ಬದುಕಿನಾಚೆ
ಹೊತ್ತ ವಂಶಜರ ಗುಣ
ದೋಷಗಳ ಮೂಟೆ
ಹರೆದು ಹಂಚಿಹೋಗಿದ್ದ
ಅವ್ವ ಅಪ್ಪರ ರಕ್ತ ಮಾಂಸಗಳಲ್ಲಿ.
ಈಶ್ವರ ಮೈಥುನದ ಮುತ್ತಿಗೆಯಲ್ಲಿ
ಸಂಲಗ್ನಗೊಂಡು ಸೇರಿ ಗರ್ಭಾಶಯ
ದಾಶ್ರಯದಲ್ಲಿ ಎರಡು ಒಂದಾಗಿ
ಹನಿ ಹರಳುಗಟ್ಟಿ ಮುತ್ತಾಗಿ.
ದಿನಗಳೆದಂತೆ ಭ್ರೂಣ
ವಂಶವಾಹಿನಿಯ ವಾಹಕವಾಗಿ,
ಅವ್ವನಂಗಾಂಗದಿಂದ ಜೀವರಸ
ಹೀರುತ್ತ ಪೂರ್ಣ ಕಾಯದ ಕಾಯಾಗಿ
ನವಮಾಸಗಳ ಮಜಲನ್ನೇರುತ್ತ;
ಗರ್ಭಸ್ಥ ಬದುಕಿನ ಪರಿಧಿಯ ಹರಿದು
ಧರೆಗಿಳಿದಿದ್ದೇನೆ.
ಉಚ್ಛ್ವಾಸ ನಿಶ್ವಾಸಗಳ ಹೆಜ್ಜೆಯೂರುತ್ತ.
ಕ್ಷಣಕ್ಷಣಕ್ಕೂ ಕಾಲನೆಣಿಕೆ
ಎದೆಬಡಿತಕ್ಕೆ ಸಮ.
ಒಬ್ಬಂಟಿ ಪಯಣಿಗ ಸಾಗಿದ್ದೇನೆ
ಆಯುಷ್ಯರೇಖೆಗುಂಟ
ವರ್ತಮಾನದಂಗಳದಲ್ಲಿ.
ಏರುಇಳುವಿನ ಮುಳ್ಳುಕಲ್ಲಿನ
ಮೂರು ದಶಕದ ಹಾದಿ
ಸವೆಸಿದ್ದೇನಾದರೂ....
ಎಲ್ಲಿಯೂ ಉಳಿಯಲಿಲ್ಲ ನನ್ನ
ಗತಿ ಬದುಕಿನ ಚೊಕ್ಕ ಚಿಕ್ಕಗುರುತು;
ಒಂದು ಮಗು
ಮತ್ತು ಈ ಕವನದ ಹೊರತು!

ಅಳಗುಂಡಿ ಅಂದಾನಯ್ಯ.

ಅಳಗುಂಡಿ ಅಂದಾನಯ್ಯ, ಕಾರ್ಯ ನಿರೀಕ್ಷಕರು, ನಗರಸಭಾ ಕಾರ್ಯಾಲಯ, ದಾಂಡೇಲಿ
ಕ.) 581325.

ಪ್ರೇಮ ಮತ್ತು ದುಃಖ

ಬಣ್ಣದ ಸಂಜೆಯನ್ನು
ನೋಡುತ್ತಾ ನಿಂತಿದ್ದೆ-
ನೋಡುತ್ತಿರುವಂತೆಯೆ
ಸಿಡಿಲ ಚೂರೊಂದು
ಉರಿದು ಕಪ್ಪಾಯಿತು.

ಮೊರೆಯುವ ಕಡಲನ್ನು
ನೋಡುತ್ತಾ ನಿಂತಿದ್ದೆ-
ನೋಡುತ್ತಿರುವಂತೆಯೆ
ತತ್ತರಿಸುವ ಅಲೆಯೊಂದು
ಎತ್ತರಕೆ ನೆಗೆದು ಕೆಳಗೆ ಬಿತ್ತು.

ಹಸಿರು ಮರವನ್ನು
ನೊಡುತ್ತಾ ನಿಂತಿದ್ದೆ-
ನೋಡುತ್ತಿರುವಂತೆಯೆ
ಒಂದರ ಹಿಂದೊಂದು
ಹಳದಿ ಎಲೆ ಉದುರಿ ನೆಲ ತಬ್ಬಿತು.

ಹಸಿ ಮಣ್ಣಿನಮೇಲೆ
ನಡೆದು ಹೋಗುತ್ತಿದ್ದೆ-
ಹೋಗುತ್ತಿರುವಂತೆಯೆ
ಮುಳ್ಳೊಂದು ಚುಚ್ಚಿ
ಕಡೆದು ನಿಲ್ಲಿಸಿತು.

ಇಡಿಯಾಗಿ ಸೂರ್ಯನಿಗೆ
ಮೈಯೊಡ್ಡಿ ನಿಂತಿದ್ದೆ-
ನೋಡುತ್ತಿರುವಂತೆಯೆ
ಮೂಗಿನ ಮೇಲೊಂದು
ಹನಿಉರುಳಿ ಒದ್ದೆಯಾಯಿತು.

ಬಣ್ಣದ ಸಂಜೆ
ಉಕ್ಕುವ ಕಡಲ

ಸವಿತಾ ನಾಗಭೂಷಣ, W/o. ನಾಗಭೂಷಣ ಡಿ.ಎಸ್, ಆಕಾಶವಾಣಿ, ಮಂಗಳೂರು-4.

ಉರಿಯುವ ಸೂರ್ಯ
ಮಣ್ಣು, ಮರ ಎಲ್ಲಾ
ಕಣ್ಣೊಳಗೆ ಹೂತು
ಯೌವ್ವನ ಮಾತಾಡಿತು
ಪ್ರೇಮವೆಂದು ಕರೆಯಿತು.

2

ಆಕಾಶವ ಸೀಳಿದ ಸಿಡಿಲು
ನೆಲಕಚ್ಚಿದ ಅಲೆ, ಎಲೆ
ಚುಚ್ಚಿ ನಿಲ್ಲಿಸಿದ ಮುಳ್ಳು
ಸಿಳ್ಳು ಹೊಡೆದು ಹಣೆಯ ಮೇಲೆ
ಬೆವರ ಪೋಣಿಸಿತು.

ಸೂರ್ಯ, ಕಡಲು, ಸಂಜೆ,
ಮರ, ಮಣ್ಣು ಎಲ್ಲಾ
ಕಣ್ಣೊಳಗೇ ಹಣ್ಣಾಯಿತು
ಮುಪ್ಪು ಅದನ್ನು
ದುಃಖವೆಂದು ಬರೆಯಿತು.

— ಸವಿತಾ ನಾಗಭೂಷಣ.

ವರ್ತಮಾನ

ಕಣ್ಣ ಮುಂದೆ ಸುಳಿದು ನಲಿದು ಹಾರಿತೊಂದು ಜೇನ್ನೊಣ
ಮರಗಿಡಗಳ ಹಸಿರು ಮುಟ್ಟಿ ದಿಬ್ಬ ಕಣಿವೆ ಹಾರಿಜಾರಿ
ಬೆನ್ನಟ್ಟದೆ ಮನಸ್ಸು, ರೆಕ್ಕೆ ಕಳಚಿ ಮಾಟಗಾತಿ
ಕೂಡಿ ಕಟ್ಟಿರುವ ಸಾಲು ಹುತ್ತ ಕೇಳುತ್ತಿದೆ ಜೇನು
ಹೆಡೆ ಬಿಚ್ಚಿ ಬುಸುಗುಟ್ಟಿ ಕ್ರೂರ ನಾಗರ ಕಾಯುತ್ತಿದೆ
ಹುಡುಕುತ್ತ ಬಂದು ಬಳಲಿದ ಕೈಯನ್ನು

ಆರಿರದ ಚಿಮಣಿಹೊಗೆ, ಕಾವಾಲೆ ಬಡಿದ ಬಾನು
ಮಂಜುಗತ್ತಲನ್ನೆಳೆವ ಕಳ್ಳ ಹುಣ್ಣಿನ ಕಾಲು

ಆರ್. ವಿಜಯರಾಘವನ್, ಮೇನೇಜರ್, ಕೋಲಾರ ಗ್ರಾಮೀಣ ಬ್ಯಾಂಕ್,
... 563130, ಮಾಲೂರು, ಕೋಲಾರ

ಇದು ಬೆಳಗು ಇದೇ ಬೆಳಗು
ತೆರೆದ ಕಿಟಕಿ ಸರಳು ಸವರಿ
ಒಳಗೆ ಬಿದ್ದ ವರ್ತಮಾನ
ಪತ್ರಿಕೆಯು ತುಂಬ ಗಿಡವ ಎಷ್ಟೊ ಜನರ ಕೊಂದ ಕೊಲೆ
ನನ್ನ ಕೈಗೆ ಬಂದಿದೆ ಕೆಂಪು ಚೂರಿ
ಬಚ್ಚಲೊಲೆ ಹೊತ್ತಿಸಿದ ಬೆಂಕಿಕಡ್ಡಿ

o o

ಯಾರೂ ಬಾಗಿಲಿಗೆ ಬರದೆ ಬಚಾವಾದೆ ನಾನು
ಇದಕ್ಕಿನ್ನೂ ಸೂತಕದ ಸ್ನಾನ ಮೀಯಬೇಕು
ಎಡೆಯಿಟ್ಟ ವಡೆ ಸಾಸು ಕಾಫಿಯು ನೆಕ್ಕ
ನಿತ್ಯ[illegible]ದನುಷ್ಠಾನ ತೇಯಬೇಕು.

ಸಾಕೆನಗೆ ಈ ಹಾಳು ವರ್ತಮಾನ-ಪೇಪರು
ಬಿಡವೆಂದುಬಿಟ್ಟೆ ನಾಳೆಯಿಂದಲೆ ನಮಗೆ
ಇದರ ಮಿದುಳು ಕೆಲಸವ ಲದ್ದಿ ಸುದ್ದಿ

2

ಪಾಳಿಗಳಿಗಾಗಿ ಉರಿದ ಚಿಮಣಿಯ ಹೊಗೆ
ಕಾಮಾಲೆಯಲಿ ದಣಿದ ಬಾಸು
ಸಂಜೆಗತ್ತಲಲ್ಲೆಳೆವ ಸೋತು ಕೀಳುವ ಕಾಲು
ಇದು ಇರುಳು ವೈಗೆ ಸುದ್ದಿಯ ಮರುಳು

3

ಹೊರಗೆ ಬೆಳಗು ಕಣ್ತೆರೆಯುತ್ತಿರುವಾಗ
ರಪ್ಪನೆ ಕಿಟಕಿಯ ಸವರಿ ಮೈಮುರಿದು
ಒಳಗೆ ಬಿತ್ತು ವರ್ತಮಾನ ಪೇಪರು
ಹುಡುಗನ ಮರೆವಿನ ದುರ್ದಾನ
ಹಾಸಿಗೆಯಿಂದೆದ್ದು ಅದನು ಕೈಗೆತ್ತಿಕೊಂಡೆ.

ಆರ್. ವಿಜಯರಾಘವನ್

ಕನಸಿಗೊಂದು ಕಣ್ಣು

ಸತ್ಯಸಂಧನ ಸಾವಿನ ಸುತ್ತ-ಮುತ್ತ...

ನನ್ನ ಪ್ರೀತಿಯ ಮಹಾನಗರ ಕಲ್ಕತ್ತೆಯ ಬಗ್ಗೆ ಬರೆಯಲು ನಿಂತಲ್ಲಿ ಕೂತಲ್ಲಿ ಯೋಚಿಸುತ್ತಿದ್ದೆ. ಯಾಕೆಂದರೆ ಕಲ್ಕತ್ತೆ ಅಷ್ಟರ ಮಟ್ಟಿಗೆ ಹುಚ್ಚು ಹಿಡಿಸಿತ್ತು. ಇದೇ ಹುಚ್ಚಿನಲ್ಲಿ ಸುತ್ತಾಡುತ್ತಿರುವಾಗ ನಮ್ಮ ರಂಗಭೂಮಿಯ ಪ್ರತಿಭಾವಂತ ನಟ ಸತ್ಯಸಂಧನ ಸಾವು ಕಿವಿಗೆ ಕ್ರೂರವಾಗಿ ಬಡಿಯಿತು. ಇಲ್ಲಿ ಕಿವಿ ಮತ್ತು ಹೃದಯಕ್ಕೆ ತಲುಪುವ ಧ್ವನಿಯನ್ನು ಪ್ರತ್ಯೇಕಪಡಿಸಲು ಬಯಸುವುದಿಲ್ಲ. ಅದೇನೆ ಇರಲಿ ನಮಗೆ ಯಾವ ಯಾವ ಸಂದರ್ಭದಲ್ಲಿ ವರದಿಗಳು ಅಂತರಂಗಕ್ಕೆ ತಲುಪುತ್ತವೆ ಎಂಬುದನ್ನು ಹೇಳಲಾಗುವುದಿಲ್ಲ. ಒಮ್ಮೊಮ್ಮೆ ಆ ವರದಿಗಳು ಸಿಡಿಲಿನಂತೆ ಬಂದೆರಗಿ ಆಘಾತಗೊಳಿಸುತ್ತವೆ. ಅದರಲ್ಲೂ ಸಾವು ಮತ್ತು ಇತರೆ ದುರಂತ ಸಂಗತಿಗಳು ಯಾವಾಗಲೂ ಮಧುರವಾದ ಮಾತುಗಳಿಂದ ಹೊರಡುವುದೇ ಇಲ್ಲ. ಹೀಗೆ ಬರೆಯುವ ಮುನ್ನ ಕಳೆದ 'ಕನಸಿಗೊಂದು ಕಣ್ಣು'ವಿನಲ್ಲಿ ಸಾವು ಮತ್ತು ಆತ್ಮಹತ್ಯೆಯನ್ನು ಕುರಿತು ಬರೆದಿದ್ದೆ. ಮತ್ತೆ ಅಂಥದೇ ವಿಷಯದ ಬಗ್ಗೆ ಬರೆಯಬೇಕಾಗುತ್ತೆ ಎಂಬುದನ್ನು ನಿರೀಕ್ಷಿಸಿರಲಿಲ್ಲ. ನಮ್ಮ ಬದುಕು ಸಹಾ ನಿರೀಕ್ಷೆಯಿಂದ ಕೂಡಿರುತ್ತೆ ಎಂಬುದನ್ನು ತಿಳಿಯಲಾಗುವುದಿಲ್ಲ. ಈ ದೃಷ್ಟಿಯಿಂದ ಕಳೆದ ಒಂದು ದಶಕದಿಂದ ನನಗೆ ಪ್ರಿಯನಾಗಿದ್ದ ನಟ 'ಸತ್ಯಸಂಧ'ನ ಸಾವು ಒಂದು ರೀತಿಯ ಭೀತಿಯನ್ನು ಬೆಳೆಸಿತು. ಆ ಸಾವು ಹೃದಯಾಘಾತದಿಂದ ಕೂಡಿತ್ತು. ಕೇವಲ ಮೂವತ್ತೆರಡು ವರ್ಷದ ಉತ್ಸಾಹದ ತರುಣನ ಹೃದಯವನ್ನು ಸಾವು ಹೇಗೆ ಕಿತ್ತುಕೊಂಡಿತು ಎಂಬುದು ನನ್ನ ಪ್ರಶ್ನೆ. ಆದರೆ ಸಾವಿಗೆ ನಾವು ಹುಡುಕುವ ಪ್ರಶ್ನೆಗಳು ಎಷ್ಟರಮಟ್ಟಿನ ಉತ್ತರಗಳನ್ನು ಪಡೆದು ನಿಲ್ಲುತ್ತವೆ ಎಂಬುದು ಎಲ್ಲಾ ಕಾಲದಲ್ಲಿಯೂ ಸಂದೇಹದಾಯಕವೆ.

'ಸತ್ಯಸಂಧ'ನ ಸಾವಿನ ಸುದ್ದಿ ತಿಳಿದದ್ದು ಆಕಸ್ಮಿಕ. ಜನವರಿ ಒಂಬತ್ತರಂದು ಸಂಜೆ ಬೆಂಗಳೂರಿನ ಸಜ್ಜನರಾವ್ ವೃತ್ತದ ಕಡೆಯಿಂದ ಮಿನರ್ವಾ ವೃತ್ತದ ಕಡೆ ಬರುತ್ತಿದ್ದೆ. ಜನಗಡಿಬಿಡಿಯಿಂದ ಓಡಾಡುತ್ತಿದ್ದ ಸಮಯ. ಹಿಂದುಗಡೆಯಿಂದ ಯಾರೋ ನನ್ನನ್ನು ತಡೆದು ನಿಲ್ಲಿಸಿದಂತಾಯಿತು. ಹಿಂದಿರುಗಿ ನೋಡಿದೆ, "ಗೊತ್ತಾಯಿತಾ ? ಸಂತ್ಯಸಂಧರಿಗೆ ಹೃದಯಾಘಾತವಾಯಿತು. ಮಧ್ಯಾಹ್ನವೇ ಕಣ್ಮುಚ್ಚಿದರು" ಎಂದದ್ದು ರಂಗಭೂಮಿಯ ಬೆಳಕಿನ ಮುದ್ದ. ಮನೆಮಠವನ್ನು ಎಂದೋ ಬಿಟ್ಟು ಬೆಂಗಳೂರಿನಲ್ಲಿ ಅಲೆದಾಡುತ್ತ ತಾನೊಬ್ಬ ಲೈಟ್‌ಬಾಯ್ ಆಗಬೇಕು, ರಾಮಮೂರ್ತಿ

ಯಂತೆ ಆಗಬೇಕು ಎಂದು ಕನಸು ಕಾಣುತ್ತಿರುವ ಹುಡುಗ. ಈಗಾಗಲೇ ಹೆಸರು ಪಡೆದಿರುವ ನಗೆ ಮೊಗದ ಮುಗ್ಧ ಹುಡುಗ. ಈ ಹುಡುಗನಿಗೆ ಸತ್ಯಸಂಧನಂಥವರು ನೂರಾರು ಜನ ಪರಿಚಯವಾಗಿರಬಹುದು. ಯಾಕೆಂದರೆ ರಂಗಭೂಮಿ ಕೊಡುವ ಅನುಭವಗಳ ಪತ್ರ್ವತೆಗೆ ಹೆಸರು ಹಚ್ಚುವುದೇ ಕಷ್ಟದ ಕೆಲಸ. ನಾನಾ ರೀತಿಯ ಹುಚ್ಚರ ಮೊತ್ತವನ್ನೇ ಅಲ್ಲಿ ಕಾಣಬಹುದು. ಇಂಥ ಮೊತ್ತದ ಅವಿಭಾಜ್ಯ ಅಂಗ ವಾಗಿದ್ದ 'ಸತ್ಯಸಂಧ' ನಮ್ಮ ಸಂದರ್ಭದ ಪ್ರತಿಭಾವಂತ ನಟನಾಗಿದ್ದ, ಹುಚ್ಚನಾಗಿದ್ದ, ಮನುಷ್ಯನಾಗಿದ್ದ. ಒಬ್ಬ ಮನುಷ್ಯನಲ್ಲಿರಬಹುದಾದ ಸೂಕ್ಷ್ಮ ದೌರ್ಬಲ್ಯಗಳ ಸಂಕೇತ ವಾಗಿದ್ದ. ಈ ಕಾರಣಕ್ಕಾಗಿಯೇ ಸತ್ಯಸಂಧನನ್ನು ನನ್ನಂಥ ನೂರಾರುಜನ ಆತ್ಮೀಯ ವಾಗಿ ಕಂಡಿರಬಹುದು. ಎಷ್ಟೋಬಾರಿ ಅತಿಭಾವುಕನಾಗಿ ಕಂಡರೂ ಅದರ ಹಿಂದಿ ರುವ ಮಗುವಿನ ಸ್ವಭಾವ ಎಲ್ಲರಿಗೂ ಪ್ರಿಯವಾಗಿತ್ತು. ಅದರೊಟ್ಟಿಗೆಯೇ ಮೂರ್ತಸ್ವರೂಪವಾಗಿದ್ದ ಉತ್ಸಾಹ ಈ ಮಹಾನ್ ನಟನ ಬಡವಾಳವಾಗಿತ್ತು. ಸತ್ಯಸಂಧನ ಸಾವಿನ ಸುದ್ದಿ ತಿಳಿಸುವಾಗ ಬೆಳಕಿನ ಮುದ್ಧ ಮತ್ತೊಂದು ಮಾತನ್ನು ಹೇಳಿದ್ದ; "ಬೆಳಿಗ್ಗೆ ನಾವೆಲ್ಲ ಇರುವಾಗ ಸತ್ಯಸಂಧ ನನಗೆ ಇದ್ದಕ್ಕಿದ್ದ ಹಾಗೆ ಹೃದಯಾಘಾತವಾದರೆ ನಿಮಗೇನನ್ನಿಸುತ್ತೆ" ಎಂಬುದನ್ನು. ಈ ಮಾತನ್ನು ಕೇಳಿದ ಒಂದೆರಡು ಘಂಟೆಯಲ್ಲಿಯೇ ಕನ್ನಡ ರಂಗಭೂಮಿಯ ಪ್ರೀತಿಯ ನಟನ ಹೃದಯ ಬಹುದೂರ ಹೋಗಿತ್ತು.

ಹಾಗೆ ನೋಡಿದರೆ ಸತ್ಯಸಂಧನ ಬಗ್ಗೆ ಕನಸಿಗೊಂದು ಕಣ್ಣಲ್ಲಿ ಬರೆಯುವ ಉದ್ದೇಶ ನಿಜವಾಗಿಯೂ ಇರಲಿಲ್ಲ. ಕಲಾಕ್ಷೇತ್ರದಲ್ಲಿ ಈ ಮಹಾನ್ ನಟನಿಗಾಗಿ ಏರ್ಪಡಿಸಿದ್ದ ಶ್ರಧ್ಧಾಂಜಲಿಯ ಕಾರ್ಯಕ್ರಮದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ವೇದಿಕೆಯ ಮೇಲೆ ಇದ್ದ ಮಂದಿ ಹೃದಯ ಮುಟ್ಟುವಂತೆ ಮಾತಾಡುತ್ತಿದ್ದಾಗ ನನ ಪಕ್ಕದಲ್ಲಿ ನಿಂತಿದ್ದ ಟಿ.ಎನ್. ಸೀತಾರಾಂ ಹಿಂಸೆಯಿಂದ ಒದ್ದಾಡುತ್ತಿದ್ದ. ಸೀತಾರಾಂ ಸತ್ಯಸಂಧನಿಗೆ ನನಗಿಂತ ಹೆಚ್ಚು ಆತ್ಮೀಯ ಗೆಳೆಯನಾಗಿದ್ದ. ಒಂದು ದೃಷ್ಟಿಯಿಂದ ಸೀತಾರಾಂ ಸಹ ತನ್ನ ಚುರುಕು ವ್ಯಂಗ್ಯದ ನಡುವೆ ಮನುಷ್ಯರನ್ನು ಸದಾ ಅಪ್ಪಿ ಕೊಂಡು ತಿರುಗುವ ನಟ, ನಾಟಕಕಾರ. ಆದರೆ ಪುಟ್ಟ ಕೈಗಾರಿಕೆಯೆಂಬ ಪ್ರಿಯತಮೆ ಯನ್ನು ಕಟ್ಟಿಕೊಂಡು ಒದ್ದಾಡುತ್ತಿರುವ ವ್ಯಕ್ತಿ. ಇಂಥವರ ಬಗ್ಗೆ ಗುಂಡಿನ ನಡುವೆ ಗೇಲಿ ಮಾಡುವುದಕ್ಕೆ ಸತ್ಯಸಂಧನೇ ಸರಿಯಾದ ವ್ಯಕ್ತಿಯಾಗಿದ್ದ. ಎರಡು ಪೆಗ್ಗಿನ ನಂತರ ಸತ್ಯಸಂಧ ಎಂದೂ ಸರಿಯಾದ ವ್ಯಕ್ತಿಯಾಗುತ್ತಿರಲಿಲ್ಲ. ಟಿ.ಎಸ್. ನರಸಿಂಹ ನಂತೆ ಹುಚ್ಚನಾಗುತ್ತಿದ್ದ. ಮತ್ತೊಬ್ಬ ಹುಚ್ಚ ಆರ್. ನಾಗೇಶ್‌ರವರನ್ನು ಮರೆಯು ವಂತೆಯೇ ಇಲ್ಲ. ಇವರೊಡನೆ ರಾತ್ರಿಯ ಕ್ಷಣಗಳನ್ನು ಕಳೆಯುವುದೇ ಒಂದು ಮಾರ್ಮಿಕ ಸಂಗತಿಯಾಗಿತ್ತು. ಈಗ 'ಕಲಾಕ್ಷೇತ್ರ' ಹಿಂದಿನ ವೈಭವದ ದಿನಗಳನ್ನು ಉಳಿಸಿಕೊಂಡಿಲ್ಲ. ಅದರ ಸುತ್ತಲೂ ಪುಡಾರಿ ಮನೋಭಾವನೆಯ ವಿಷಗಾಳಿ

ಆವೃತವಾಗಿದೆ. ಇವರ ನಡುವೆಯೂ ಸತ್ಯಸಂಧನಂಥ ಧೀಮಂತ ನಟರು ತಮ್ಮ ಪಾಡಿಗೆ ತಾವು ಶಿಸ್ತಿನಿಂದ ಪಾತ್ರಗಳನ್ನು ಅಪ್ಪಿಕೊಂಡು ತಿರುಗಾಡುವವರಿಗೆ ಕೊರತೆಯಿಲ್ಲ. ಕೊರತೆಯಿರುವುದು ಅಭಿಮಾನದಿಂದ ಬೆಳೆಸುವ ತಂಡಗಳದ್ದು.

'ಸತ್ಯಸಂಧ' ಎಂಥ ಕೆಟ್ಟನಾಟಕದಲ್ಲಿಯೂ ಮೆರೆಯಬಲ್ಲವನಾಗಿದ್ದ. ಉತ್ತಮ ನಾಟಕದಲ್ಲಿಯಂತೂ ವಿಜೃಂಭಣೆಯಿಂದ ಮೆರೆಯುತ್ತಿದ್ದ. ಈ ರೀತಿಯ ತುಂಬು ನಟನೆಯನ್ನು ಕೊಟ್ಟವರು ಲೋಕನಾಥ್ ಮತ್ತು ಸಿಂಹರವರು. ಮತ್ತೊಂದು ಹಂತದಲ್ಲಿ ಟಿ. ಎನ್. ಸೀತಾರಾಂ ತುಂಬಬಹುದಾಗಿತ್ತು. ಆದರೆ ಸೀತಾರಾಂ ನಾನಾರೀತಿಯ ಸೂಕ್ಷ್ಮ ಮನಸ್ಸುಗಳ ಮೊತ್ತವಾಗಿದ್ದರಿಂದ ಆಗಲಿಲ್ಲ. ಸಿಂಹ ಮತ್ತು ಸತ್ಯಸಂಧರವರಂಥವರೊಡನೆ ಒಂದು ಪೆಗ್ಗನ್ನು ನಿಧಾನವಾಗಿ ಚಪ್ಪರಿಸುತ್ತ ಪಾನೀಯಕ್ಕೆ ನಿಷ್ಠನಾಗಿದ್ದೇನೆಂದು ತಿಳಿಯುತ್ತಲೇ ತನ್ನ ನಟನೆಯ ವೈಭವದ ಕ್ಷಣಗಳನ್ನು ವಿಷಾದದಿಂದ ಸ್ವೀಕರಿಸುತ್ತ ಬದುಕುತ್ತಿರುವ ವ್ಯಕ್ತಿ. ಹಾಗೆ ನೋಡಿದರೆ ಎಪ್ಪತ್ತರ ದಶಕದಲ್ಲಿ ಮೆರೆಯುತ್ತಿದ್ದ ಸೀತಾರಾಂ, ದಿನೇಶ್ ಮತ್ತು ಶ್ರೀಧರ್‌ರಂಥವರನ್ನು ಸತ್ಯಸಂಧ ಕಂಡೇ ಇರಲಿಲ್ಲ ಅನ್ನಿಸುತ್ತೆ. ಇಲ್ಲಿ ಕೆ. ವಿ. ನಾರಾಯಣರವರ ಹೆಸರನ್ನು ಸೇರಿಸದಿದ್ದರೆ ಅಪಚಾರವಾಗುತ್ತೆ. ನಂತರ ಇವರೆಲ್ಲರ ನಡುವೆ ಯಜಮಾನನಂತೆ ನಡೆಯುತ್ತಿದ್ದ ಪ್ರಸನ್ನ ತನ್ನ ಯಜಮಾನಿಕೆಯನ್ನು ಬೆಳಸಿಕೊಂಡೇ ಬಂದರು. ಪ್ರಸನ್ನ ಇಂದು ರಂಗಭೂಮಿಯ ಬಹುದೊಡ್ಡ ಯಜಮಾನ ಅಥವಾ ನಿರ್ದೇಶಕ ಆಗಿದ್ದರೆ ನಿರಂತರ ಆ ಮನುಷ್ಯನಲ್ಲಿಯ ಕ್ರಿಯಾಶೀಲತೆಯೇ ಕಾರಣ. ಸಿ.ಜಿ. ಕೃಷ್ಣಸ್ವಾಮಿಗೆ ಇಂಥ ಸಾಧ್ಯತೆಗಳಿದ್ದರೂ ಬೇರೆ ಬೇರೆ ಅರ್ಥಗಳಲ್ಲಿ ರಂಗಭೂಮಿಯ ಉದ್ಧಗಲಕ್ಕೂ ಕೈಚಾಚಬೇಕಾಗಿದೆ. ಯಾವುದೋ ಒಂದು ನಾಟಕದ ಬಗ್ಗೆ ಸರಿಯಾದ ವಿಮರ್ಶೆ ಬರೆದಿದ್ದರೆ ಸಿಡಿಮಿಡಿಗೊಳ್ಳಬಾರದು. ನಮ್ಮಲ್ಲಿಯ ಬಹುಪಾಲು ಕಲಾವಿದರು; ಕಲಾವಿದರಾಗದೆ ಸಾಯುವುದು ಪತ್ರಿಕೆಗಳ ವಿಮರ್ಶೆಗಳನ್ನು ಭೂತಾಕಾರವಾಗಿ ತೆಗೆದುಕೊಂಡು ಅವಲಂಬಿಸುವುದರಿಂದ. ಈ ರೀತಿ ಅವಲಂಬಿಸುವುದರಿಂದ ಆಗುವ ದುರಂತವೆಂದರೆ ಪ್ರಚಾರದ 'ಅಮಲು' ತನ್ನೊಳಗಿನ ಕಲಾವಿದನ ಗುಣವನ್ನೇ ಕೊಲೆಮಾಡಲು ಸಾಧ್ಯ. ನನಗೆ ತಿಳಿದಮಟ್ಟಿಗೆ ಲೋಕನಾಥ್, ಸಿಂಹ ಮತ್ತು ಸತ್ಯಸಂಧರಂಥವರು ಇಂಥ ತೆದಲಿಗೆ ಎಂದೂ ಬಲಿಬಿದ್ದವರಲ್ಲ. ಇವರಿಗೆ ನಟನೆಯೆನ್ನುವುದು ಆರಾಧನೆಯಾಗಿತ್ತು. ಆದ್ದರಿಂದಲೇ ಇವರ ನಟನೆಯ ಮುಂದೆ ಜೀವನದ ವಿಷಾದಗಳನ್ನೆಲ್ಲ ನೆನಪು ಮಾಡಿಕೊಂಡು ನರಳುತ್ತಿರುತ್ತೇವೆ. ಈ ಮೂವರೂ ದುರಂತ ನಾಯಕರ ಪಾತ್ರಗಳಿಗೆ ಹೇಳಿಮಾಡಿಸಿಟ್ಟಂತೆ. ಸೀತಾರಾಂ ದುರಂತದ ರೆಬಲ್ ಕ್ಯಾರೆಕ್ಟರ್ ಆಗಿ ಮತ್ತೊಂದು ಹಂತದಲ್ಲಿ ಬೆಳೆದ ಕಲಾವಿದ. ನಮ್ಮ ಟ್ರ್ಯಾಜಿಡಿಗಳು ನಮ್ಮ ದುಃಖ ದುಮ್ಮಾನಗಳು ಅರ್ಥವಾಗುವುದು ನಮ್ಮ ನಡುವೆ ಬಹುದೊಡ್ಡ ರಂಗಭೂಮಿ ಬೆಳೆದಾಗ, ಕಲಾಭೂಮಿ ಬೆಳೆದಾಗ. ಪ್ರತಿಯೊಬ್ಬನೂ ತಾನೊಬ್ಬ 'ಕಲಾವಿದ' ಎಂಬ

ನೆನಪನ್ನು ಬೆಳೆಸಿಕೊಳ್ಳದಿದ್ದಾಗ ಬದುಕಿನಲ್ಲಿ ಎಷ್ಟೊಂದು ಕಳೆದುಕೊಳ್ಳುತ್ತೇವೆ ಎಂಬುದನ್ನು ತಿಳಿಯುವುದಿಲ್ಲ. ಈ ದೃಷ್ಟಿಯಿಂದ ನಮ್ಮ ಪ್ರಶ್ನೆಗಳು ನಮಗೇ ಗೊತ್ತಿರದೇ ನಟಿಸುತ್ತಿರುತ್ತೇವೆ. ಮತ್ತು ಉತ್ತಮ ಕಲಾವಿದನ ಗುಣಗಳನ್ನು ರೂಢಿಸಿಕೊಳ್ಳಲು ಹೋಗುವುದೇ ಇಲ್ಲ. ಹೀಗೆ ಆಗದಿದ್ದಾಗ ತನ್ನ ಸುತ್ತಲಿನವರಲ್ಲಿ ದೋಷಗಳನ್ನು ಹುಡುಕುತ್ತ ಕೂರುತ್ತೇವೆ. ಪ್ರತಿಯೊಬ್ಬ ಕಲಾವಿದ ಮೌನಿಯಾಗಬೇಕು. ; ಈ ಮೌನ ನಾನಾ ರೀತಿಯ ಸೂಕ್ಷ್ಮ ಸಂಗತಿಗಳನ್ನು ಕಲಿಸುತ್ತ ಹಾಗೂ ತನ್ನೊಳಗಿನ ಚೈತನ್ಯವನ್ನು ಉದ್ದೀಪನಗೊಳಿಸುತ್ತ ಎಂಬ ಪ್ರಾಥಮಿಕ ಸಂಗತಿಯನ್ನು ಮರೆಯುತ್ತೇವೆ. ಇಲ್ಲಿ ಮತ್ತೆ ಮತ್ತೆ ಲೋಕನಾಥ್, ಸಿಂಹ, ಸೀತಾರಾಂ ಮತ್ತು ಸತ್ಯಸಂಧರನ್ನು ನೆನಪು ಮಾಡಿಕೊಳ್ಳುವುದಕ್ಕೆ ನಾನಾ ಕಾರಣಗಳಿವೆ. ಅದರಲ್ಲಿ ಮುಖ್ಯವಾಗಿ ಬೇರೊಬ್ಬರ ನಟನೆಯ ಬಗ್ಗೆ ಎಂದೂ ಹಗುರವಾಗಿ ಮಾತಾಡದಿರುವುದು, ಗಮನಿಸುವುದೇ ಪ್ರಧಾನ ಅಂಶ ಎಂಬುದನ್ನು ಮನಗಂಡವರು.

'ಸತ್ಯಸಂಧ'ನಿಗೆ ಯಾವ ರೀತಿಯಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಬೇಕೋ ಗೊತ್ತಿಲ್ಲ. ಸುದ್ದಿಯ ಗುದ್ದಾಟದಲ್ಲಿ ಬರೆಯ ಬೇಕೆಂದುಕೊಂಡಿದ್ದ ಈ ಟಿಪ್ಪಣಿಯನ್ನು 'ಕನಸಿಗೊಂದು ಕಣ್ಣು'ವಿನಲ್ಲಿ ಬರಬೇಕೆಂದು ಕೇಳಿಕೊಂಡ ವೆಂಕಟಸುಬ್ಬಯ್ಯ ಹಾಗೂ ಹೊಳವುಗಣ್ಣನ ಗಾಯತ್ರಿಸಿಂಗ್‌ರವರ ಮಾತನ್ನು ತಿರಸ್ಕರಿಸಲಾಗಲಿಲ್ಲ. ಇದರಿಂದ ಆದ ಒಂದು ಅನುಕೂಲವೆಂದರೆ ಹೃದಯ ಬಿಚ್ಚಿ ಬರೆಯಲು ಸಾಧ್ಯವಾಯಿತು. ಹೀಗೆ ಬರೆಯುವಾಗಲೂ ಇನ್ನು ಎಷ್ಟು ಬರೆಯುವುದಿದೆ ಎಂಬ ಮಿಡಿತದ ಮೂಲಕ ಎರಡು ಮೂರು ವರ್ಷಗಳ ಹಿಂದಿನ ಭೀಕರ ಘಟನೆಯನ್ನು ಪ್ರಸ್ತಾಪಿಸುವುದು ಸೂಕ್ತ ಅನ್ನಿಸುತ್ತೆ. ಇಲ್ಲದಿದ್ದರೆ ಸತ್ಯಸಂಧ ನನ್ನ ಅನುಭವದ ಚೌಕಟ್ಟಿನಲ್ಲಿ ಅಪೂರ್ಣನಾಗಬಹುದು.

ಅದೊಂದು ರಾತ್ರಿ ದಕ್ಷಿಣ ಭಾರತದ ನಾಟಕೋತ್ಸವದಲ್ಲಿ ಕಂಬಾರರ 'ಹರಕೆಯ ಕುರಿ'ಯನ್ನು ನೋಡಿಕೊಂಡು ಬೆಂಗಳೂರಿನ ಶ್ರೀನಗರದಲ್ಲಿದ್ದ ಪ್ರಸನ್ನರವರ ಮನೆಗೆ ಹೋದೆವು. ದೊಡ್ಡ ಗುಂಪೇ ಸೇರಿತ್ತು. ಕನ್ನಡ ಸಾಂಸ್ಕೃತಿಕ ರಂಗದ ಬಹುಪಾಲು ವ್ಯಕ್ತಿಗಳೆಲ್ಲ ಸೇರಿದ್ದರು. ಕುಡಿತ ಮಾತು ಚರ್ಚೆ ಊಟ ಇತ್ಯಾದಿಗಳ ಸ್ಮರಣೀಯ ರಾತ್ರಿಯಲ್ಲಿ ಒಬ್ಬೊಬ್ಬರೇ ನಿರ್ಗಮಿಸಿದರು, ಅಂದು ಗಿರೀಶ್‌ಕಾರ್ನಾಡ್ ಮಾತಿನ ನಡುವೆ ಸದಾ ಸ್ಮರಿಸಬಹುದಾದ ಒಂದು ಮಾತನ್ನು ಹೇಳಿದರು: ಬೆಂಗಳೂರಿನ ಕೆಲವು ಮಂದಿ ರಾತ್ರಿ ಕುಡಿತದ ನಡುವೆ ಏನೇನೋ ಮಾತಾಡಿ ಮಾರನೆಯ ದಿನ ಬೆಳಿಗ್ಗೆ ಪ್ರತಿಯೊಬ್ಬರ ಮನೆಗೂ ಹೋಗಿ ಕ್ಷಮಿಸಿ ಮಹಾರಾಯರೇ ಹಾಗೆ ಮಾತಾಡಬಾರದಾಗಿತ್ತು ಎಂದು ಹೇಳಿಕೊಂಡು ಬರುವುದರ ಬಗ್ಗೆ ತಮಾಷೆ ಆಡಿದರು. ಅತ್ಯಂತ ಮುಗ್ಧತೆಯಿಂದ ಹೇಳಿದ ಈ ಮಾತು ಈಗಲೂ ನನಗೆ ಗಂಭೀರವಾಗಿ ಕಾಣುವುದು ನಾನಾ ಕಾರಣಗಳಿಗಾಗಿ, ಕುಡಿತದ ಪಾಪ

ಪ್ರಜ್ಞೆಯಿಂದ ನರಳುವವರು ಈ ರೀತಿ ಮಾಡುತ್ತಾರೆ ಅನ್ನಿಸುತ್ತೆ. 'ಕುಡಿತ'ವನ್ನು ಆತ್ಮೀಯವಾಗಿ ಸೇರುವಿಕೆಗೆ ಮಧ್ಯವರ್ತಿ ಎಂಬುದನ್ನು ತಿಳಿಯುವುದಿಲ್ಲ. ಕುಡಿತದ ನಂತರ ರೇಪ್ ಮಾಡುವುದಕ್ಕೆ, ಕೂಗಾಡುವುದಕ್ಕೆ, ಕೊಲೆಮಾಡುವುದಕ್ಕೆ ಎಂದು ತಿಳಿದದ್ದರಿಂದಲೇ ಅವರ ಮಿತಿಯನ್ನು ಅರಿಯದೇ ಹೋಗಿದ್ದು, ಕದ್ದು ಕುಡಿಯುವುದು ಜಾಸ್ತಿಯಾಗಿದ್ದು. ಗೆಳೆಯರ ಒತ್ತಾಯಕ್ಕೆ ಸ್ವಲ್ಪ ಕುಡಿದದ್ದು ಎಂಬ ಹುಂಬತನವನ್ನು ವ್ಯಕ್ತಪಡಿಸುವುದು. ಈ ದೃಷ್ಟಿಯಿಂದ ಕುಡಿತ ಗ್ರೇಟು ಅಲ್ಲ ಕ್ಷುಲ್ಲಕವೂ ಅಲ್ಲ. ಅದೊಂದು ಸಾಮಾನ್ಯವಾಗಿ ಬಿದ್ದಿರುತ್ತೆ. ಅದನ್ನು ಸ್ವೀಕರಿಸುವ ಮನೋಭಾವನೆಯಲ್ಲಿರುತ್ತೆ. ಹೀಗೆ ಹೇಳುವಾಗಲೂ ಕುಡಿತದ ದುರ್ಬಲ ಕ್ಷಣಗಳನ್ನು ಮರೆಯುವಂತಿಲ್ಲ. ಅಂದು ರಾತ್ರಿ ಎಲ್ಲರೂ ಹೋದ ಮೇಲೆ ಕಾರಂತರೊಡನೆ ಒಂದಷ್ಟು ಮಂದಿ ಉಳಿದೆವು. ಮಹಡಿಯ ಮೇಲಿನ ಬಯಲಿನಲ್ಲಿ ಮಾತು ಸಾಗಿತ್ತು. ಕಪ್ಪು ಆಕಾಶದಲ್ಲಿ ನಕ್ಷತ್ರಗಳು ಮಿಣಮಿಣ ಮಿಂಚುತ್ತಿದ್ದುವು. ರಾತ್ರಿ ಹನ್ನೊಂದೂವರೆಯಾಗಿತ್ತು. ಕಾರಂತರು ನಾನು ಭೂಪಾಲಿಗೆ ಹೋಗಬೇಕು ಎಂದು ಕತ್ತಲಿನಲ್ಲಿ ಓಡಿದ್ದರು. ಭೂಪಾಲು ಅವರನ್ನು ಅಷ್ಟೊಂದು ಆತ್ಮೀಯವಾಗಿ ಅಪ್ಪಿಕೊಂಡಿತ್ತು. ಈ ಅಪ್ಪುಗೆಯ ಸಂಕೋಲೆಗಳ ಕನಸಿನಲ್ಲಿ ಅದನ್ನು ತುಂಬಿಕೊಂಡವರು.

ಮಾತು ತೀವ್ರವಾಗತೊಡಗಿತ್ತು. ಆ ಮಾತಿಗೆ-ವಾದಕ್ಕೆ ಅರ್ಥವಿರಲಿಲ್ಲ. ಸತ್ಯಸಂಧ ವಾದಕ್ಕಿಳಿದರೆ ತರ್ಕದ ಬಾಗಿಲು ಎಂದೋ ಮುಚ್ಚಿ ಹೋಗುತ್ತಿತ್ತು. ಯಾಕೆಂದರೆ ಅಲ್ಲಿ ಭಾವುಕತೆಯೇ ಪ್ರಧಾನವಾಗುತ್ತಿತ್ತು. ಈ ದೃಷ್ಟಿಯಿಂದ ಅಂದು ಆಗಿದ್ದು ಬೇರೇನು ಆಗಿರಲಿಲ್ಲ. ಕಾರಂತರು ಮತ್ತು ಪ್ರಸನ್ನರವರು ಕರ್ನಾಟಕಕ್ಕೆ ಬಂದು ರಂಗಭೂಮಿಯನ್ನು ಬೆಳೆಸಬೇಕೆಂಬುದು ನಿಜವಾದ ಬೇಡಿಕೆಯಾಗಿದ್ದರೂ ಪ್ರತಿಯೊಬ್ಬ ಮನುಷ್ಯನಿಗೂ ನಾನಾ ರೀತಿಯ ಮಿತಿಗಳಿರುತ್ತವೆ ಎಂಬುದನ್ನು ನಾವು ಯೋಚಿಸುವುದೇ ಇಲ್ಲ. ಆಶ್ಚರ್ಯದ ಸಂಗತಿಯೆಂದರೆ ಸತ್ಯಸಂಧ ಅತಿ ಉತ್ಸಾಹಿಯಾಗಿದ್ದ ನಿಜ. ಆದರೆ ಡ್ರಿಂಕ್ಸ್‌ನ ಸಂದರ್ಭದಲ್ಲಿ ಅತಿ ಭಾವೋದ್ವೇಗಕ್ಕೆ ಒಳಗಾಗುತ್ತಿದ್ದ. ಇದು ಕೆಲವೇ ಕ್ಷಣಗಳಲ್ಲಿ ರೋಷವಾಗಿ ರೂಪುಗೊಳ್ಳುತ್ತಿತ್ತು. ಆಗ ಎಷ್ಟೋ ಬಾರಿ ಯೋಚಿಸಿದ್ದೇನೆ ಡ್ರಿಂಕ್ಸ್‌ಗಿರುವ ಮಹಾನ್ ಶಕ್ತಿ ಯಾವುದೆಂದು ?

ರಾತ್ರಿ ಹನ್ನೆರಡು ಘಂಟೆಯ ಸಮಯಕ್ಕೆ ಎಲ್ಲವೂ ವಿಕೋಪಕ್ಕೆ ಹೋಗುವ ಮುನ್ನ ಜಾಗಬಿಡುವುದು ಒಳಿತೆಂದು ತಿಳಿದು ಹೊರಗೆ ಬಂದೆವು. ಸತ್ಯಸಂಧ ಮತ್ತು ಕಾರಂತರು ವಿಚಿತ್ರ ರೀತಿಯಲ್ಲಿ ಕಿತ್ತಾಡಿದ್ದರೂ ಕಾರಂತರು ಸತ್ಯಸಂಧನ ಮೋಟಾರ್ ಬೈಕಿನ ಮೇಲೆ ಕೂರಲು ಹೋಗುತ್ತಿದ್ದುದು ಒಂದು ರೀತಿಯ ತಮಾಷೆಗೆ ಕಾರಣವಾಗಿತ್ತು. ಆದರೆ ಕೊನೆಗೆ ಒತ್ತಾಯ ಮಾಡಿ ಕಾರಂತರನ್ನು ಬೇರೆ ಗಾಡಿಯಲ್ಲಿ ಕೂರಿಸಿ ಸತ್ಯಸಂಧನ ಬೈಕಿನ ಮೇಲೆ ನಾನು ಮತ್ತು ನಾಗೇಶ್ ಕಶ್ಯಪ ಕೂತೆವು. ಆಗ

ಕಾರಂತರ ಮನೆ ಇದ್ದದ್ದು ಹನುಮಂತನಗರದಲ್ಲಿ ಅನ್ನಿಸುತ್ತೆ. ಸತ್ಯ ತನ್ನ ಮಾಮೂಲಿ ಕುಡಿತದ ಉತ್ಸಾಹದಲ್ಲಿ ಗಾಡಿ ಓಡಿಸುತ್ತಿದ್ದ. ಇದ್ದಕ್ಕಿದ್ದಂತೆ "ಶೂದ್ರ ನಮ್ಮ ಕೆಲಸ ಮುಗಿಯಿತು" ಎಂದು ಜೋರಾಗಿ ಕೂಗಿದ. ಗಾಬರಿಯಿಂದ ಏನೆಂದು ವಿಚಾರಿಸಿಕೊಳ್ಳಲು ಸಮಯವಿರಲಿಲ್ಲ. ಹೇಗೆ ಬೈಕ್ ನಿಂತಿತೋ ಗೊತ್ತಿಲ್ಲ. ನಮ್ಮ ಮುಂದೆ ದೊಡ್ಡದಾದ ಹಳ್ಳವಿತ್ತು. ಕತ್ತಲಿನಲ್ಲಿ ಭೀಕರವಾಗಿ ಕಾಣುತ್ತಿತ್ತು. ಅದನ್ನು ನೋಡಿ ಸಾವನ್ನು ಒಂದು ಕ್ಷಣ ಚಪ್ಪರಿಸಿದೆವು. ಅಂತೂ ಈ ಭೀತಿಯ ನಡುಕದಲ್ಲಿಯೇ ಕಾರಂತರ ಮನೆಯನ್ನು ತಲುಪಿದೆವು. ಕಾರಂತರು ಇನ್ನೂ ಭೂಪಾಲಿನ ಚಿಂತೆಯಲ್ಲಿಯೇ ಇದ್ದರು. ಅವರನ್ನು ಹಾಗೆಯೇ ಬಿಟ್ಟಿದ್ದರೆ ರಾತ್ರಿಯೆಲ್ಲ ಭೂಪಾಲಿನ ಹಾದಿಯಲ್ಲಿ ನಡೆಯುತ್ತಿದ್ದರೇನೋ. ಮನುಷ್ಯ ಸಂಬಂಧಗಳ ನಿಗೂಢತೆಯಲ್ಲಿ ಯಾವುದು ಸರಿ ಯಾವುದು ತಪ್ಪು ಎಂದು ಹೇಳಲಾಗುವುದಿಲ್ಲ ಅನ್ನುವುದಕ್ಕೆ ಇಂಥ ಸಂದರ್ಭಗಳೇ ಸಾಕ್ಷಿ.

ಸತ್ಯಸಂಧ ಈ ಘಟನೆಯ ನಂತರ ತುಂಬ ಪ್ರಿಯನಾದ. ಹತ್ತಿರದವನಾದ ಭೇಟಿಯಾಗುವುದು ಅಪರೂಪವಾದರೂ; ಅಪರೂಪದ ಕ್ಷಣಗಳಲ್ಲಿಯೂ ಬೆಚ್ಚನೆಯ ವಾತಾವರಣವನ್ನು ಸೃಷ್ಟಿಸಿ ಮರೆಯಾಗುತ್ತಿದ್ದ. ಸದಾ ಹೆಗಲಿಗೆ ಹೆಲ್ಮೆಟನ್ನು ನೇತಾಕಿಕೊಂಡು ತಿರುಗಾಡುತ್ತಿದ್ದ ಸತ್ಯಸಂಧನ ಜೀವಂತ ವ್ಯಕ್ತಿತ್ವವನ್ನು ಹೇಗೆ ಮರೆಯಲು ಸಾಧ್ಯ. ಶ್ರದ್ಧಾಂಜಲಿಯ ದಿವಸ ಕಲಾಕ್ಷೇತ್ರದ ತುಂಬು ಸಭೆಯನ್ನು ಕಂಡು ಸತ್ಯಸಂಧನ ಅಣ್ಣನ ಮಾತು ಮಾರ್ಮಿಕವಾಗಿತ್ತು. "ಸತ್ಯ ಅಮ್ಮನಿಗೆ ಮುದ್ದು ಮಗನಾಗಿದ್ದ. ಮೊದಲಿನಿಂದಲೂ ಅವನು ಹೊಟ್ಟೆ ಬಾಕ. ಆದ್ದರಿಂದಲೇ ನಮ್ಮ ತಾಯಿ ಮನೆಯಲ್ಲಿಯ ಲಕ್ಷ್ಮಿ ಹಸುವಿನ ಹಾಲನ್ನು ಸಾಕಷ್ಟು ನಮಗೆ ಗೊತ್ತಿಲ್ಲದೆ ಕುಡಿಸುತ್ತಿದ್ದಳು. ಚಿಕ್ಕಂದಿನಿಂದಲೂ ಸಾಹಸಪ್ರಿಯ. ಅಂಥ ಸತ್ಯ ಇಷ್ಟೊಂದು ಜನ ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿದ್ದಾನೆ ಎಂಬುದು ಒಂದು ದಿನವೂ ನಮ್ಮ ಗಮನಕ್ಕೆ ಬರಲಿಲ್ಲ." ಎನ್ನುವಾಗ ವೇದಿಕೆಯ ಮೇಲೆ ಕೂತಿದ್ದ ವೃದ್ಧ ತಂದೆ ಜೀವನದ ಶಾಶ್ವತತೆ ಮತ್ತು ನಶ್ವರತೆಯ ಬಗ್ಗೆ ಲೆಕ್ಕ ಹಾಕುತ್ತಿದ್ದರು. ಹಾಕುತ್ತಿದ್ದರು ಎನ್ನುವುದಕ್ಕಿಂತ ಅದರ ಮಾನಸಿಕ ಕೊಂಡಿಗಳಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಎಂಬುದು ಅಥವಾ ಯಾವುದು ಭೂತ-ವರ್ತಮಾನ ಹಾಗೂ ಭವಿಷ್ಯತ್ ಎಂದು ಸೃಷ್ಟಿಯ ಲಯ ಸಂಬಂಧಗಳನ್ನು ಕುರಿತು ಯೋಚಿಸುತ್ತಿದ್ದರು ಅನ್ನಿಸುತ್ತೆ. ತಮ್ಮ ಮಗ ಫಾದರ್ ನಾಟಕದ, ಫಾದರ್ ಪಾತ್ರವನ್ನು ನೋಡಿದ್ದರೆ (ಮಿಕ್ಕ ನಾಟಕಗಳ ಪಾತ್ರಗಳನ್ನು ಸಹಾ) ನಿಜವಾಗಿಯೂ ತಂದೆಯ ಸ್ಥಾನದಲ್ಲಿ ಭೀತಿಗೊಳ್ಳುತ್ತಿದ್ದರು. ಇವೆಲ್ಲದರ ನಡುವೆ ಗುಂಗುರು ಕೂದಲಿನ, ಹೊಳಪುಗಣ್ಣಿನ, ದಪ್ಪನೆಯ ಮೀಸೆಯ ಸತ್ಯಸಂಧ ನಟನಾಗಿ ಮೆರೆದ ರಂಗದ ಮೇಲೆ ಭಾವಚಿತ್ರವಾಗಿದ್ದ. ನೆನಪಿನ ಚಿತ್ರವಾಗಿದ್ದ. ಸಾವಿರಾರು ಜನ ಪ್ರೇಕ್ಷಕರ ಹೃದಯದ ಚಿತ್ರವಾಗಿದ್ದ. ಇದಕ್ಕಿಂತ ಜಾಸ್ತಿ ಬರೆಯಲಾಗದ್ದಕ್ಕೆ ನನ್ನ

ಕಾಲವಲ್ಲಿ ಕೆಲವು ದಶಕಗಳವರೆವಿಗೂ ಮಹಾನ್ ನಟನಾಗಿ ಮೆರೆಯ ಬಲ್ಲ ಸಾಮರ್ಥ್ಯವನ್ನು ಪಡೆದಿದ್ದ ಸತ್ಯಸಂಧನ ಮುಂದೆ ಕ್ಷಮೆಯಾಚಿಸುವೆ.

28-1-1987

ಶೂದ್ರ ಶ್ರೀನಿವಾಸ್.

ಸುದ್ದಿಯ ಗುದ್ದಾಟ

ಜನತಾ ಸರ್ಕಾರದ ಅಭಿವೃದ್ಧಿ ಮಂಡಳಿಗಳು :

ಜನತಾ ಸರ್ಕಾರದ ಸಾಧನೆ ಮತ್ತು ವೈಫಲ್ಯಗಳನ್ನು ಕುರಿತು ಬೇಕಾದಷ್ಟು ಬರೆಯಬಹುದು. ಆದರೆ ಅದು ನನ್ನ ಮುಖ್ಯ ಉದ್ದೇಶವಲ್ಲ. ನಮಗೆಲ್ಲರಿಗೂ ಗೊತ್ತಿರುವಂತೆ ಜನತಾ ಪಕ್ಷ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಹೊಸದರಲ್ಲಿ ನಡೆಸಿದ್ದ ಪ್ರಯೋಗವನ್ನುಳಿಸಿಕೊಳ್ಳುವ ತಾಳ್ಮೆಯನ್ನು ಬೆಳೆಸಿಕೊಳ್ಳಲಿಲ್ಲ. ಬೆಳೆಸಿಕೊಳ್ಳಲು ಅವರಿಗಿದ್ದ ಅಡ್ಡಿ ಆತಂಕಗಳೇನು ಎಂಬುದನ್ನು ಎಲ್ಲಿಯೂ ಸ್ಪಷ್ಟಪಡಿಸಲಿಲ್ಲ. ಇದಕ್ಕೆ ಅವರದೇ ಆದ ದೌರ್ಬಲ್ಯಗಳ ಕಥೆಯಿರಬಹುದು. ಆದರೆ ಇಂದು ಜನತಾ ಸರ್ಕಾರದ ವಿವಿಧ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರುಗಳು ಕ್ರಿಯಾಶೀಲರಾಗಿರುವುದನ್ನು ಮರೆಯುವಂತಿಲ್ಲ. ಎಷ್ಟೋ ಜನ ಮಂತ್ರಿಗಳು ಸುದ್ದಿಯಲ್ಲಿಲ್ಲದಿದ್ದರೂ ಇವರು ಸುದ್ದಿಯಲ್ಲಿದ್ದಾರೆ. ಅದಕ್ಕೆ ಮುಖ್ಯ ಕಾರಣ, ಕಾಂಗ್ರೆಸ್ ಅಧಿಕಾರದವಧಿಯಲ್ಲಿ ಈ ಬೋರ್ಡ್‌ಗಳೆಲ್ಲ ಹೆಸರಿಗೆ ಮಾತ್ರ ಇದ್ದವು. ಒಂದಷ್ಟು ಹಣಮಾಡಿಕೊಳ್ಳಲು ಇದ್ದುವು. ಎಂದೂ ತಮ್ಮ ಮೇಲಿರುವ ಎಂ. ಡಿ. (ಐ.ಎ.ಎಸ್. ಅಧಿಕಾರಿಗಳ)ಗಳನ್ನು ಪ್ರಶ್ನಿಸಲಿಲ್ಲ. ಇಂದು ಪ್ರಾಮಾಣಿಕವಾಗಿ ತಮ್ಮ ಅಧಿಕಾರದ ಮಿತಿಯನ್ನು ಪ್ರಶ್ನಿಸುತ್ತಿದ್ದಾರೆ. ಇವರ ಪ್ರಶ್ನೆಯ ಪ್ರಾಮಾಣಿಕ ಉದ್ದೇಶವಿರುವುದು ತಮ್ಮ ಅಧಿಕಾರದ ಸಮಯದಲ್ಲಿ ಒಂದಷ್ಟು ಒಳ್ಳೆಯ ಕೆಲಸವನ್ನು ಮಾಡಬೇಕೆನ್ನುವುದು. ಈ ದೃಷ್ಟಿಯಿಂದ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಉಮೇಶ್ ಬಂದಗದ್ದೆ, ಸಾರಿಗೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಟಿ. ಪ್ರಭಾಕರ್, ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಬಾಪು ಹೆದ್ದೂರ ಶೆಟ್ಟಿ, ಬಾಲಭವನಗಳ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಿ. ಎಸ್. ಶ್ರೀಕಂಠಮೂರ್ತಿ, ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶ್ರೀಮತಿ ಸ್ವರ್ಣಪ್ರಭಾಕರ್ ಹಾಗೂ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಕುಸುಮಾಕರ ದೇಸಾಯಿ ಮತ್ತು ಇತ್ತೀಚೆಗೆ ರಾಜೀನಾಮೆಯಿತ್ತು ಜಿಲ್ಲಾ ಪರಿಷತ್ತಿಗೆ ಸ್ಪರ್ಧಿಸಿ ಗೆದ್ದಿರುವ ದೇವನಹಳ್ಳಿಯ ವಕೀಲ ನಾರಾಯಣ ಸ್ವಾಮಿಯವರು ಆಹಾರ ಸರಬರಾಜು ಮಂಡಳಿಯ

ಅಧ್ಯಕ್ಷರಾಗಿದ್ದರು. ಇವರೆಲ್ಲ ಒಂದು ನಿರ್ದಿಷ್ಟ ತತ್ವದ ಚೌಕಟ್ಟಿನಲ್ಲಿ ತಮ್ಮ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಬಯಸುತ್ತಿದ್ದಾರೆ. ಹಾಗೆಯೇ ಇದರ ಮತ್ತೊಂದು ಮುಖ್ಯ ಉದ್ದೇಶವೆಂದರೆ ಅಧಿಕಾರಶಾಹಿಯನ್ನು ದುರ್ಬಲಗೊಳಿಸಿ ಪ್ರಜಾತಂತ್ರವನ್ನು ಗಟ್ಟಿಗೊಳಿಸುವುದೇ ಆಗಿರುತ್ತೆ. ಇದನ್ನು ಸರ್ಕಾರ ವಕ್ರಗಣ್ಣಿನಿಂದ ನೋಡುವ ಅಗತ್ಯವಿಲ್ಲ.

ಒಂದು ಮಧ್ಯಾಹ್ನ

ಬಿಸಿಲು ಅಂಗಡಿ ತೆರೆದಿದೆ
ತೆಂಗಿನ ಸಾಲು ನರ್ತಿಸಿದೆ
ಮನೆಗಳು ಮರಗಳು ಸೂರ್ಯನಿಗೆ ಹೆದರದೆ ನಿಂತಿವೆ

ಗಾಳಿರಾಯನ ಆಟಾಟೋಪಕ್ಕೆ ಗಿಡಗಳು
ಭಯದಲ್ಲಿ ನಡುಗುತ್ತಿವೆ

ಮುಗಿಲಗಲ ನೀಲ ಮೌನಕ್ಕೆ ತಲೆಬಾಗಿ
ಛತ್ರಿ ಚಾಮರ ಹರಡಿದೆ

ಒಣಗಿ ಹಾಕಿದ ಬಟ್ಟೆಗಳು ಗಾಳಿಪಟಗಳಾಗಿ
ಆಕಾಶದೊಳಗೆ ಜೂಜಿನ ಕುದುರೆಗಳಾಗಿವೆ

ನಿಶ್ಚಲ ಮಹಲುಗಳು ಬೆಟ್ಟಗಳಾಗಿವೆ
ಅಳುಕದೆ ನಿಂತಿವೆ ತಲೆಯೆತ್ತಿ

ಹಕ್ಕಿ ರೆಕ್ಕೆಗಳು
ನೆಲದ ಸಂದೇಶ ಮುಗಿಲಿಗೆ ಮುಟ್ಟಿಸಿ ಮರಳುತ್ತಿವೆ

ಮಣ್ಣಿನ ಜನದ ಅಳಲಿನ ತಾನ ಹಾಡುವ ಗಾನಕ್ಕೆ
ಮನ ಮನದ ಅನುಕಂಪ ಕೊರಲಿನ ರಾಗ ತೆಗೆದಿವೆ.

ದೊಡ್ಡರಂಗೇಗೌಡ.

"ಕಾವ್ಯಶ್ರೀ", ದತ್ತಾತ್ರೇಯ ಆಶ್ರಮದ ಹತ್ತಿರ, ವಿಶ್ವೇಶ್ವರಯ್ಯ ಬಡಾವಣೆ, ಹೊಸಕೋಟೆ, ಬೆಂಗಳೂರು ಜಿಲೆ -562 114.

'ಶೂದ್ರ' ಸಂಚಿಕೆಗೆ ನಮ್ಮ ಅಭಿಮಾನದ ಶುಭಾಶಯಗಳು

★ ★

(ಬಾಡಿಗೆಗೆ ಕಾರುಗಳು ಮತ್ತು ವ್ಯಾನ್‌ಗಳು ದೊರೆಯುತ್ತವೆ)

ಶ್ರೀಧರ ಟ್ರಾವೆಲ್ಸ್
ನಂ. 6, ಅ.ನ.ಕೃ. ರಸ್ತೆ, ವಿ. ವಿ. ಪುರಂ,
ಮಿನರ್ವ ವೃತ್ತದ ಬಳಿ, ಬೆಂಗಳೂರು-560 004

ಮಾಲೀಕರು : ಕೆ. ಸೋಮಶೇಖರ್.

ದೂರವಾಣಿ : 601458 (ಕಛೇರಿ)
622769 (ಮನೆ)

'ಶೂದ್ರ'ಕ್ಕೆ ಹಾರ್ದಿಕ ಶುಭಾಶಯಗಳು

ಎಸ್. ನಾಗರಾಜ್
ಹೋಟೆಲ್ ಸಂದೇಶ್,
ನಜರಬಾದ್
ಮೈಸೂರು.

ನಿಮ್ಮ ಹತ್ತಿರಕ್ಕೆ ನೀರು ತರಲು ನಾವೆಷ್ಟು ದೂರ ಹೋಗಿದ್ದೇವೆ!

ರಾಜ್ಯಾದ್ಯಂತ ೯೮,೪೯೬ ಕೊಳವೆ ಬಾವಿಗಳು ೨೪ ದಶಲಕ್ಷ ಬಾಯಾರಿದ ಜನಕ್ಕೆ ನಿರೊದಗಿಸುತ್ತಿವೆ!

ಕುಡಿಯುವ ನೀರು ಪ್ರತಿಯೊಬ್ಬ ಮನುಷ್ಯನಿಗೂ ಅತ್ಯಾವಶ್ಯಕ. ಆದ್ದರಿಂದಲೇ ಕರ್ನಾಟಕ ಸರ್ಕಾರವು ಕುಡಿಯುವ ನೀರೊದಗಿಸುವ ಯೋಜನೆಯನ್ನು ಆದ್ಯ ಗಮನದಲ್ಲಿರಿಸಿಕೊಂಡಿದೆ.

ಸರ್ಕಾರವು (ಪಟ್ಟಿಯಲ್ಲಿರುವಂತೆ) ದಿನಕ್ಕೆ 27 ಕೊಳವೆ ಬಾವಿಗಳನ್ನು ಕೊರೆಯುವ ವೇಗ ಗತಿಯಲ್ಲಿ ಕೇವಲ ನಾಲ್ಕು ವರ್ಷಗಳಲ್ಲಿ 50,000 ಬಾವಿಗಳನ್ನು ತೋಡಿದೆ. ಈ ಸಂಖ್ಯೆಯು ಸ್ವಾತಂತ್ರ್ಯಾನಂತರದಿಂದ ಮಾರ್ಚಿ 31, 1982 ರವರೆಗೆ ಕೊರೆಯಲಾದ ಬಾವಿಗಳ ಸಂಖ್ಯೆಗೆ ಬಹುತೇಕ ಸಮೀಪ! ಇಂದು 98, 496 ಕೊಳವೆ ಬಾವಿಗಳು ಪ್ರತಿದಿನ 24 ದಶಲಕ್ಷ ಜನರಿಗೆ ನೀರೊದಗಿಸುತ್ತಿವೆ. ಇವು ಕರ್ನಾಟಕದ ಬಹಳಷ್ಟು ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಿವೆ. ಇಷ್ಟರಲ್ಲೇ ಇನ್ನುಳಿದ ಶೇಕಡ 20 ಹಳ್ಳಿಗಳಲ್ಲೂ ಕೊಳವೆ ಬಾವಿಗಳಾಗಿ ನೀರು ತರಲಿವೆ. ರಾಷ್ಟ್ರದ 6 ಲಕ್ಷ ಕೊಳವೆ ಬಾವಿಗಳ ಪೈಕಿ 1:6 ಭಾಗ (1 ಲಕ್ಷ) ಬಾವಿಗಳು ಕರ್ನಾಟಕದಲ್ಲಿವೆ.

ಇಂತಹ ಸಾಧನೆಯ ಮೊದಲ ರಾಜ್ಯ ಕರ್ನಾಟಕವಾಗಿದೆ.

ಭರವಸೆಯನ್ನು ಕಾರ್ಯರೂಪಗೊಳಿಸುವುದು ಕಠಿಣ ಪರಿಶ್ರಮದ ಕೆಲಸ. ಅಂತಹ ಪರಿಶ್ರಮವನ್ನು ಸ್ವೀಕರಿಸಲು ಸರ್ಕಾರವು ಸದಾ ಸಿದ್ಧವೆಂದು ಈ ಸಾಧನೆ ನಿರೂಪಿಸುತ್ತದೆ.

1982-1986ರ ಅವಧಿಯಲ್ಲಿ ಕರ್ನಾಟಕದಲ್ಲಿ ಕೊರೆಯಲಾದ ಬಾವಿಗಳ ಸಂಖ್ಯಾ ವಿವರ

ಮಾರ್ಚಿ 31, 1982ರವರೆಗೆ-47,726

ವರ್ಷ	ಬಾವಿಗಳ ಸಂಖ್ಯೆ
1982-83	9,978
1983-84	15,218
1984-85	13,830
1985-86	10.294
1986-87	1,450
	50,770

ಕುಡಿಯುವ ನೀರಿನ ಪೂರೈಕೆ ನಮ್ಮ ವಾಗ್ದಾನ

ಕರ್ನಾಟಕ ವಾರ್ತೆ

ಮೀನುಗಾರರಿಗೆ ಸಾಮೂಹಿಕ ವಿಮಾ ಯೋಜನೆಯ ಪ್ರೀಮಿಯಂ ವಿನಾಯಿತಿ

ಕಡಲಾಳದಿಂದ ಮತ್ಸ್ಯ ಸಂಪತ್ತನ್ನು ಅರಸಿ ತರುವ ಧೀರರಿಗೆ ಕರ್ನಾಟಕ ಸರ್ಕಾರದ ಸಹಾಯ ಹಸ್ತ

ರಾತ್ರಿ ಹಗಲು ಪ್ರಕೃತಿಯ ಶಕ್ತಿಗಳನ್ನೆದುರಿಸಿ ಸಮುದ್ರದಾಚೆಗೆ ಹೋಗಿ, ತೆರೆಗಳೊಡನೆ ಹೋರಾಡಿ ಜೀವನ ನಡೆಸುವ ಮೀನುಗಾರರ ಬಗ್ಗೆ ಕರ್ನಾಟಕ ಸರ್ಕಾರ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತಿದೆ. 1983–84ರಿಂದ ಜಾರಿಗೆ ತರಲಾಗಿರುವ ಒಳನಾಡು ಹಾಗೂ ಕರಾವಳಿ ಮೀನುಗಾರರ ಸಾಮೂಹಿಕ ವಿಮಾ ಯೋಜನೆಯ ಪ್ರೀಮಿಯಂ ಹಣದಿಂದ ಈ ವರ್ಷದಲ್ಲಿ, ಅಂದರೆ 1-5-86ರಿಂದ 30-4-87ರವರೆಗೆ, ಮೀನುಗಾರರನ್ನು ಸಂಪೂರ್ಣವಾಗಿ ಮುಕ್ತಗೊಳಿಸುತ್ತಿದೆ.

ಈ ವರ್ಷದಲ್ಲಿ 57,768 ಮೀನುಗಾರರ ಪರವಾಗಿ ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ವಿಮಾ ಕಂಪನಿಗೆ ತಲಾ ರೂ. 9ರಂತೆ ಪ್ರೀಮಿಯಂ ಹಣ ತುಂಬಲಾಗಿದೆ.

ಈ ಸಾಮೂಹಿಕ ವಿಮಾ ಯೋಜನೆಯಲ್ಲಿ ಆಕಸ್ಮಿಕ ಅಪಘಾತಕ್ಕೀಡಾಗಿ ಅಂಗವಿಕಲರಾದ ಮೀನುಗಾರರಿಗೆ ಅಥವಾ ಮೃತರಾದ ಮೀನುಗಾರರ ಅವಲಂಬಿಗಳಿಗೆ ರೂ. 15,000 ವಿಮಾ ಹಣವನ್ನು ನೀಡಲಾಗುವುದು ; ಅಪೂರ್ಣ ಅಂಗವಿಕಲರಾದಲ್ಲಿ ಮೀನುಗಾರರಿಗೆ ರೂ. 7,500 ವಿಮಾ ಹಣ ನೀಡಲಾಗುವುದು. ಈಗ ಮೀನುಗಾರರು ನಿಶ್ಚಿಂತರಾಗಿ ಮೀನು ಹಿಡಿಯಲು ಹೋಗಬಹುದು. ಅಕಸ್ಮಾತ್ ಏನಾದರೂ ಅನಾಹುತವಾದಲ್ಲಿ ಅವರ ಕುಟುಂಬಗಳು ದಾರಿಪಾಲಾಗಬೇಕಾಗಿಲ್ಲ. ಅವರ ಕಷ್ಟಕಾಲದಲ್ಲಿ ಈ ವಿಮಾ ಹಣ ಅವರಿಗೆ ಸಹಾಯ ನೀಡುತ್ತದೆ.

ಒಳನಾಡು ಹಾಗೂ ಕರಾವಳಿ ಮೀನುಗಾರಿಕಾ ಸಹಕಾರಿ ಸಂಘಗಳ ಸದಸ್ಯರಾಗಿರುವ ಎಲ್ಲ ಮೀನುಗಾರರು ಈ ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆಯುವರು. ಹೆಚ್ಚು ಹೆಚ್ಚು ಮೀನುಗಾರರು ಈ ಸಹಕಾರಿ ಸಂಘಗಳ ಸದಸ್ಯರಾಗಬೇಕೆಂದು ಕೋರಲಾಗಿದೆ. ಸ್ಥಳೀಯ ಮೀನುಗಾರಿಕಾ ಅಧಿಕಾರಿಗಳಿಂದ ಈ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯಬಹುದು.

ಬನ್ನಿ, ಮೀನುಗಾರಿಕಾ ಸಹಕಾರಿ ಸಂಘದ ಸದಸ್ಯರಾಗಿ ವಿಮಾ ಯೋಜನೆಯ ಪ್ರಯೋಜನ ಪಡೆಯಿರಿ.

'ಕರ್ನಾಟಕ ವಾರ್ತೆ'

With Best Compliments From

JAGDALE GROUP OF COMPANIES

- BASIC DRUGS
- DISTILLERIES
- PHARMACEUTICALS
- FOOD AND BEVERAGES
- PERCISION MACHINE TOOLS
- RESEARCH AND DEVELOPMENT
- FARM PRODUCTS

ADMINISTRATIVE OFFICES :

35 & 36, Sampangi Tank Road
BANGALORE-560 027

Telphone : 221987 (3 lines) Telex : 0845-8213
224640 & 224641

FNP/KRNU/72 No. M (2) PRB 211/747/3

Shoodra Kannada Monthly

ಮಾರ್ಚ್ 87ರ ಸಂಚಿಕೆಯಲ್ಲಿ :

ಕೆ. ವಿ. ತಿರುಮಲೇಶ್ —ರಾಜೇಂದ್ರ ಚೆನ್ನಿ —ಶ್ರೀಧರ ಪಿಸ್ಸೆ
ಎಸ್. ನಟರಾಜ್ —ಸಂಧ್ಯಾ ಬಂದಗದ್ದೆ —ಪ್ರಭಾವತಿ —ಪ್ರೊ. ಶೆಟ್ಟಾರ್
ಎ. ಆರ್. ನಾಗಭೂಷಣ –ಶೈಲೇಂದ್ರ ಬಂದಗದ್ದೆ—ಕೆ. ಪುಟ್ಟಯ್ಯ.

ಕನ್ನಡದ ಮಹತ್ವಪೂರ್ಣ ಕವಿ ಗಂಗಾಧರ ಚಿತ್ತಾಲ ಹಾಗೂ ಸಮಾಜವಾದಿ ಹೋರಾಟಗಾರ ರಾಜನಾರಾಯಣರ ನಿಧನಕ್ಕೆ ಶೂದ್ರ ತನ್ನ ಅತೀವ ಸಂತಾಪವನ್ನು ವ್ಯಕ್ತಪಡಿಸುತ್ತೆ.



Printed at : Shalivahan Printers, Bangalore-53
Editor & Publisher : M. SRINIVAS